ರಂಜನೆ ಬೋಧನೆ ಪ್ರಚೋದನೆ

# ಲಂಕೇಶ್

ಜನವರಿ 7, 2009 ರೂ. 12/-

# ಭಾರತ - ಪಾಕ್ ಯುದ್ಧ



## ಕನ್ನಡ ವೀರರ ದ್ರೋಹ!



ಟ್ರಾವೆಲ್ಸ್, ಗಾರ್ಮೆಂಟ್ಸ್, ಐಟಿ-ಬಿಟಿ, ಮೀಡಿಯಾ, ರಿಯಲ್ ಎಸ್ಟೇಟ್ **ದಿವಾಳಿ**



## ಬಾಲಿಶ ಮುನಿಸು

## ಪೆದ್ದಗುಂಡನಿಗೆ ಗೂಸಾ





## ಭಾರತವೆಂಬ ಧಾರ್ಮಿಕ ಕಾರ್ಯಾಗಾರ




## ಎಲ್.ಬಸವರಾಜು ಸಂತೋಷದ ಆಯ್ಕೆ

# ಭಾರತ ಧರ್ಮಗಳ ಕಾರ್ಯಾಗಾರವಾಗಬೇಕು

## ಅನಂತಮೂರ್ತಿಯವರ ಸಂದೇಶ

ಈ ದೇಶವನ್ನು ದೇವರ ಹುಡುಕಾಟದ ದೊಡ್ಡ ಕಾರ್ಯಾಗಾರ ಮಾಡಬೇಕು. ಅದಾದರೆ ಎಲ್ಲರಿಗೂ ಸಂತೋಷ. ಅದು ಆಗದಂತೆ ಮಾಡುವವರು ದೈವ ವಿರೋಧಿಗಳು-ಧರ್ಮ ವಿರೋಧಿಗಳು-ಹೃದಯದಲ್ಲಿ ದೇವರಿಲ್ಲದವರು. ಏಕೆಂದರೆ ಅವರ ಹೃದಯಗಳಲ್ಲಿ ಪ್ರೀತಿ ಇಲ್ಲ. ಅಲ್ಲಿ ಕುದಿಯುವ ಅಸೂಯೆಯೇ ಯಜ್ಞ-ಯಾಗಾದಿಗಳನ್ನು ಮಾಡೋದಕ್ಕೆ ಕಾರಣ. ಇವತ್ತೇನಾದರೂ ಬುದ್ಧ-ಬಸವ-ಅಲ್ಲಮರಿದ್ದರೆ ಅವರೂ ಇದೇ ಮಾತು ಹೇಳುತ್ತಿದ್ದರೆಂಬ ನಂಬಿಕೆ ನನಗಿದೆ.



ಭಾರತಕ್ಕೆ ಇದು ಬಹಳ ಕಷ್ಟದ ಕಾಲ. ಸಾವಿರಾರು ವರ್ಷಗಳಿಂದ ಬೆಳೆದುಬಂದ ನಾಗರಿಕತೆ ಈಗ ಸ್ಥಿತ್ಯಂತರಗೊಳ್ಳುತ್ತಿದೆ. ಅದಕ್ಕೆ ಕಾರಣ ನಮ್ಮ ಪ್ರಜಾತಂತ್ರ ಬಹುಸಂಖ್ಯಾತರ ಪ್ರಜಾತಂತ್ರವಾಗುವುದಕ್ಕೆ ಪ್ರಯತ್ನ ಮಾಡುತ್ತಿರುವುದು. ಬಹುಸಂಖ್ಯಾತರ ಪ್ರಜಾತಂತ್ರವಾಗಬೇಕಾದರೆ ಬಹುಸಂಖ್ಯಾತರಾದ ಹಿಂದೂಗಳಲ್ಲಿರುವ ಎಲ್ಲಾ ಧರ್ಮಗಳ ಮೇಲಿನ ಪ್ರೇಮ ಕಡಿಮೆಯಾಗಬೇಕು ಮತ್ತು ಅದರಲ್ಲಿರುವ ಸಹಿಷ್ಣುತೆಯನ್ನು ಕಡಿಮೆ ಮಾಡಬೇಕು. ಆ ರೀತಿಯ ಕೆಲಸವನ್ನು ಕೆಲವರು ಮಾಡುತ್ತಿದ್ದಾರೆ. ಇದೊಂದು ಓಟಿನ ರಾಜಕಾರಣವಷ್ಟೇ. ಅದು ದೇಶಕ್ಕೂ ಒಳ್ಳೆಯದಲ್ಲ, ಕೊನೆಗೆ ನಮಗೂ ಒಳ್ಳೆಯದಲ್ಲ.

ಈ ದೇಶ ಎಲ್ಲ ಧರ್ಮಗಳ ಕಾರ್ಯಾಗಾರ. ಉದಾಹರಣೆಗೆ ಬಾದಾಮಿ-ಐಹೊಳೆಯನ್ನು ನೋಡಿ. ಅಲ್ಲಿ ಎಷ್ಟು ರೀತಿಯ ದೇವಸ್ಥಾನಗಳನ್ನು ಕಟ್ಟಬಹುದು ಎಂದು ಹಲವು ರೀತಿಯ ಪ್ರಯೋಗಗಳನ್ನು ಮಾಡಿದ್ದಾರೆ. ನಮ್ಮ ದೇಶ ಇಂದು ದೊಡ್ಡ ಕಾರ್ಯಾಗಾರ. ಜಗತ್ತಿನಲ್ಲೇ ಇಂತಹ ಇನ್ನೊಂದು ಕಾರ್ಯಾಗಾರ ಇಲ್ಲ, ಅಲ್ಲದೆ ಇಡೀ ಭಾರತ ಧರ್ಮದ ಕಾರ್ಯಾಗಾರ. ಏಕೆಂದರೆ ಇಲ್ಲಿ ನಡೆದಿರುವಂತಹ ಪ್ರಯೋಗಗಳು ಜಗತ್ತಿನ ಯಾವ ಭಾಗದಲ್ಲೂ ನಡೆದಿಲ್ಲ. ಇದರಿಂದಲೇ ಇದು ಬಹಳ ದೊಡ್ಡ ನಾಗರಿಕತೆ.

ಇಲ್ಲಿ ದೇವರನ್ನು ಸಾಕಾರ ಅಂದುಕೊಂಡರೆ ಅವನಿಗೆ ಶಿವನ ಆಕಾರವೋ, ವಿಷ್ಣುವಿನ ಆಕಾರವೋ, ಇದಾವುದೂ ಅಲ್ಲದೆ ನಾಲ್ಕು ವೇದಗಳನ್ನು ನಾಲ್ಕು ನಾಯಿಗಳನ್ನಾಗಿ ಮಾಡಿಕೊಂಡಂತಹ ದತ್ತಾತ್ರೇಯನ ಅವತಾರವೂ... ಹೀಗೆ ಹಲವು ರೀತಿಯಲ್ಲಿ ದೇವರನ್ನು ಸಾಕಾರ ಮಾಡಿಕೊಂಡಿದ್ದಾರೆ. ಇನ್ನೂ ಮಹಾನುಭಾವರು ದೇವರು ಸಾಕಾರವಲ್ಲ, ಅವನು ನಿರಾಕಾರ ಅಂದಿದ್ದಾರೆ. ನಿರಾಕಾರದ ದೇವರನ್ನು ಹುಡುಕುವಾಗ ದೇವರಿಗೆ ಆಕಾರ ಇಲ್ಲ, ಆವನು ಯಾವ ಆಕಾರ ಬೇಕಾದರೂ ಸ್ವೀಕರಿಸುತ್ತಾನೆ ಅಂದಿದ್ದಾರೆ. ಹಾಗಾಗಿ ಅವನ ಆಕಾರವನ್ನು ಊಹಿಸಲಿಕ್ಕೆ ನಮಗೆ ಸಾಧ್ಯವಿಲ್ಲವೆಂದಿದ್ದಾರೆ. ಅದು ಇಸ್ಲಾಂ. ಇಸ್ಲಾಮಿನಲ್ಲಿ ದೇವರನ್ನು ಸಗುಣ ದಯಾಮಯಿ ಎಂದು ಭಾವಿಸಿದ್ದಾರೆ. ನಮ್ಮಲ್ಲಿ ಸಗುಣ ಅಂತಲೂ ನಿರ್ಗುಣ ಅಂತಲೂ ಭಾವಿಸುವವರಿದ್ದಾರೆ. ಬುದ್ಧನಿಗಂತೂ ದೇವರ ಅಗತ್ಯವೇ ಇಲ್ಲ. ಜೈನರಿಗೂ ದೇವರ ಅಗತ್ಯ ಇಲ್ಲ. ದೇವರ ಅಗತ್ಯವೇ ಇಲ್ಲದ ಮನುಷ್ಯ ಚಲನಶೀಲವಾಗಿ ಬೆಳೀತಾ, ಮನುಷ್ಯನೇ ದೇವರಾಗುವಂತಹ ಸ್ಥಿತಿಯನ್ನು ಇಲ್ಲಿ ಕೆಲವರು ಕಲ್ಪಿಸಿದ್ದಾರೆ. ಶಂಕರಾಚಾರ್ಯರೂ ಹಾಗೆ ಕಲ್ಪಿಸಿದ್ದಾರೆ. ಇಂತಹ ಹಿಂದೂ ನಾಗರಿಕತೆಯನ್ನು ವಿರೂಪಗೊಳಿಸುವುದು ಹಿಂದೂ ನಾಗರಿಕತೆಗೆ ನಾವು ಮಾಡುತ್ತಿರುವ ದೊಡ್ಡ ಅಪರಾಧ. ಅದು ಮುಸ್ಲಿಮರ ವಿರುದ್ಧ ಮಾತ್ರ ಮಾಡುತ್ತಿರುವ ಅಪರಾಧವಲ್ಲ, ಬದಲಾಗಿ ನಮ್ಮ ವಿರುದ್ಧವೇ ನಾವು ಮಾಡಿಕೊಳ್ಳುತ್ತಿರುವ ಅಪರಾಧ. ನಮ್ಮೆಲ್ಲರ ಪೂರ್ವಿಕರ ಕನಸನ್ನು ನಾವಿಂದು ನಾಶ ಮಾಡುತ್ತಿದ್ದೇವೆ. ಅದನ್ನು ಮಾಡಕೂಡದು ಅಂತಲೇ ಬಾಬಾಬುಡನ್‌ಗಿರಿಯಲ್ಲಿ ದೊಡ್ಡ ಆಂದೋಲನ ನಡೆಯುತ್ತಿರುವುದು.

ಇಸ್ಲಾಂ ಧರ್ಮವನ್ನು ಪೂಜಿಸುವ ಮುಸ್ಲಿಮರು ಅಮೆರಿಕದಲ್ಲೂ ಇದ್ದಾರೆ. ಆದರೆ ಅವರು ಅಲ್ಲಿ ಹೊರಗಿನವರಾಗಿದ್ದಾರೆ. ಯುರೋಪಿನಲ್ಲೂ ಮುಸ್ಲಿಮರು ಹೊರಗಿನಿಂದ ಬಂಧವರಾಗಿದ್ದಾರೆ. ಆದರೆ ಭಾರತದಲ್ಲಿರುವ ಮುಸ್ಲಿಮರು ಹೊರಗಿನವರಲ್ಲ, ಅವರು ನಮ್ಮವರೇ. ಅವರು ಇಲ್ಲೇ ಹುಟ್ಟಿ ಬೆಳೆದವರು, ಅವರ ಮುತ್ತಾತನ ಕಾಲದಿಂದ ಇಲ್ಲಿರುವವರು. ಈ ನೆಲವಲ್ಲದೆ ಅವರಿಗೆ ಬೇರೆ ನೆಲೆ ಇಲ್ಲ. ದುರದೃಷ್ಟವಶಾತ್ ಪಾಕಿಸ್ತಾನ ಜನ್ಮತಾಳಿತು. ಇದರಿಂದ ಭಾರತದ ಮುಸ್ಲಿಮರಿಗೆ ಬಹಳ ಅನ್ಯಾಯವಾಯಿತು. ಯಾಕೆಂದರೆ ಅವರಿಗೆ ಪಾಕಿಸ್ತಾನದಲ್ಲಿ ಜಾಗ ಇಲ್ಲ, ಭಾರತದಲ್ಲಿ ಅವರನ್ನು ಸಂಶಯದಿಂದ ನೋಡುತ್ತಿದ್ದೇವೆ. ಇದು ಹೀಗೇ ಮುಂದುವರೆದರೆ ಭಾರತಕ್ಕೆ ಒಳ್ಳೆಯದಲ್ಲ. ಯಾಕೆಂದರೆ, ಅಲ್ಪಸಂಖ್ಯಾತರ ಮತೀಯತೆ-ಅಂಧಶ್ರದ್ಧೆ-ಫಂಡಮೆಂಟಲಿಸಂ ಅವರನ್ನೇ ನಾಶ ಮಾಡಿದರೆ, ಬಹುಸಂಖ್ಯಾತರ ಮತೀಯತೆ-ಅಂಧಶ್ರದ್ಧೆ-ಫಂಡಮೆಂಟಲಿಸಂ ದೇಶವನ್ನೇ ನಾಶಮಾಡುತ್ತದೆ.


ಮುಸ್ಲಿಮರೇನಾದರೂ ಅವರ ಮತಶ್ರದ್ಧೆಯನ್ನು ಹೆಚ್ಚಿಸಿಕೊಂಡರೆ ಅವರು ಕಷ್ಟಕ್ಕೆ ಸಿಕ್ಕಿಹಾಕೊಳ್ಳುತ್ತಾರೆ. ಆದರೆ ಹಿಂದೂಗಳು ಜಾಸ್ತಿ ಮಾಡಿದರೆ ನಾವು ಮಾತ್ರ ಸಿಕ್ಕಿಹಾಕಿಕೊಳ್ಳುವುದಿಲ್ಲ, ದೇಶವನ್ನೇ ಕಷ್ಟಕ್ಕೆ ಸಿಕ್ಕಿಹಾಕಿಸುತ್ತೇವೆ. ಆದ್ದರಿಂದಲೇ ನಾವು ಕೋಮು ಸೌಹಾರ್ದಕ್ಕಾಗಿ ಕೆಲಸ ಮಾಡುತ್ತಿರುವುದು. ಯಾರ್‍ಯಾರು ಕೋಮು ಸೌಹಾರ್ದಕ್ಕಾಗಿ ಕೆಲಸ ಮಾಡುತ್ತಾರೋ ಅವರೇ ನಿಜವಾದ ದೇಶಭಕ್ತರು. ಅವರ ವಿರುದ್ಧ ಇರುವವರು ಈ ದೇಶವನ್ನು ಚೂರೂ ಪ್ರೀತಿಸದೆ ಇರುವವರು. ಪ್ರೀತಿಸುವವರಾದರೆ ಈ ದೇಶದಲ್ಲಿ ನಡೆಯುತ್ತಿರುವ ಕಾರ್ಯಾಗಾರವನ್ನು, **Great Experiments** ಗಳನ್ನು, ಹಲವು ರೀತಿಯಲ್ಲಿ ದೇವರನ್ನು ಕಲ್ಪಿಸಿಕೊಳ್ಳುವ ಶಕ್ತಿಯನ್ನು ಉಳಿಸಿಕೊಳ್ಳಬೇಕು. ಯಾವ ದೇಶದಲ್ಲೂ ದೇವರನ್ನು ಇಷ್ಟು ಬಗೆಯಲ್ಲಿ ಚಿಂತನೆ ಮಾಡಿಕೊಂಡಿದ್ದಿಲ್ಲ; ದೇವರು ಇದ್ದಾನೋ? ಇಲ್ಲವೋ? ಅನ್ನೋ ಚಿಂತನೆ ನಡೆದಿರುವುದು ಈ ದೇಶದಲ್ಲೇ. ಇದು ಇವತ್ತಿಗೂ ನಡೆಯುತ್ತಿದೆ. ಬುದ್ಧನಿಗೆ ದೇವರು ಇದ್ದಾನೆಯೇ ಎಂಬ ಪ್ರಶ್ನೆಯೇ ಅಪ್ರಸ್ತುತ. ದುಃಖ ಇದೆ, ಮೊದಲು ಅದರಿಂದ ಬಿಡುಗಡೆ ಹೊಂದಬೇಕು ಎಂಬ ಬುದ್ಧನ ಆಲೋಚನೆ ಬಹಳ ಮಹತ್ತರವಾದದ್ದು, ಇಡೀ ಪ್ರಪಂಚವೇ ಬೌದ್ಧ ಧರ್ಮದೆಡೆಗೆ ಹೋಗುತ್ತಿದೆ. ಆ ರೀತಿಯ ಆಲೋಚನೆಯನ್ನು ಬುದ್ಧ ಮಾಡಿದ್ದಾನೆ. ಏಕೆಂದರೆ ದೇವರ ಅಗತ್ಯವಿಲ್ಲದ ಆಧ್ಯಾತ್ಮ ಅದು.

ನಮ್ಮಲ್ಲಿ ಬಹಳಷ್ಟು ಜನರಿಗೆ ದೇವರ ಆಗತ್ಯವಿಲ್ಲದಿರುವ ಆಧ್ಯಾತ್ಮ ಬೇಕಿದೆ. ಅದಕ್ಕಾಗಿಯೇ ಕೋಮು ಸೌಹಾರ್ದ ಬೇಕು ಎಂದು ಹೇಳುತ್ತಿರುವುದು. ಆದರೆ ದೇವರ ಅಗತ್ಯವಿದ್ದು ಪೂಜಿಸುವವನಿಗೆ ಸಂಪೂರ್ಣ ಅವಕಾಶವಿರಬೇಕು. ಅವರ ಪೂಜೆ ಪ್ರೀತಿ ಆಳವಾದದ್ದಾದರೆ ಅವರೂ ಕೂಡ ದೇವರಿಂದ ಮುಕ್ತರಾಗುತ್ತಾರೆ. ನಮ್ಮಲ್ಲಿಯೇ ದೇವರಿದ್ದಾನೆ ಎನ್ನುವುದು ಗೊತ್ತಾಗುತ್ತದೆ. ಇಸ್ಲಾಂನಲ್ಲಿ ಆದದ್ದೇ ಹಾಗೆ. ದೇವರೆಲ್ಲೋ ಬೇರೆ ಕಡೆ ಇದ್ದಾನೆ ಅಂತ ತಿಳ್ಕೊಂಡವರು ಅವರ ಅನುಭಾವದಿಂದ ದೇವರು ಇಡೀ ಪ್ರಪಂಚದಲ್ಲಿದ್ದಾನೆ, ನನ್ನೊಳಗೂ ಇದ್ದಾನೆ, ನಾನು ಅವನ ಹತ್ತಿರ ಹೋಗಿದ್ದೀನಿ ಅಂತ ಯೋಚನೆ ಮಾಡೋದಕ್ಕೆ ಶುರುಮಾಡಿದರು. ಹಾಗೆ ಯೋಚನೆ ಮಾಡುವುದಕ್ಕೆ ಶುರುಮಾಡಿದ ತಕ್ಷಣ ಹಿಂದೂಗಳಿಗೆ ಹತ್ತಿರವಾಗಿಬಿಟ್ಟರು. ಜಗತ್ತಿನಲ್ಲಿ ಎಲ್ಲೂ ಇಸ್ಲಾಂ ಭಾರತದಲ್ಲಿರುವಷ್ಟು ಸುಂದರವಾಗಿಲ್ಲ, ಇಸ್ಲಾಂ ಭಾರತದಲ್ಲಿ ಶ್ರೀಮಂತವಾಗಿರುವಷ್ಟು ಸೌದಿ ಅರೇಬಿಯಾದಲ್ಲಿ ಶ್ರೀಮಂತವಾಗಿಲ್ಲ, ಏಕೆಂದರೆ ಇಲ್ಲಿ ಇಸ್ಲಾಂ ಇನ್ನೊಂದು ಧರ್ಮದ ಜೊತೆ ಬದುಕಬೇಕಾಗಿ ಬಂತು. ಸತತವಾದ ಸಂವಾದ-ಘರ್ಷಣೆಗಳೂ ನಡೆದವು. ಕೆಲವು ಸಾರಿ ಘರ್ಷಣೆಗಳೂ ನಡೆದವು. ಘರ್ಷಣೆಗಳು ಸಂವಾದದಲ್ಲಿ ಕೊನೆಗೊಳ್ಳುವುದರ ಮೂಲಕ ಸೂಫಿಗಳು ಹುಟ್ಟಿಕೊಂಡರು, ಸೂಫಿ ಧರ್ಮ ಹುಟ್ಟಿಕೊಂಡಿತು. ಅದು ಹಿಂದೂಗಳಿಗೂ ಹತ್ತಿರವಾಯಿತು; ಮುಸ್ಲಿಮರಿಗೂ ಹತ್ತಿರವಾಯಿತು. ಇದೊಂದು ವಿಚಿತ್ರ. ಇದನ್ನು ಸನಾತನಿಗಳಾದ ಹಿಂದೂಗಳು, ಸನಾತನಿಗಳಾದ ಮುಸ್ಲಿಮರು ಇಬ್ಬರೂ ಒಪ್ಪಿಕೊಳ್ಳುವುದಿಲ್ಲ, ಅವರಿಬ್ಬರಿಗೂ ಅವರವರ ಮಠಗಳು ಬೇಕು. ಅವರವರ **Priest** ಬೇಕು. ಅಂತಹ ಒಂದು **Experiment** ನಡೆದಂತಹ ಈ ಬಾಬಾಬುಡನ್ ಗಿರಿ ಪ್ರದೇಶವನ್ನು ಜಗತ್ತಿನ ಸುಂದರವಾದ ಪ್ರದೇಶ ಎಂದು ಕರೆಯಬೇಕು. ಅದನ್ನು ಉಳಿಸಿಕೊಳ್ಳಬೇಕು.

ಹಿಂದೂ ಧರ್ಮದ ಇತಿಹಾಸವನ್ನು ನೋಡಿದರೆ ಬಹಳ ದೊಡ್ಡದೊಡ್ಡವರೆಲ್ಲ ಮತಾಂತರಿಗಳು. ಯಜ್ಞ-ಯಾಗಗಳನ್ನು ವಿರೋಧಿಸಿದವರು. ಅದಕ್ಕಾಗಿ ತೀರ ಖರ್ಚು ಮಾಡುವುದನ್ನು ವಿರೋಧಿಸಿದ್ದರು. ಮೊದಲು ಅದನ್ನು ವಿರೋಧಿಸಿದವನು ಶ್ರೀಕೃಷ್ಣ. ಆತ ಯಜ್ಞ ಮಾಡುವುದಕ್ಕೆ ಬಿಡಲಿಲ್ಲ, ಆಗ ಇಂದ್ರನಿಗೆ ಸಿಟ್ಟುಬಂದು ಸಿಕ್ಕಾಪಟ್ಟೆ ಮಳೆ ಸುರಿಸುತ್ತಾನೆ. ಆಗ ಕೃಷ್ಣ ಗೋವರ್ಧನ ಗಿರಿಯನ್ನು ಎತ್ತಿ ಹಿಡಿದು ಮಳೆಯನ್ನು ತಪ್ಪಿಸಿದ ಅಂತ ಹೇಳುತ್ತಾರೆ. ಹಾಗಾಗಿ ಯಜ್ಞ-ಯಾಗಾದಿಗಳನ್ನು ವಿರೋಧಿಸಿದ ಮೊದಲನೇ **revolutionary** ಕೃಷ್ಣ. ಆಮೇಲೆ ಬುದ್ಧನೂ ಯಜ್ಞ-ಯಾಗಾದಿಗಳಿಂದ ಏನೂ ಪ್ರಯೋಜನವಿಲ್ಲವೆಂದ. ರಾಮಾನುಜಾಚಾರ್ಯರು ಪ್ರೀತಿ ಮತ್ತು ಭಕ್ತಿಗಿಂತ ದೊಡ್ಡದು ಏನೂ ಇಲ್ಲ ಅಂದರು. ನಮ್ಮ ಬಹಳ ದೊಡ್ಡ ಸಂತ ಕವಿಗಳು ನಿನ್ನ ನಾಮಸ್ಮರಣೆಯೇ ಸಾಕು ಅಂದಿದ್ದರು. ಯಜ್ಞ-ಯಾಗಾದಿಗಳು ಬೇಡವೆಂದರು. ಯಾವ ಮತಾಚರಣೆಯೂ ಬೇಡವೆಂದರು. ಹಾಗಾಗಿ ಇಲ್ಲಿ ಎಲ್ಲ ಮತಗಳೂ ಇವೆ. ಮತಾಚರಣೆಗೆ ವಿರುದ್ಧವಾದ ದೇವರ ಪ್ರಿಯರೂ ಇದ್ದಾರೆ. ಮತಾಚರಣೆಗೆ ವಿರುದ್ಧವಾದವರು ನಮ್ಮ ಕಾಲದ ಸೆಕ್ಯೂಲರಿಸ್ಟ್‌ಗಳು ಮಾತ್ರ ಅಂತ ತಿಳ್ಕೋಬೇಡಿ.

ಮತವನ್ನು ರಾಜಕೀಯಕ್ಕೆ ಬಳಸುವವರಿಗಂತೂ ದೇವರ ಮೇಲೆ ಎಳ್ಳಷ್ಟೂ ಪ್ರೀತಿಯಿಲ್ಲ, ಅವರಿಗೆ ದೇವರು ಅಂದರೆ ಓಟು, ಅಷ್ಟೆ. ಹಾಗಾಗಿ ಕೋಮು ಸೌಹಾರ್ದಕ್ಕಾಗಿ ಹೋರಾಡುವವರು ಕೇವಲ ಜಾತ್ಯತೀತರು ಮಾತ್ರವಲ್ಲ, ಧರ್ಮದಲ್ಲಿ ಬಹಳ ಪ್ರೀತಿಯುಳ್ಳವರು ಕೂಡ. ಎಲ್ಲ ಧರ್ಮಗಳು ಒಟ್ಟಾಗಿ ಬಾಳಲಿಕ್ಕೆ ಬೇಕಾದಂತಹ ಒಂದು ಅವಕಾಶವನ್ನು ಯಾವತ್ತೂ ಕಡಿಮೆ ಮಾಡಬಾರದು, ಯಾವತ್ತೂ ಸಂಕುಚಿತಗೊಳಿಸಬಾರದು ಅನ್ನೋ ನಿಷ್ಠೆಯುಳ್ಳವರಾಗಿದ್ದಾರೆ. ಆದ್ದರಿಂದ ಈ ಹೋರಾಟದಲ್ಲಿ ದೇವರಿಲ್ಲ ಅನ್ನುವವರು ಮಾತ್ರವಲ್ಲ; ದೇವರು ಇದ್ದಾನೆ ಅನ್ನುವವರೂ ಇದ್ದಾರೆ.

ನಾನು ಮೊನ್ನೆ ಕಥೆಯೊಂದನ್ನು ಓದಿದೆ: ಒಬ್ಬ ನಿತ್ಯ ಹರಿ-ಹರಿ ಅಂತ ಧ್ಯಾನಿಸುತ್ತಾ ಒಣಗಿಹೋಗುತ್ತಾನೆ. ಅವನಿಗೆ ದೇವರೇ ಕಾಣುವುದಿಲ್ಲ. ಒಂದು ದಿನ ಗಾಯಗೊಂಡಿರುವ ಕುರಿಮರಿಯನ್ನು ನೋಡಿ, ಅದನ್ನು ತಂದು ಸಾಕಿ ಅದನ್ನು ಪ್ರೀತಿಸಲು ಶುರುಮಾಡುತ್ತಾನೆ. ಆಗ ಅವನಿಗೆ ದೇವರ ಸಾಕ್ಷಾತ್ಕಾರವಾಗುತ್ತದೆ.



ಕೊನೆಗೂ ಈ ದೇಶ ಹೇಳುವುದೇನೆಂದರೆ ಮಾನವ ಪ್ರೀತಿಯಲ್ಲಿ ದೇವರಿದ್ದಾನೆ. ಆದ್ದರಿಂದ ಸಾಮಾನ್ಯ ಜನರು, ಕೋಮು ಸೌಹಾರ್ದಕ್ಕಾಗಿ ಹೋರಾಡುತ್ತಿರುವ ನಮ್ಮಂಥವರನ್ನು ತಪ್ಪು ತಿಳಿಯಬಾರದು. ನಮ್ಮ ದೇಶ ಧಾರ್ಮಿಕ ಕಾರ್ಯಾಗಾರವಾಗಿ ಇನ್ನೂ ಮುಂದುವರಿಯಲಿ. ಇಂದು ವಿಜ್ಞಾನ ಮುಂದುವರೆದಿದೆ. ಧರ್ಮ ವಿಜ್ಞಾನವನ್ನು ದಕ್ಕಿಸಿಕೊಳ್ಳಬೇಕು. ದೇವರ ಕಲ್ಪನೆಗೂ ವಿಜ್ಞಾನಕ್ಕೂ ಇರುವ ಸಂಬಂಧವನ್ನು ನಾವಿಂದು ನೋಡಬೇಕಾಗಿದೆ.

ಗಾಂಧಿ ಒಂದು ಮಾತು ಹೇಳಿದ್ದರು: "ಈವರೆಗೆ ಬಂದಿರುವ ಯಾವ ಮತ ಧರ್ಮವೂ ಪರಿಪೂರ್ಣವಾಗಿಲ್ಲ, ಎಲ್ಲವೂ ಸ್ವಲ್ಪ ಅಪರಿಪೂರ್ಣ. ಹಿಂದೂ ಧರ್ಮ ಸುಂದರವಾಗಿ ಕಾಣುತ್ತದೆ ಆದರೆ ಸ್ವಲ್ಪ ನ್ಯೂನತೆ ಇದೆ. ಹಾಗೆಯೇ ಇಸ್ಲಾಂ, ಕ್ರೈಸ್ತ ಧರ್ಮವೂ ಸುಂದರವಾಗಿ ಕಾಣುತ್ತದೆ ಆದರೆ ಅಲ್ಲೂ ಸ್ವಲ್ಪ ಏನೋ ಸರಿಯಿಲ್ಲ. ಎಲ್ಲ ಧರ್ಮಗಳಲ್ಲೂ ನ್ಯೂನತೆಯಿರುವುದರಿಂದ ಎಲ್ಲರೂ ಬೇಕು."

ನಾನು ಮೊದಲೇ ಹೇಳಿದಂತೆ ಈ ದೇಶವನ್ನು ದೇವರ ಹುಡುಕಾಟದ ದೊಡ್ಡ ಕಾರ್ಯಾಗಾರ ಮಾಡಬೇಕು. ಅದಾದರೆ ಎಲ್ಲರಿಗೂ ಸಂತೋಷ. ಅದು ಆಗದಂತೆ ಮಾಡುವವರು ದೈವ ವಿರೋಧಿಗಳು-ಧರ್ಮ ವಿರೋಧಿಗಳು-ಹೃದಯದಲ್ಲಿ ದೇವರಿಲ್ಲದವರು. ಏಕೆಂದರೆ ಅವರ ಹೃದಯಗಳಲ್ಲಿ ಪ್ರೀತಿ ಇಲ್ಲ. ಅಲ್ಲಿ ಕುದಿಯುವ ಅಸೂಯೆಯೇ ಯಜ್ಞ-ಯಾಗಾದಿಗಳನ್ನು ಮಾಡೋದಕ್ಕೆ ಕಾರಣ.

ಇವತ್ತೇನಾದರೂ ಬುದ್ಧ-ಬಸವ-ಅಲ್ಲಮರಿದ್ದರೆ ಅವರೂ ಇದೇ ಮಾತು ಹೇಳುತ್ತಿದ್ದರೆಂಬ ನಂಬಿಕೆ ನನಗಿದೆ. ಹಾಗಾಗಿ ನಾವು ಈ ದೇಶದ ದೊಡ್ಡ ಪರಂಪರೆಯನ್ನು ಎತ್ತಿ ಹಿಡಿಯುವವರು, ದುಷ್ಟ ಪರಂಪರೆಯನ್ನು ಖಂಡಿಸುವವರು. ■

ರಂಜನೆ | ಬೋಧನೆ | ಪ್ರಚೋದನೆ
ಲಂಕೇಶ್

# ಯುದ್ಧ ಪ್ರಾರ್ಥನೆ



## ಕಂಡಹಾಗೆ

■ ಗೌರಿ ಲಂಕೇಶ್

ತಿದೊಂದು. ಮಹತ್ವದ, ರೋಮಾಂಚನಕಾರಿ ನಾಗಿತ್ತು. ಯುದ್ಧ ಆಗತಾನೆ ಪ್ರಾರಂಭವಾಗಿದ್ದು ದೇಶಕ್ಕೆ ನೇ ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡಿತ್ತು. ಪ್ರತೀ ಹೃದಯದಲ್ಲಿ ಪ್ರೇಮ ಎಂಬ ಪವಿತ್ರ ಜ್ವಾಲೆ ಉರಿಯುತ್ತಿತ್ತು. ತಿ ಮದ್ದಳೆ ಸದ್ದು; ಸಂಗೀತ ತಂಡಗಳಿಂದ ದೇಶಭಕ್ತಿ ವ ಗೀತೆಗಳ ಗಾಯನ; ಆಟದ ಬಂದೂಕುಗಳಿಂದ ದ್ದಿಗಳ ಹಾರಾಟ; ಬುಸುಗುಟ್ಟಿ ಸ್ಫೋಟಗೊಳ್ಳುತ್ತಿದ್ದ ಕಿಗಳ ಆರ್ಭಟ; ಪ್ರತಿಯೊಬ್ಬರ ಕೈಯಲ್ಲೂ, ಕಣ್ಣಿಗೆ ಟುವಷ್ಟು ದೂರ ಪ್ರತಿ ಮನೆಯ ಮೇಲೂ ಸೂರ್ಯನ ನಲ್ಲಿ ಹಾರಾಡುತ್ತಿದ್ದ ಧ್ವಜಗಳು. ಸ್ವಂತ ಇಚ್ಛೆಯಿಂದ ನನ್ನು ಸೇರಿದ್ದ ಆ ಯುವಕರು ಪ್ರತಿ ದಿನ ತಮ್ಮ ಸ ಸಮವಸ್ತ್ರಗಳನ್ನು ಧರಿಸಿ ಹುರುಪಿನಿಂದ ಊರಿನ ಬ್ಯರಸ್ತೆಯಲ್ಲಿ ಮಿಲಿಟರಿ ಕವಾಯತು ನುತ್ತಿದ್ದರು. ಅವರನ್ನು ನೋಡಿ ಯರು, ತಾಯಂದಿರು, ಅಕ್ಕತಂಗಿಯರು, ಟಸಿಯರು ಹೆಮ್ಮೆಯಿಂದ ಬೀಗುತ್ತಿದ್ದರು; ಭರಿತ ಭಾವನೆಗಳು ಅವರೆಲ್ಲರ ಲನ್ನು ಅಡಗಿಸಿದ್ದರೂ ಅವರು ದೊಡ್ಡ ರುಲ್ಲಿ ಜೈಕಾರ ಕೂಗುತ್ತ ಸೈನಿಕರನ್ನು ತ್ಸಾಹಿಸುತ್ತಿದ್ದರು.



ಪ್ರತೀ ರಾತ್ರಿ ನಡೆಯುತ್ತಿದ್ದ ಸಭೆಗೆ ಯಿಂದ ಅವರೆಲ್ಲ ಸೇರಿ, ಎಲ್ಲರ ಯದ ಆಳವನ್ನು ತಾಗುತ್ತಿದ್ದ ದೇಶಭಕ್ತಿ ತ ಭಾಷಣಗಳನ್ನು ಕಣ್ಣೀರು ಸುರಿಸುತ್ತಾ ಟತ್ತಿದ್ದರು. ಚಂಡಮಾರುತವೇ ಬಡಿದಂತೆ ಳೆ ತಟ್ಟುವ ಮೂಲಕ ಮಾತ್ರ ಅವರು ಭಕ್ತಿಯ ವಾಗ್ಝರಿಗೆ ಕೆಲವೊಮ್ಮೆ ತಡೆಯೊಡ್ಡುತ್ತಿದ್ದರು. ಸ್ಥಾನಗಳಲ್ಲಿ ದೇಶಕ್ಕಾಗಿ, ಧ್ವಜಕ್ಕಾಗಿ ಪ್ರಾರ್ಥನೆಗಳನ್ನು ಟತ್ತಿದ್ದರು. ಸರ್ವಶಕ್ತ ಭಗವಂತನ ನೆರವಿನೊಂದಿಗೆ ನ್ಥ ದೈವವು ತಮ್ಮ ದೇಶದ ನೆರವಿಗೆ ಬರಬೇಕೆಂದು ನೆಗಳನ್ನು ಸಲ್ಲಿಸುತ್ತಿದ್ದರು. ಅದೆಂತಹ ಗೆಲುವಿನ ತ್ತ ಸಂತುಷ್ಟ ಕಾಲವಾಗಿತ್ತೆಂದರೆ ದುಡುಕಿನ ೀಭಾವದ ಕೆಲವರು ಯುದ್ಧವನ್ನು ವಿರೋಧಿಸಿ ಧರ್ಮಿಷ್ಠತೆಯ ಬಗ್ಗೆ ಪ್ರಶ್ನಿಸಲು ಮುಂದಾದಾಗ ಗೆ ಎಂತಹ ಭೀಕರ ಮತ್ತು ಕೋಪಯುಕ್ತ ಕೆಯನ್ನು ನೀಡಲಾಯಿತೆಂದರೆ ಅವರೆಲ್ಲ ತಮ್ಮ ಕ್ಕೇ ಹೆದರಿ ಕಣ್ಮರೆಯಾದರಲ್ಲದೆ ಮತ್ತೆಂದೂ ಅಂತಹ ಹಸಕ್ಕೆ ಮುಂದಾಗಲಿಲ್ಲ.

ೋಮವಾರ ಯುವ ಸೈನಿಕರು ಯುದ್ಧ ಭೂಮಿಗೆ ಡುವುದಿತ್ತು. ಅದರ ಮುನ್ನಾ ದಿನವಾದ ಭಾನು ದಂದು ಊರಿನ ಎಲ್ಲರೂ ದೊಡ್ಡ ದೇವಸ್ಥಾನದ ದೆ ಜಮೆಗೊಂಡರು. ಯುದ್ಧೋತ್ಸಾಹದಿಂದ ಯುವ ರ ಮುಖಗಳು ಕಂಗೊಳಿಸುತ್ತಿದ್ದವು. ತಾವು ಇಡಲಿರುವ ಹೆಜ್ಜೆ, ಆವೇಗ ಭರಿತ ಮುನ್ನಡೆ, ರಭಸದ ದಾಳಿ, ಟುವ ಕತ್ತಿಗಳು, ಕಾಲ್ಕೀಳುವ ವೈರಿ, ಕೋಲಾಹಲ, ನ್ನು ಬೆನ್ನಟ್ಟಿ ಹೋಗುವುದು, ಕೊನೆಗೆ ಅವರೆಲ್ಲ ಗೆ ಶರಣಾಗತರಾಗುವುದು!... ಇಂತಹ ದೃಶ್ಯಗಳು ಯುವಕರ ಮನಸುಗಳನ್ನು ಆವರಿಸಿದ್ದವು. ಅಷ್ಟೇ ಅದೆಲ್ಲ ಮುಗಿದನಂತರ ಅವರೆಲ್ಲ ಯುದ್ಧಭೂಮಿ ದ ಯೋಧರಂತೆ ಹಿಂದಿರುಗುವುದು, ವೀರಪದಕಗಳನ್ನು ಟುವುದು, ಹರ್ಷೋದ್ಗಾರಿತ ಜನ ತಮಗೆ ವೀರ ತ ನೀಡುವುದು, ಎಲ್ಲರ ಮೆಚ್ಚುಗೆ ಪಡೆಯುವುದು, ಯ ಸಮುದ್ರದಲ್ಲಿ ಮುಳುಗುವುದು!.... ಇಂತಹ ಕನಸುಗಳೂ ಆ ಯುವಕರಲ್ಲಿ ತುಂಬಿದ್ದವು. ಯುವ ಸೈನಿಕರೊಂದಿಗೆ ಅವರ ಪ್ರೀತಿಪಾತ್ರರೆಲ್ಲ ಹೆಮ್ಮೆಯಿಂದ, ಹರ್ಷದಿಂದ ಕೂತಿದ್ದರೆ; ದೇಶಕ್ಕಾಗಿ ಧ್ವಜಕ್ಕಾಗಿ ಹೋರಾಡಲೆಂದು, ಎಲ್ಲ ತ್ಯಾಗಕ್ಕಿಂತಲೂ ಅತಿ ಶ್ರೇಷ್ಠವಾದ ವೀರಮರಣ ಹೊಂದಲೆಂದು ತಮ್ಮ ಮನೆಯಲ್ಲಿ ಮಗನೋ, ಸಹೋದರನೋ ಇಲ್ಲದ ನೆರೆಹೊರೆಯವರು ಅಸೂಯೆಪಡುತ್ತಿದ್ದರು. ಪ್ರಾರ್ಥನೆಗಳು ಮುಂದುವರೆದಿತ್ತು, ಯುದ್ಧ ಕುರಿತಂತೆ ಧರ್ಮ ಗ್ರಂಥದಲ್ಲಿರುವ ಭಾಗವನ್ನು ಪಠಿಸಲಾಯಿತು. ಕೊನೆಗೆ ಎಲ್ಲರೂ ಎದ್ದು "ಹೇ ಭಗವಂತ, ಈ ಯುದ್ಧದಲ್ಲಿ ನಮಗೆ ಜಯವನ್ನು ಕರುಣಿಸು" ಎಂದು ಉದ್ಗಾರವೆತ್ತಿದರು.

ಅದಾದ ನಂತರ ದೇವಸ್ಥಾನದ ಮುಖ್ಯ ಪೂಜಾರಿ ಸುದೀರ್ಘವಾದ ವಿಶೇಷ ಪ್ರಾರ್ಥನೆಗಳನ್ನು ಸಲ್ಲಿಸಿದರು. ಅತಿ ಸುಂದರ ಪದಗಳನ್ನು, ಭಾವೋದ್ರಿಕ್ತ ಬೇಡಿಕೆಯನ್ನು ಒಳಗೊಂಡಿದ್ದ ಅಂತಹ ಪ್ರಾರ್ಥನೆಯನ್ನು ಅಲ್ಲಿದ್ದ ಜನ ಈ ಹಿಂದೆ ಆಲಿಸಿದ್ದ ಉದಾಹರಣೆಗಳಿರಲಿಲ್ಲ. ಆ ಪ್ರಾರ್ಥನೆಯ ಸಾರಾಂಶ ಇದಾಗಿತ್ತು: "ದಯಾಮಯಿಯಾದ ಭಗವಂತನೆ, ನಮ್ಮ ಯುವ ಯೋಧರ ಮೇಲೆ ನಿನ್ನ ಕಾವಲಿರಲಿ. ಅವರ ಈ ದೇಶಭಕ್ತಿಯ ಕಾರ್ಯದಲ್ಲಿ ನಿನ್ನಿಂದ ಎಲ್ಲ ರೀತಿಯ ಸಹಾಯ, ನೆರವು ಮತ್ತು ಪ್ರೋತ್ಸಾಹ ಸಿಗುವಂತಾಗಲಿ. ಯುದ್ಧ ಭೂಮಿಯಲ್ಲಿ ಅವರಿಗೆಲ್ಲ ನಿನ್ನ ರಕ್ಷಣೆ, ಅಪಾಯದ ಕ್ಷಣದಲ್ಲಿ ನಿನ್ನ ಕರುಣೆ ಇರಲಿ. ಅವರಲ್ಲಿ ಧೈರ್ಯ ಮತ್ತು ಆತ್ಮವಿಶ್ವಾಸವನ್ನು ಮೂಡಿಸಿ ವೈರಿಗಳ ದಾಳಿಗೆ ಹೆದರದಂತೆ, ಬದಲಾಗಿ ಅವರ ಸದ್ದಡಗಿಸುವಂತೆ ನಿನ್ನ ಸಹಾಯಹಸ್ತ ಚಾಚುವಂತಾಗಲಿ. ನಮ್ಮ ದೇಶ ಮತ್ತು ಧ್ವಜಕ್ಕೆ ಶಾಶ್ವತವಾದ ಕೀರ್ತಿ ಮತ್ತು ಗೌರವ ಸಿಗುವಂತಾಗಲಿ."



ಈ ಪ್ರಾರ್ಥನೆ ನಡೆಯುತ್ತಿದ್ದಾಗಲೇ ಅಪರಿಚಿತ ಮುದುಕನೊಬ್ಬ ದೇವಸ್ಥಾನದ ಆವರಣವನ್ನು ಪ್ರವೇಶಿಸಿ, ಸದ್ದೇ ಮಾಡದ ಹೆಜ್ಜೆಗಳೊಂದಿಗೆ ಮುಖ್ಯ ಪೂಜಾರಿಯತ್ತ ನಡೆದ. ಆತನ ಉದ್ದನೆಯ ದೇಹದ ಮೇಲೆ ಉದ್ದನೆ ನಿಲುವಂಗಿಯೊಂದಿತ್ತು. ಆತನ ತಲೆಯಿಂದ ಭುಜದವರೆಗೂ ಜಲಪಾತದ ನೊರೆಯಂತೆ ಬಿಳಿ ಕೂದಲು ಹರಡಿತ್ತು. ಸುಕ್ಕು ಸುಕ್ಕಾಗಿದ್ದ ಆತನ ಮುಖ ಪ್ರೇತಕ್ಕಿಂತ ಕಾಂತಿಹೀನವಾಗಿತ್ತು. ಅವನನ್ನು ಕಂಡು ಅಚ್ಚರಿಗೊಂಡ ಜನ ತಮ್ಮ ಕಣ್ಣುಗಳಿಂದಲೇ ಅವನನ್ನು ಹಿಂಬಾಲಿಸುತ್ತಿದ್ದಾಗ, ಕಣ್ಣುಗಳನ್ನು ಮುಚ್ಚಿಕೊಂಡು ಪ್ರಾರ್ಥನೆ ಸಲ್ಲಿಸುತ್ತಿದ್ದ ಪೂಜಾರಿಯನ್ನು ಅಪರಿಚಿತ ವ್ಯಕ್ತಿ ನಿಶ್ಯಬ್ಧವಾಗಿ ಸಮೀಪಿಸಿದ. ಈತನ ಇರುವಿಕೆ ಬಗ್ಗೆ ಗೊತ್ತಿರದ ಪೂಜಾರಿ "ಸರ್ವಶಕ್ತ ಭಗವಂತನೆ, ನಮ್ಮ ದೇಶಕ್ಕೆ, ಧ್ವಜಕ್ಕೆ, ಅಸ್ತ್ರಗಳಿಗೆ ಜಯಕಾರ ನೀಡು!" ಎಂದು ಬೇಡಿಕೆ ಸಲ್ಲಿಸಿ ತನ್ನ ಪ್ರಾರ್ಥನೆಯನ್ನು ಮುಗಿಸಿದ.

ಆಗ ಪೂಜಾರಿಯ ತೋಳನ್ನು ಮೆಲ್ಲನೆ ಮುಟ್ಟಿ ಪಕ್ಕಕ್ಕೆ ಸರಿಯುವಂತೆ ಅಪರಿಚಿತ ವ್ಯಕ್ತಿ ಸೂಚಿಸಿದ. ಅವನನ್ನು ಕಂಡು ಪೂಜಾರಿ ವಿಚಲಿತಗೊಂಡರೂ ಪಕ್ಕಕ್ಕೆ ಸರಿದು ನಿಂತ. ಪೂಜಾರಿಯ ಪ್ರಾರ್ಥನೆಯ ಮಾಂತ್ರಿಕ ಶಕ್ತಿಗೆ ಒಳಗಾಗಿದ್ದ ಜನರತ್ತ ಆತ ಕೆಲಕ್ಷಣ ನಿಷ್ಠುರವಾದ ನೋಟ ಬೀರಿದ. ಆತನ ಕಣ್ಣುಗಳಲ್ಲಿ ಅಲೌಕಿಕವಾದ ಕಾಂತಿ ಪ್ರಜ್ವಲಿಸುತ್ತಿತ್ತು. ಗಾಢವಾದ ದನಿಯಲ್ಲಿ ಆತ ಹೇಳಿದ:

"[illegible]ರ್ವಶಕ್ತ ಭಗವಂತನು ಒಂದು ಸಂದೇಶದೊಂದಿಗೆ ನನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ!"

ಅದನ್ನ ಕೇಳಿ ಅಲ್ಲಿದ್ದವರೆಲ್ಲ ಆಘಾತಗೊಂಡರು. ಅದು ಆತನ ಗಮನಕ್ಕೆ ಬಂದರೂ ಅದನ್ನು ಪರಿಗಣಿಸದೆ ತನ್ನ ಮಾತನ್ನು ಮುಂದುವರೆಸಿದ. "ನಿಮ್ಮೆಲ್ಲರ ಪ್ರಾರ್ಥನೆಯನ್ನು ಭಗವಂತ ಆಲಿಸಿದ್ದಾನೆ. ಆದರೆ ನಿಮ್ಮ ಪ್ರಾರ್ಥನೆಯ ಸಂಪೂರ್ಣ ಅರ್ಥವನ್ನು ನಿಮಗೆ ವಿವರಿಸಲೆಂದೇ ನನ್ನನ್ನು ಕಳುಹಿಸಿದ್ದಾನೆ. ನಾನು ನಿಮಗೆಲ್ಲ ವಿವರಿಸಿದ ನಂತರವೂ ಅದೇ ನಿಮ್ಮ ಆಶಯವಾಗಿದ್ದರೆ ಅದನ್ನು ಈಡೇರಿಸು ಎಂದು ಭಗವಂತ ನನಗೆ ಆದೇಶಿಸಿದ್ದಾನೆ. ಯಾಕೆಂದರೆ ಮಾನವನ ಹಲವಾರು ಆಶೆಗಳಂತೆ ನಿಮ್ಮ ಪ್ರಾರ್ಥನೆಗಳು ಕೂಡ ಅದರ ಪರಿಪೂರ್ಣ ಪರಿಣಾಮದ ಬಗ್ಗೆ ಕೆಲಕ್ಷಣ ಯೋಚಿಸದೇ ಸಲ್ಲಿಸಿದ ಬೇಡಿಕೆಯಾಗಿದೆ.

ನೀವೆಲ್ಲ ಈ ಪೂಜಾರಿಯ ಮೂಲಕ ಸಲ್ಲಿಸಿದ್ದು ಒಂದೇ ಪ್ರಾರ್ಥನೆಯನ್ನೇ? ಇಲ್ಲ, ನೀವು ಸಲ್ಲಿಸಿದ್ದು ಎರಡು ಪ್ರಾರ್ಥನೆಗಳನ್ನು. ಅವುಗಳಲ್ಲಿ ಒಂದನ್ನು ಮಾತ್ರ ಉಚ್ಚರಿಸಿದ್ದೀರಿ, ಇನ್ನೊಂದನ್ನು ಉಚ್ಚರಿಸದೇ ಸುಮ್ಮನಿದ್ದೀರಿ. ಆದರೆ ಎಲ್ಲಾ ತರಹದ ಪ್ರಾರ್ಥನೆಗಳು ಭಗವಂತನ ಕಿವಿಗಳಿಗೆ ಕೇಳಿಸುವುದರಿಂದ ನೀವು ವ್ಯಕ್ತಪಡಿಸಿದ ಮತ್ತು ವ್ಯಕ್ತಪಡಿಸದೇ ಇದ್ದ ಎರಡೂ ಪ್ರಾರ್ಥನೆಗಳ ಬಗ್ಗೆ ಆತನಿಗೆ ಗೊತ್ತಾಗಿದೆ. ಆದ್ದರಿಂದ ನಾನು ಹೇಳುವುದನ್ನು ಸರಿಯಾಗಿ ಆಲಿಸಿ. ನೀವು ಭಗವಂತನ ಆಶೀರ್ವಾದವನ್ನು ಬೇಡುವ ಮೂಲಕ ನಿಮ್ಮ ಪಕ್ಕದವನಿಗೆ ಶಾಪ ನೀಡುವಂತೆಯೂ ಕೇಳುತ್ತಿದ್ದೀರಿ. ಯಾಕೆಂದರೆ ಮಳೆಯ ಅಗತ್ಯವಿರುವ ನಿಮ್ಮ ಹೊಲಕ್ಕೆ ಮಳೆ ಬೇಕೆಂದು ನೀವು ಆಶಿಸಿದರೆ ಮಳೆಯ ಅಗತ್ಯವಿರದ ನಿಮ್ಮ ನೆರೆಹೊರೆಯ ರೈತನಿಗೆ ನೀವು ಕೇಡು ಬಗೆಯುತ್ತೀರಿ.

ಪೂಜಾರಿಯು ತನ್ನ ಪ್ರಾರ್ಥನೆಯಲ್ಲಿ ವ್ಯಕ್ತಪಡಿಸಿದ ಆಶಯಗಳನ್ನು ನೀವು ಕೇಳಿದ್ದೀರಿ. ಆದರೆ ಆತ ವ್ಯಕ್ತಪಡಿಸದೇ ಇದ್ದ-ನಿಮ್ಮ ಹೃದಯಗಳಲ್ಲೂ ನಿಶಬ್ಧವಾಗಿ ಮೂಡಿದ್ದ-ಮತ್ತೊಂದು ಪ್ರಾರ್ಥನೆಯನ್ನು ಪದಗಳ ರೂಪದಲ್ಲಿ ನಿಮಗೆ ತಿಳಿಸಲೆಂದೇ ಭಗವಂತ ನನ್ನನ್ನು ಕಳುಹಿಸಿದ್ದಾನೆ. ನೀವೆಲ್ಲ ಅಜ್ಞಾನ ಮತ್ತು ಅವಿಚಾರದಿಂದ ಸಲ್ಲಿಸಿದ ಪ್ರಾರ್ಥನೆ ಎಂತಹದ್ದು? "ಭಗವಂತನೇ, ನಮಗೆ ಜಯವನ್ನು ಕರುಣಿಸು" ಎಂದಲ್ಲವೆ? ನೀವು ಜಯಕ್ಕೆ ಪ್ರಾರ್ಥಿಸುವಾಗಲೇ ಆ ಜಯದಿಂದ ಇತರರ ಮೇಲೆ ಆಗುವ ದುಷ್ಪರಿಣಾಮಗಳಿಗೂ ಆಶಿಸಿದ್ದೀರಿ ಎಂದೇ ಅರ್ಥ.

ಆ ದುಷ್ಪರಿಣಾಮಗಳನ್ನು ಆಶಿಸುವ ನಿಮ್ಮ ಆ ಪ್ರಾರ್ಥನೆಯನ್ನೂ ಪದಗಳಲ್ಲಿ ಹೇಳುತ್ತೇನೆ ಕೇಳಿ!

"ಹೇ ಭಗವಂತನೆ, ಯುದ್ಧಕ್ಕೆ ಹೊರಟಿರುವ ಈ ನಮ್ಮ ಯುವ ಯೋಧರ ಮೇಲೆ ನಿನ್ನ ಕೃಪೆ ಇರಲಿ. ನಮ್ಮ ಬೆಚ್ಚಗಿನ ಮನೆಗಳಿಂದ ಹೊರಟಿರುವ ಇವರ ಮೇಲೆ ನಿನ್ನ ಕರುಣೆ ಇರಲಿ. ಹೇ ಭಗವಂತನೆ, ವೈರಿ ಸೈನಿಕರ ದೇಹಗಳನ್ನು ಛಿದ್ರಗೊಳಿಸುವಲ್ಲಿ ನೆರವಾಗು. ನಳನಳಿಸುತ್ತಿರುವ ಅವರ ಹೊಲಗದ್ದೆಗಳ ಮೇಲೆ ರಕ್ತತರ್ಪಣ ನಡೆಸಲು ನೆರವು ನೀಡು. ನಮ್ಮ ಬಂದೂಕುಗಳ ಅಬ್ಬರವನ್ನು ಅವರ ಗಾಯಾಳುಗಳ ಆಕ್ರಂದನ ಮುಳುಗಿಸುವಂತೆ ಮಾಡು. ಅವರ ಸಾಧಾರಣ ಮನೆಗಳನ್ನು ಬೆಂಕಿಯ ಚಂಡಮಾರುತದಲ್ಲಿ ನೆಲಸಮಗೊಳಿಸುವಲ್ಲಿ ನೆರವಾಗು. ಯಾವುದೇ ತಪ್ಪು ಮಾಡದ ಅವರ ವಿಧವೆಯರು ಅಂತ್ಯವೇ ಇಲ್ಲದ ದುಃಖದಲ್ಲಿ ಮುಳುಗುವಂತೆ ಮಾಡು. ಅವರ ಪುಟ್ಟ ಮಕ್ಕಳಿಗೆ ಸೂರೇ ಇಲ್ಲದಂತೆ ಮಾಡಿ ನಿರ್ಜನ ಭೂಮಿಯಲ್ಲಿ ಹೊಟ್ಟೆಬಟ್ಟೆಗಿಲ್ಲದೆ ಬಾಯಾರಿಕೆಯಿಂದ ಅಲೆಯುವಂತೆ ಮಾಡಲು ನೆರವಾಗು. ಅವರೆಲ್ಲ ಬೇಸಿಗೆಯ ಬೆಂಕಿಯ ಜ್ವಾಲೆಯಲ್ಲಿ, ಚಳಿಗಾಲದ ಥಂಡಿಯಲ್ಲಿ ಮುರಿದ ಮನುಷ್ಯರಾಗಿ, ಕಷ್ಟಗಳ ಕಠೋರತೆಯಿಂದ ಗೋರಿಯ ನೆಮ್ಮದಿಗಾಗಿ ನಿನ್ನಲ್ಲಿ ಪ್ರಾರ್ಥಿಸುವಂತೆ ಮಾಡು. ಇದನ್ನೆಲ್ಲ ನಮಗಾಗಿ ಮಾಡು ಸರ್ವಶಕ್ತ ಭಗವಂತನೇ. ಅವರ ಕನಸುಗಳನ್ನು ನುಚ್ಚುನೂರು ಮಾಡು, ಅವರ ಬದುಕನ್ನು ನಾಶಗೊಳಿಸು, ಅವರ ಕಷ್ಟಕಾರ್ಪಣ್ಯಗಳನ್ನು ಸುದೀರ್ಘಗೊಳಿಸು, ಅವರಿಡುವ ಹೆಜ್ಜೆಗಳೇ ಭಾರವಾಗಿ,

▶▶▶ 13

# ಕನ್ನಡ ವೀರರ ದ್ರೋಹ


ಕರ್ನಾಟಕದ ಗಡಿ ನಕಾಶೆಯನ್ನೇ ತಿದ್ದಿ ಯಥೇಚ್ಛ ಗಣಿ ಸಂಪತ್ತಿನ ಕಿಲೋಮೀಟರುಗಟ್ಟಲೇ ಭೂ ಭಾಗವನ್ನು ಆಂಧ್ರಕ್ಕೆ ಸೇರಿಸಿ, ಸಾವಿರಾರು ಕೋಟಿ ರೂಪಾಯಿಗಳ ಕಬ್ಬಿಣದ ಅದಿರನ್ನು ದೋಚಿದ್ದು ಕನ್ನಡ ದ್ರೋಹ ಆಗುವುದಿಲ್ಲವೆ?

ಹಾಗಾದರೆ ಹೊಗೇನಕಲ್ ವಿವಾದದಲ್ಲಿ ಕನ್ನಡ ಸಂಘಟನೆಗಳು ತಮಿಳುನಾಡಿನ ವಿರುದ್ಧ ಬೊಬ್ಬೆ ಹಾಕಿದ್ದಾದರೂ ಏಕೆ? ಕರುಣಾನಿಧಿ ಮಾಡಿದ್ದನ್ನೇ ಗಣಿರೆಡ್ಡಿ ಮಾಡಿದರೆ ಅದು ಸಮ್ಮತವೆ? ತಮಿಳುನಾಡು ಮಾತ್ರ ಕರ್ನಾಟಕ ದ್ರೋಹಿಯೆ? ಆಂಧ್ರದವನೆಂಬ ಒಂದೇ ಕಾರಣಕ್ಕೆ ಮಂತ್ರಿ ಜನಾರ್ದನ ರಡ್ಡಿಯ ಪಾಪವನ್ನು ಕನ್ನಡಿಗರು ಕ್ಷಮಿಸಬೇಕೆ?


ನಾರಾಯಣಗೌಡ

ಇಂಥ ಪ್ರಶ್ನೆಗಳೆಲ್ಲ ಏಕಾಏಕಿ ಎದ್ದು ನಿಂತಿದ್ದು ಲೋಕಾಯುಕ್ತ ಸಂತೋಷ್ ಹೆಗಡೆ ಗಣಿ ಲೂಟಿಯ ವಿರುದ್ಧ ಕೊಟ್ಟ ವರದಿ ಬಹಿರಂಗಗೊಂಡ ನಂತರವೆ.


ಸರಿಸುಮಾರು 38 ಹೆಕ್ಟೇರ್‌ಗಳಷ್ಟು ಕರ್ನಾಟಕದ ಭೂಭಾಗವನ್ನು ಆಂಧ್ರಕ್ಕೆ ಸೇರಿಸಿ, ಸುಮಾರು ಹದಿನಾರು ಸಾವಿರ ಕೋಟಿ ರೂಪಾಯಿಗಳಷ್ಟು ಮೊತ್ತದ ಗಣಿಯನ್ನು ದೋಚಿದ ಜನಾರ್ದನ ರೆಡ್ಡಿಯ ವಿರುದ್ಧ ಲೋಕಾಯುಕ್ತ ವರದಿ ಸ್ಪಷ್ಟವಾಗಿದೆ. ಗಡಿ ನಕಾಶೆಯನ್ನೇ ತಿದ್ದಿದ್ದು, ಕರ್ನಾಟಕದ ಸಮೃದ್ಧ ಭೂಭಾಗವೊಂದನ್ನು ಆಂಧ್ರಕ್ಕೆ ಸೇರಿಸಿದ್ದು ಇಷ್ಟೆಲ್ಲಕ್ಕೂ ಮಂತ್ರಿ ಜನಾರ್ದನ ರೆಡ್ಡಿಯ ಓಬಳಾಪುರಂ ಮೈನಿಂಗ್ ಕಂಪೆನಿಯೇ ಕಾರಣವಾಗಿರುವುದು ಇತ್ಯಾದಿಗಳೆಲ್ಲವನ್ನೂ ಲೋಕಾಯುಕ್ತ ಸ್ಪಷ್ಟ ಪದಗಳಲ್ಲೇ ವರದಿ ನೀಡಿದೆ. ಇಷ್ಟಾಗ್ಯೂ ಕನ್ನಡ ವೀರರು ಮಾತ್ರ ಏಕೆ ಬಾಯಿಬಿಡುತ್ತಿಲ್ಲ?


ಚಂಪಾ

ಇದು ಪ್ರತಿ ಕನ್ನಡಿಗನನ್ನೂ ಕಾಡುತ್ತಿರುವ ಪ್ರಶ್ನೆ. ನಿನ್ನೆ ಮೊನ್ನೆಯಷ್ಟೇ ಹೊಗೇನಕಲ್ ವಿವಾದದಲ್ಲಿ ಕರುಣಾನಿಧಿ ಕೊಟ್ಟ ಹೇಳಿಕೆಯ ವಿರುದ್ಧ ಬೆಂಗಳೂರಿನ ಅಷ್ಟೂ ಕನ್ನಡ ಸಂಘಟನೆಗಳು ಭೂಮಿ ಆಕಾಶ ಒಂದು ಮಾಡಿ ಬೊಬ್ಬೆ ಇಟ್ಟವು. ವಾಟಾಳ್ ಆದಿಯಾಗಿ ರಕ್ಷಣಾ ವೇದಿಕೆಯ ನಾರಾಯಣಗೌಡ ಮತ್ತೊಂದು ಬಣದ ಪ್ರವೀಣ್ ಕುಮಾರ್ ಶೆಟ್ಟಿ, ಜಯಕರ್ನಾಟಕ ಸಂಘಟನೆಯ ಮುತ್ತಪ್ಪ ರೈ, ಸ್ವಾಭಿಮಾನ ಕರ್ನಾಟಕ ಪಕ್ಷದ ಚಂಪಾ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಲ್ಲೂರು ಪ್ರಸಾದ್, ಕನ್ನಡ ಸೇನೆಯ ಕುಮಾರ್, ಕೂಗು ವೀರ ಜಾಣಗೆರೆ ವೆಂಕಟರಾಮಯ್ಯ, ಸಾ.ರಾ. ಗೋವಿಂದು, ಪ್ರಭಾಕರ್ ರೆಡ್ಡಿ ಇತ್ಯಾದಿಗಳಿಗೆಲ್ಲ ಗಣಿ ಲೂಟಿಗಾಗಿ ನಡೆದ ಗಡಿ ಲೂಟಿ ಏಕೆ ಮುಖ್ಯವಾಗಲಿಲ್ಲ?

ಕನಿಷ್ಠ ಅದೊಂದು ಕನ್ನಡ ದ್ರೋಹವೆಂದೋ, ಕರ್ನಾಟಕದ ಸಮಗ್ರತೆ, ಏಕತೆ ಸಾರ್ವಭೌಮತ್ವಕ್ಕೆ ಆದ ಘಾತವೆಂದೋ ಏಕೆ ಕನ್ನಡ ಹೋರಾಟಗಾರರಿಗೆ ಅರ್ಥವಾಗುತ್ತಿಲ್ಲ?

ಅರ್ಥವಾಗದಿದ್ದರೆ ಹಾಳಾಗಲಿ. ಇಲ್ಲಿಗೆ ಆರು ತಿಂಗಳ ಹಿಂದೆ ವಿಧಾನಸೌಧದ ಮೂರನೇ ಮಹಡಿಯಲ್ಲಿ ಕಂಪ್ಯೂಟರ್ ಒಂದಕ್ಕೆ ಬೆಂಕಿ ಬಿದ್ದಿದ್ದು ಅನೇಕರಿಗೆ ನೆನಪಿರಬೇಕು. ಅದರ ವಿರುದ್ಧ ವಾಟಾಳ್ ಕತ್ತೆ ಮೆರವಣಿಗೆ ಮಾಡಿ ಪ್ರತಿಭಟಿಸಿದರು. ಸರಿ, ಅದಕ್ಕೂ ಮುನ್ನ ಚಿಕೂನ್ ಗುನ್ಯಾ ವಿರುದ್ಧ ವಾಟಾಳ್ ಕಂಬಳಿ ಚಳವಳಿ ಮಾಡಿದ್ದರು ತಾನೆ?


ಮುತ್ತಪ ರೈ


ಎಲ್ಲೋ ವಿಧಾನಸೌಧದ ಕಂಪ್ಯೂಟರ್ ಸುಟ್ಟ ಮಾತ್ರಕ್ಕೇ ಬೀದಿಯಲ್ಲಿ ನಿಂತು ಯಕ್ಷಗಾನ ಕುಣಿದ ವಾಟಾಳ್ ಪುಣ್ಯಾತ್ಮನಿಗೆ ಬೀದಿನಾಯಿಗಳ ವಿರುದ್ಧ ಬೊಬ್ಬೆ ಹಾಕುವುದು ಗೊತ್ತು, ಮರಕಡಿದದ್ದಕ್ಕೆ ಉರುಳು ಸೇವೆ ಮಾಡುವುದು ಗೊತ್ತು, ಆದರೆ ಕರ್ನಾಟಕದ ಗಡಿಯನ್ನೇ ಕಬಳಿಸಿ ಆಂಧ್ರಕ್ಕೆ ಸೇರಿಸಿದ ಜನಾರ್ದನ ರೆಡ್ಡಿಯ ವಿರುದ್ಧ ಏಕೆ ವಾಟಾಳ್ ತೆಪ್ಪಗಿದ್ದಾರೆ?

ಇದು ಕೇವಲ ವಾಟಾಳರ ರೋಗವಷ್ಟೇ ಅಲ್ಲ. ಸದ್ಯ ಕನ್ನಡ ಪರ ಹೋರಾಟದ 'ಚಾಂಪಿಯನ್' ರಕ್ಷಣಾ ವೇದಿಕೆಯ ನಾರಾಯಣಗೌಡನ ದ್ರೋಹ ಹೇಗಿದೆಯೆಂದರೆ, ಆತ ಬಳ್ಳಾರಿಗೇ ಹೋಗಿ ಗಣಿರೆಡ್ಡಿಯ ಅಧ್ಯಕ್ಷತೆಯಲ್ಲಿ ಅರವಿಂದ ಲಿಂಬಾವಳಿಗೆ 'ವೀರ ಕನ್ನಡಿಗ' ಪ್ರಶಸ್ತಿ ಕೊಡುತ್ತಾನೆ. ಆನಂತರ ಜನಾರ್ದನ ರೆಡ್ಡಿ, ಆತನ ಅಣ್ಣ ಕರುಣಾಕರ ರೆಡ್ಡಿ, ಶ್ರೀರಾಮುಲು ಮುಂತಾದವರನ್ನೆಲ್ಲ ಬೆಂಗಳೂರಿಗೇ ಕರೆಸಿ ರಕ್ಷಣಾ ವೇದಿಕೆಯ ಕಾರ್ಯಕ್ರಮಕ್ಕೇ ಬರಮಾಡಿಕೊಂಡು ಸನ್ಮಾನ ಮಾಡುತ್ತಾನೆ. ಅದೇ ಗಣಿ ರೆಡ್ಡಿಯ ವಿರುದ್ಧ ಗಡಿ ದೋಚಿದ ಆರೋಪ ಹೊರಿಸಿ ಲೋಕಾಯುಕ್ತರೇ ವರದಿ ಕೊಟ್ಟ ನಂತರವೂ ನಾರಾಯಣಗೌಡನಿಗೆ ಜ್ಞಾನೋದಯವಾಗಿಲ್ಲ!


ತಮಾಷೆಯೆಂದರೆ ನಾರಾಯಣಗೌಡ ತನ್ನ ಸಂಘಟನೆಗೆ ಕೊಟ್ಟ ಹೆಸರೇ ಕರ್ನಾಟಕ ರಕ್ಷಣಾ ವೇದಿಕೆ?

ಕರ್ನಾಟಕವನ್ನೇ ಭಕ್ಷಣೆ ಮಾಡಿದ ಜನಾರ್ದನ ರೆಡ್ಡಿ ಆತನ ಪಾಲಿಗೆ ಧಣಿಯೂ ಹೌದು. ನೆಂಟನೂ ಕೂಡ!

ಹಾಳಾಗಲಿ ನಾರಾಯಣಗೌಡನ ಟೋಕನ್ ಬುದ್ಧಿ ಯಾರಿಗೆ ತಾನೇ ಗೊತ್ತಿಲ್ಲ. ಆಕಾಲದಿಂದಲೂ ಕರ್ನಾಟಕದ ಏಕತೆ, ಸಮಗ್ರತೆಯ ಮಂತ್ರ ಜಪಿಸಿಕೊಂಡೇ ಬಂದ ಕನ್ನಡ ಸಾಹಿತ್ಯ ಪರಿಷತ್ತಾದರೂ ಈ ಬಗ್ಗೆ ಬೀದಿಗಿಳಿಯುತ್ತದೆಯೆಂದೇ ಜನ ಲೆಕ್ಕ ಹಾಕಿದ್ದರು. ಈ ಬಗ್ಗೆ ಅನೇಕ ಜನಪರ ಸಂಘಟನೆಗಳು ಕಸಾಪ ಅಧ್ಯಕ್ಷರ ಬಳಿ ನಿಯೋಗ ಕೊಂಡೊಯ್ದು ಬೀದಿಗಿಳಿಯುವಂತೆ ಒತ್ತಾಯಿಸಿದಾಗಲೂ ನಲ್ಲೂರು ಪ್ರಸಾದ್ ಉಸಿರೆತ್ತಿಲ್ಲ.



ಕನಿಷ್ಠ ಸ್ವಾಭಿಮಾನಿ ಕರ್ನಾಟಕ ಸಂಘಟನೆಯ ಚಂಪಾ ಆದರೂ ಬೀದಿಗಿಳಿಯುತ್ತಾರೆಂದೇ ಲೆಕ್ಕ ಹಾಕಿದ ಕನ್ನಡಿಗರ ನಿರೀಕ್ಷೆ ಹುಸಿಯಾಯಿತು. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ನಾಯಕ ಸಾ.ರಾ. ಗೋವಿಂದು, ಕನ್ನಡ ಸೇನೆಯ ಅಧ್ಯಕ್ಷ ಕೆ.ಆರ್. ಕುಮಾರ್, ಕನ್ನಡದ ಹೆಸರಲ್ಲೇ ಗೆದ್ದು ಶಾಸಕನಾಗಿದ್ದ ಹಾಲಿ ಚಳವಳಿಗಾರ ಪ್ರಭಾಕರ ರೆಡ್ಡಿ, ಜಾಣಗೆರೆ ವೆಂಕಟರಾಮಯ್ಯ ಇತ್ಯಾದಿ ಕನ್ನಡವೀರರ ಪೌರುಷವೇನಿದ್ದರೂ ತಮಿಳುನಾಡು ಮತ್ತು ತಮಿಳರ ವಿರುದ್ಧ ಮಾತ್ರವೆ?


ನಲ್ಲೂರು ಪ್ರಸಾದ್

ಕಾವೇರಿ ವಿಷಯದಲ್ಲಿ ರಕ್ತ ಹರಿಸುವ ಮಾತಾಡುತ್ತಾರೆ. ಹೊಗೇನಕಲ್ ವಿವಾದದಲ್ಲಿ ಕನ್ನಡ ತಾಯಿಯೇ ಮೈಮೇಲೆ ಬಂದಂತೆ ಬೊಬ್ಬೆ ಹಾಕುತ್ತಾರೆ. ಆದರೆ ಗಣಿರೆಡ್ಡಿ ಕರ್ನಾಟಕದ ಗಡಿಯನ್ನೇ ತಿದ್ದಿ ಆಂಧ್ರಕ್ಕೆ ಸೇರಿಸಿದ್ದು ಇವರ ಲೆಕ್ಕಕ್ಕೆ ವಿಷಯವೇ ಅಲ್ಲ. ಈತನಕ ಕಾವೇರಿ ಅನ್ಯಾಯದಲ್ಲಿ ತಮಿಳುನಾಡಿಗೆ ಹರಿದ ನೀರಿನ ಬೆಲೆಗೆ ಹೋಲಿಸಿದರೆ ಗಣಿರೆಡ್ಡಿ ಅದರ ಸಾವಿರ ಪಟ್ಟು ಹೆಚ್ಚು ಸಂಪತ್ತನ್ನು ಕೊಳ್ಳೆ ಹೊಡೆದಿದ್ದಾನೆ. ಹೊಗೇನಕಲ್‌ನ ಭೂಭಾಗವನ್ನು ತಮಿಳುನಾಡು ಕಬಳಿಸಿದ್ದನ್ನು ಕನ್ನಡ ತಾಯಿಯ ಕಾಲನ್ನೇ ಕತ್ತರಿಸಿದ್ದಕ್ಕೆ ಸಮವೆಂದು ವಾಟಾಳ್ ಭಾಷಣ ಬಿಗಿಯುತ್ತಾರೆ. ಇನ್ನು ನಾರಾಯಣಗೌಡನ ಪಾಲಿಗದು ಕನ್ನಡ ತಾಯಿಯನ್ನೇ ಕೊಲ್ಲುವ ಯತ್ನವಂತೆ.

ಹಾಗಾದರೆ ಕನ್ನಡ ತಾಯಿಯ ಕೈಯನ್ನೇ ಕತ್ತರಿಸಿದ ಜನಾರ್ದನ ರೆಡ್ಡಿಗೆ ಯಾವ ಶಿಕ್ಷೆ ಕೊಡಬೇಕು? ದುರಂತ ಎಂಥದ್ದೆಂದರೆ ಹೊಗೇನಕಲ್ ಭೂಮಿಯನ್ನು ತಮಿಳುನಾಡಿಗೆ ಸೇರಿಸಿದವರ್‍ಯಾರು ಕನ್ನಡಿಗರಲ್ಲ. ಆದರೆ ಜನಾರ್ದನ ರೆಡ್ಡಿ ಕರ್ನಾಟಕದ ಗಡಿಯನ್ನೇ ಆಂಧ್ರಕ್ಕೆ ಸೇರಿಸಿದ್ದೂ ಅಲ್ಲದೇ ಅದರಲ್ಲಿದ್ದ ಅದಿರನ್ನು ದೋಚಿ ಅದೇ ದುಡ್ಡು ಚೆಲ್ಲಿ ಕರ್ನಾಟಕದ ಮಂತ್ರಿಯಾಗುತ್ತಾನೆ. ದೋಚಿದ ದುಡ್ಡನ್ನೇ ಚೆಲ್ಲಿ ತನ್ನ ನಲವತ್ತು ಮಂದಿ ಚೇಲಾಗಳನ್ನು ಶಾಸಕರನ್ನಾಗಿ ಮಾಡುತ್ತಾನೆ. ಸಾಲದೆಂಬಂತೆ ತನ್ನ ಜೀತಕ್ಕಿದ್ದ ರಸ್ತೆ ರೌಡಿ ಶ್ರೀರಾಮುಲುವನ್ನು ಮಂತ್ರಿ ಮಾಡಿದ್ದೂ ಅಲ್ಲದೇ ಆತನೇ ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಎಂದು ಘೋಷಿಸುತ್ತಾನೆ.

ಎಲ್ಲಿಂದಲೋ ಬಂದವನೊಬ್ಬ ಕರ್ನಾಟಕವನ್ನೇ ದೋಚಿ, ಅದನ್ನೇ ಬಂಡವಾಳ ಮಾಡಿಕೊಂಡು ತನ್ನದೇ ಸರ್ಕಾರವನ್ನು ಸ್ಥಾಪಿಸುತ್ತಾನೆಂದರೆ ಮುಖ್ಯಮಂತ್ರಿಯನ್ನೇ ತನ್ನ ಕೈಗೊಂಬೆ ಮಾಡಿಕೊಂಡು ತಾನೇ ಮಂತ್ರಿಯಾಗುತ್ತಾನೆಂದರೆ; ಬಹುಶಃ ಲಾಲೂಪ್ರಸಾದ್ ಯಾದವ್ ಹೇಳಿದಂತೆ ಕನ್ನಡಿಗರಿಗಿಂತ ಮುಠ್ಠಾಳರು ಉಂಟೆ?

ಕಾವೇರಿ ನೀರನ್ನು ತಮಿಳರು ದೋಚಿದ್ದಾರೆಂದೇ ತಾನೇ ಈ ಕನ್ನಡವೀರರ ವಾದ? ಇರಲಿ, ವರನಟ ರಾಜ್‌ರನ್ನು ಅಪಹರಿಸಿದ ವೀರಪ್ಪನ್, ಬೆಳಗಾವಿಗೆ ಬೇಡಿಕೆ ಇಟ್ಟ ಮರಾಠರು, ತಿರುವಳ್ಳುವರ್ ಪ್ರತಿಮೆ ಇಟ್ಟವರು; ಯಾವುದನ್ನು ಈ ಕನ್ನಡವೀರರೆಲ್ಲ ಕನ್ನಡಿಗರ ಪಾಲಿನ ಪರಮ ದ್ರೋಹವೆಂದು ಭಾವಿಸುತ್ತಾರೋ ಅವರ್‍ಯಾರೂ ಜನಾರ್ದನ ರೆಡ್ಡಿಯಂತೆ ಕರ್ನಾಟಕಕ್ಕೇ ಬಂದು ಮಂತ್ರಿಗಳಾಗಿಲ್ಲ. ಕನ್ನಡಿಗರನ್ನೇ ಧಿಕ್ಕರಿಸಿ ತನ್ನ ಛೇಲಾ ಒಬ್ಬನನ್ನು ಭಾವಿ ಮುಖ್ಯಮಂತ್ರಿಯೆಂದು ಘೋಷಿಸಿಲ್ಲ.

ಜನಾರ್ದನ ರೆಡ್ಡಿಗೆ ಹೋಲಿಸಿದರೆ ಕರುಣಾನಿಧಿ, ವೀರಪ್ಪನ್, ಬಾಳಾಠಾಕ್ರೆಗಳೇ ಸಾವಿರ ಪಾಲು ಮೇಲಲ್ಲವೇ? ಇಂಥವನೊಬ್ಬ ಮಂತ್ರಿಯಾಗಿದ್ದನ್ನು ಕರ್ನಾಟಕದ ಭೂಭಾಗವನ್ನೇ ಆಂಧ್ರಕ್ಕೆ ಸೇರಿಸಿ, ಸಹಸ್ರಾರು ಕೋಟಿಯ ಅದಿರು ದೋಚಿದ್ದನ್ನು ಕಂಡೂಕಾಣದಂತಿರುವ ಈ ಕನ್ನಡ ವೀರರದು ಕನ್ನಡಾಭಿಮಾನವೋ ಅಥವಾ ಕನ್ನಡ ದ್ರೋಹವೋ?

■ ರಾ. ಸೋಮನಾಥ್


## ಬಳ್ಳಾರಿಯ ಗಣಿ ಕಳ್ಳನೇ ರಕ್ಷಣಾ ವೇದಿಕೆಯ ಅಧ್ಯಕ್ಷ?

ರಕ್ಷಣಾ ವೇದಿಕೆಯ ನಾಯಕ ಕಂ ಮಾಲೀಕ ನಾರಾಯಣಗೌಡನ ಗಣಿರೆಡ್ಡಿಗಳ ಭಕ್ತಿ ಯಾವ ಮಟ್ಟದ್ದೆಂದರೆ, ಕೆಲ ತಿಂಗಳ ಹಿಂದೆ ರಕ್ಷಣಾ ವೇದಿಕೆಯ ಬಳ್ಳಾರಿ ಘಟಕಕ್ಕೆ ಅಧ್ಯಕ್ಷನಾಗಿದ್ದ ಮೀನಳ್ಳಿ ಚಂದ್ರಶೇಖರ್ ಬಳ್ಳಾರಿಯ ರಸ್ತೆ ದುರವಸ್ಥೆಯ ವಿರುದ್ಧ ಪ್ರತಿಭಟನೆಯೊಂದಕ್ಕೆ ಕರೆಕೊಟ್ಟ. ಹಾಗೇ ಕರೆಕೊಟ್ಟದ್ದೇ ರಾಜ್ಯಾಧ್ಯಕ್ಷ ನಾರಾಯಣಗೌಡನ ಪಾಲಿಗೆ ಅಪರಾಧವೆನಿಸಿತ್ತು.

ಏಕೆಂದರೆ ರಸ್ತೆ ದುರವಸ್ಥೆ ಮತ್ತು ಕಾಮಗಾರಿಯ ಭ್ರಷ್ಟಾಚಾರಕ್ಕೆ ಕಾರಣನಾಗಿದ್ದೇ ಜನಾರ್ದನ ರೆಡ್ಡಿ. ರೆಡ್ಡಿಯ ಋಣದಲ್ಲಿದ್ದ ನಾರಾಯಣಗೌಡನ ಸಂಘಟನೆಯ ಬಳ್ಳಾರಿ ಘಟಕವೇನಾದರೂ ರಸ್ತೆ ಕಾಮಗಾರಿ ಕರ್ಮಕಾಂಡದ ವಿರುದ್ಧ ಬೀದಿಗಿಳಿಯಿತೆಂದರೆ ಸಹಜವಾಗೇ ಅದು ಗಣಿರೆಡ್ಡಿಯ ವಿರುದ್ಧದ ಹೋರಾಟವಾಗುತ್ತದೆ.

ಇದನ್ನು ನಾರಾಯಣಗೌಡ ಸಹಿಸುವುದುಂಟೆ? ಇನ್ನು ರೆಡ್ಡಿಯ ಭಕ್ತಿ ಮೆರೆಯಬೇಕಲ್ಲ, ಅದಕ್ಕೆ ನಾ.ಗೌ. ತನ್ನ ಬಳ್ಳಾರಿ ಘಟಕದ ಅಧ್ಯಕ್ಷ ಮೀನಳ್ಳಿ ಚಂದ್ರಶೇಖರನನ್ನೇ ಕಿತ್ತುಹಾಕಿ ಆ ಜಾಗಕ್ಕೆ ಗಣಿರೆಡ್ಡಿಯ ಪಕ್ಕಾ ಛೇಲಾ ಮತ್ತು ಸಂಬಂಧಿ ಪ್ರತಾಪ್ ರೆಡ್ಡಿಯನ್ನು ನೇಮಿಸಿಬಿಟ್ಟ. ಈ ಪ್ರತಾಪ್ ರೆಡ್ಡಿ ಕೂಡ ಆಂಧ್ರ ಮೂಲದ ಗಣಿ ಕಳ್ಳನೇ. ಕನ್ನಡ ಬರೋಲ್ಲ, ಹೇಗಿದೆ ನಾರಾಯಣಗೌಡನ ಕನ್ನಡಾಭಿಮಾನ? ಇನ್ನು ರಕ್ಷಣಾ ವೇದಿಕೆ ಗಡಿಲೂಟಿ-ಗಣಿಲೂಟಿಯ ವಿರುದ್ಧ ಸೊಲ್ಲೆತ್ತುವುದು ಎಲ್ಲಾದರು ಉಂಟೆ? ■

## ಮುಖ್ಯಮಂತ್ರಿ ಚಂದ್ರು ಎಂಬ ಕೋಡಂಗಿ



ನಿನ್ನೆಮೊನ್ನೆಯ ತನಕ ರಂಗಕರ್ಮಿ ನಾಗರಾಜಮೂರ್ತಿಯನ್ನು ಮುಂದಿಟ್ಟುಕೊಂಡು ಗಡಿಯಾತ್ರೆಯ ರೈಲು ಬಿಟ್ಟ ಮುಖ್ಯಮಂತ್ರಿ ಚಂದ್ರು ಸದ್ಯ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ.

ಮನಸ್ಸು ಮಾಡಿದರೆ ಕರ್ನಾಟಕದ ಗಡಿಯನ್ನೇ ಕಬಳಿಸಿದ ಜನಾರ್ದನ ರೆಡ್ಡಿಯ ವಿರುದ್ಧ ಹೋರಾಡುವುದು ಚಂದ್ರುಗೆ ಕಷ್ಟವೇನಲ್ಲ. ಅಷ್ಟಕ್ಕೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಲ್ಲದೇ ಇನ್ನಾರು ದನಿಯೆತ್ತಬೇಕು? ಹೇಗೂ ಬಿಜೆಪಿ ಅಧಿಕಾರಕ್ಕೆ ಬರುವ ತನಕ ಚಂದ್ರು ಹೋರಾಡಿಕೊಂಡಿದ್ದದ್ದು ಗಡಿ ರಕ್ಷಣೆಯಾಗಿಯೇ ತಾನೆ?


ಆದರೆ ಮುಖ್ಯಮಂತ್ರಿ ಚಂದ್ರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿ ಕಡಿದು ಗುಡ್ಡೆಹಾಕಿದ್ದು ಇಡ್ಲಿ-ವಡೆ ಮತ್ತು ಬೋಂಡಾ ಸಾಂಬಾರ್ ತಿಂದ ಹೋಟೆಲ್ ಬಿಲ್ಲುಗಳನ್ನೇ ಹೊರತು ಗಣಿ ರೆಡ್ಡಿಗಳ ಮುಂದೆ ಬಾಲ ಬಿಚ್ಚಲಿಲ್ಲ. ಬಿಚ್ಚುವ ಧೈರ್ಯವೂ ಇಲ್ಲ. ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನೇ ಗಣಿರೆಡ್ಡಿಗೆ ಮಾರಿಕೊಂಡ ಮುಖ್ಯಮಂತ್ರಿ ಚಂದ್ರು ಇನ್ನು ಅದ್ಯಾವ ಬಾಯಲ್ಲಿ ಕನ್ನಡ ಪ್ರೇಮದ ಡೈಲಾಗ್ ಹೊಡೆಯಲು ಸಾಧ್ಯ? ■

## ಮುತ್ತಪ್ಪ ರೈನ 'ಭಯ' ಕರ್ನಾಟಕ

ಹೊಗೇನಕಲ್ ಗಡಿ ವಿವಾದದ ಸಂದರ್ಭದಲ್ಲಿ ಐನೂರಕ್ಕೂ ಹೆಚ್ಚು ಕಾರುಗಳಲ್ಲಿ ತಮಿಳುನಾಡಿನ ವಿರುದ್ಧ ಮುತ್ತಪ್ಪ ರೈ ತನ್ನ ತಂಡದೊಂದಿಗೆ ದಂಡೆತ್ತಿ ಹೋಗಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ನಿನ್ನೆಮೊನ್ನೆಯ ತನಕ ಕರುಣಾನಿಧಿ ಹೇಳಿಕೆಯನ್ನು ಪ್ರತಿಭಟಿಸಿದವರಲ್ಲಿ ಜಯ ಕರ್ನಾಟಕ ಸಂಘಟನೆಯೂ ಒಂದು. ಈ ಬಗ್ಗೆ ಮುತ್ತಪ್ಪ ರೈನ ಜಯ ಕರ್ನಾಟಕದ ಕನ್ನಡಾಭಿಮಾನ ಕುರಿತಂತೆ ಅನುಮಾನಗಳು ಬೇಕಿಲ್ಲ.

ಆದರೆ ಗಡಿ ಕಬಳಿಸಿದ್ದೂ ಅಲ್ಲದೇ ಅದರಲ್ಲಿದ್ದ ಸಾವಿರಾರು ಕೋಟಿಯ ಅದಿರನ್ನು ದೋಚಿದ ಜನಾರ್ದನರೆಡ್ಡಿಯ ಬಗ್ಗೆ ಮುತ್ತಪ್ಪ ರೈ ಆಗಲಿ, ಆತನ ಜಯಕರ್ನಾಟಕ ಸಂಘಟನೆಯಾಗಲಿ ಕಾಟಾಚಾರಕ್ಕೂ ಸಣ್ಣದೊಂದು ಹೇಳಿಕೆಯನ್ನು ಈತನಕ ಕೊಟ್ಟಿಲ್ಲವೆಂದರೆ ಏನರ್ಥ?

ಕರುಣಾನಿಧಿ ಮಾಡಿದರಷ್ಟೇ ಅದು ದ್ರೋಹವೆ? ಅದನ್ನೇ ಗಣಿರೆಡ್ಡಿ ಮಾಡಿದರೆ ಸ್ನೇಹವೆ? ಕ್ಷುಲ್ಲಕ ಕಾರಣಕ್ಕೆಲ್ಲ ಬೀದಿಗಿಳಿದು ಗುರುಗುಡುವ ಜಯಕರ್ನಾಟಕಕ್ಕೂ ನಾರಾಯಣಗೌಡನ ರಕ್ಷಣಾ ವೇದಿಕೆಗೂ ಏನು ವ್ಯತ್ಯಾಸ ಬಂತು? ■



# ಬಾಲಿಶ ಮುನಿಸು

ಸಿದ್ದರಾಮಯ್ಯನವರ ಮುನಿಸಿನ ರಾಜಕೀಯ ಸದ್ಯಕ್ಕೆ ನಿಲ್ಲುವಂತೆ ಕಾಣುತ್ತಿಲ್ಲ. ಸಕ್ರಿಯ ರಾಜಕಾರಣಿಯೊಬ್ಬ ಏನನ್ನು ಮಾಡಕೂಡದೋ ಅಂಥದ್ದನ್ನೇ ಹುಡುಕಿಕೊಂಡು ಹೋಗುವುದರಿಂದ ಏನು ಪ್ರಯೋಜನವೋ ಏನೊ ಆದರೂ ಸಿದ್ದು ಅದೇ ದಾರಿ ಹಿಡಿದಿದ್ದಾರೆ.

## ನಿಷ್ಕ್ರಿಯತೆಯ ಹಾದಿ ಅದು!

ಈಗಿನ 8 ಕ್ಷೇತ್ರಗಳ ಉಪಚುನಾವಣೆಯಲ್ಲಿ ಯಾವ ಕ್ಷೇತ್ರಕ್ಕೂ ಹೋಗಲಿಲ್ಲ. ಸಿದ್ದರಾಮಯ್ಯ ಕಾಂಗ್ರೆಸ್ ಪರವಾಗಿ ಮನೆಯಿಂದಾಚೆಗೆ ಒಂದು ಹೆಜ್ಜೆಯನ್ನು ಎತ್ತಿಡಲಿಲ್ಲ. ಅಷ್ಟೇ ಅಲ್ಲ ಒಂದೇ ಒಂದು ಮಾತನ್ನೂ ಖರ್ಚು ಮಾಡಲಿಲ್ಲ!

ಕರ್ನಾಟಕದ ಕೆಲವೇ ಕೆಲವು ಮಾಸ್ ಲೀಡರ್‌ಗಳಲ್ಲಿ ಒಬ್ಬರಾಗಿರುವ ಸಿದ್ದು ರಾಜ್ಯದಲ್ಲಿ ಅತಿ ಮುಖ್ಯವಾದ ರಾಜಕೀಯ ಘಟನೆಗಳು ನಡೆಯುತ್ತಿರುವಾಗ ಜನರ ಬಳಿ ಹೋಗಲೇ ಇಲ್ಲ ಅಂದರೆ ಏನರ್ಥ? ಅವರ ನಿಷ್ಕ್ರಿಯತೆ ಹಾಗೂ ಮೌನ ಯಾವ ಅತಿರೇಕಕ್ಕೆ ಹೋಗಿತ್ತೆಂದರೆ ಸಿ.ಟಿ. ರವಿಯಂತಹ ಬಿಜೆಪಿಯ ತೂಕರಹಿತ ಆಸಾಮಿ ಕೂಡ 'ಸಿದ್ದರಾಮಯ್ಯ ಬಿಜೆಪಿ ಸೇರಲಿದ್ದಾರೆ' ಎಂದು ಹೇಳಿಕೆ ಕೊಟ್ಟ. ಅದರ ಹಿಂದೆಮುಂದೆಯೇ ಸದಾನಂದ ಗೌಡರೂ 'ಸಿದ್ದು ಬಿಜೆಪಿಗೆ ಬಂದರೆ ಸ್ವಾಗತ' ಎಂದಿದ್ದರು. ಕೊನೆಗೆ ಇನ್ನೊಬ್ಬ ಅಹಿಂದ ನಾಯಕ ಕೋದಂಡರಾಮಯ್ಯ, ಪತ್ರಿಕಾಗೋಷ್ಠಿ ನಡೆಸಿ 'ಇದೆಲ್ಲಾ ಸುಳ್ಳು' ಎಂದು ಸ್ಪಷ್ಟನೆ ನೀಡಬೇಕಾಯಿತು.




ಸಿದ್ದರಾಮಯ್ಯ ಬಿಜೆಪಿ ಸೇರುತ್ತಾರೆಂದರೆ ಯಾರೂ ನಂಬುವುದಿಲ್ಲ, ಅದು ಬೇರೆ ಮಾತು ಬಿಡಿ. ಆದರೆ ದಿನಬೆಳಗಾದರೆ ದೇವೇಗೌಡರನ್ನು ಬೈಯ್ಯುವುದು, ಕಾಂಗ್ರೆಸ್‌ನ ಜೊತೆಗಾರರೊಂದಿಗೆ ಮುನಿಸಿಕೊಂಡು ದೂರ ನಿಲ್ಲುವುದು ಹಾಗೂ ಅದೇ ವೇಳೆಗೆ ಬಿಜೆಪಿಗಳ ದುರಾಶೆಗೆ ಉತ್ತೇಜನ ನೀಡುವಂಥ ವರ್ತನೆಗಳಿಂದ ಸಿದ್ದು ಏನು ಸಾಧಿಸಲು ಹೊರಟಿದ್ದಾರೆ ಎಂಬುದೇ ಯಾರಿಗೂ ಅರ್ಥವಾಗುತ್ತಿಲ್ಲ.

ಸಿದ್ದರಾಮಯ್ಯನವರ ಇತ್ತೀಚಿನ ನಿಷ್ಕ್ರಿಯ **self centred politics** ನಲ್ಲಿ ಎದ್ದು ಕಾಣುತ್ತಿರುವ ಅಂಶ ಇದೊಂದೆ. ರಾಜಕೀಯ ಎಂಬ ಹರಿಯುವ ನೀರಿನೊಂದಿಗೆ ತೇಲಿ ಹೋಗದೆ ತಾನೇ ದೂರ ನಿಂತು ಪ್ರತ್ಯೇಕ ಹೊಂಡವಾಗಷ್ಟೇ ಉಳಿದುಕೊಂಡರೆ ಆ ನೀರು ಇಂಗಿ ಹೋಗುವುದು ಗ್ಯಾರಂಟಿ ಅಲ್ಲವೆ? ಸಿದ್ದರಾಮಯ್ಯನವರ ರಾಜಕೀಯವನ್ನು ಗಮನಿಸಿದರೆ ಅವರು ಮುಂದಾಲೋಚನೆಯಿರದ ಸ್ವಯಂನಾಶದ ಹಾದಿಯತ್ತ ಹೊರಳುತ್ತಿರುವುದು ಕಾಣುತ್ತಿದೆ.

## ಗೌಡರ ಟೀಕೆಗೆ ಕೊನೆ ಇಲ್ಲವೆ?


ಸಿದ್ದರಾಮಯ್ಯನವರ ಬಲುದೊಡ್ಡ ದೌರ್ಬಲ್ಯ ಇದು. ಕಳೆದ ಎರಡು ದಶಕಗಳಿಂದ ಜನತಾ ಪರಿವಾರದಲ್ಲೇ ಬೆಳೆದು ದೊಡ್ಡ ನಾಯಕರೆನಿಸಿಕೊಂಡಿರುವ ಸಿದ್ದುಗೆ 'ತಮಗೆ ಸಿಎಂ ಸ್ಥಾನ' ತಪ್ಪಿಹೋದ ಕಹಿ ಭಾವನೆ ಈಗಲೂ ಹೋಗಿಲ್ಲ. 1996ರಲ್ಲಿ ದೇವೇಗೌಡ ಪ್ರಧಾನಿಯಾದಾಗ ಅಲ್ಲಿ ಖಾಲಿ ಬಿದ್ದ ಸಿಎಂ ಕುರ್ಚಿಗೆ ಲಿಂಗಾಯತ ಲಾಬಿ ಬಳಸಿ ಜೆ.ಎಚ್. ಪಟೇಲ್ ಬಂದಿದ್ದರು. ಆಗ ಸಿದ್ದು ಮಹತ್ವದ ಹಣಕಾಸು ಮಂತ್ರಿಯಾಗಷ್ಟೇ ಉಳಿದರು. ಮುಂದೆ 2006ರ ಫೆಬ್ರವರಿಯಲ್ಲಿ ಇನ್ನೊಂದು ರಾಜಕೀಯ ಬಿಕ್ಕಟ್ಟು ಉದ್ಭವಿಸಿ ಕುಮಾರಸ್ವಾಮಿ ಮುಖ್ಯಮಂತ್ರಿಯಾದರು. ಅದಕ್ಕೆ ದೇವೇಗೌಡರು ಕೊಟ್ಟ ಸಮರ್ಥನೆ ಏನು?

ಜೆಡಿಎಸ್ ವಿಭಜಿಸಲು ಕಾಂಗ್ರೆಸ್‌ನ ಎಸ್.ಎಂ. ಕೃಷ್ಣ ಪಿತೂರಿ ಮಾಡಿದ್ದರು. ಅದಕ್ಕೆ ಬಿಜೆಪಿ ಜೊತೆ ಸೇರಿ ಸರ್ಕಾರ ಮಾಡಬೇಕಾಗಿಬಂತು ಎಂದಲ್ಲವೆ?



ಇದರಲ್ಲಿ ಸ್ವಲ್ಪ ಸತ್ಯಾಂಶ ಇದ್ದರೂ ಬಾಕಿಯದು ಉತ್ಪ್ರೇಕ್ಷೆಯಾಗಿತ್ತು. ಇದೇನೆ ಇರಲಿ, 2006ರ ಕರ್ನಾಟಕದ ರಾಜಕಾರಣದಲ್ಲಿ ಸರ್ಕಾರಗಳ ಅದಲುಬದಲು ಚಟುವಟಿಕೆಗಳಲ್ಲಿ ಸಿದ್ದರಾಮಯ್ಯನವರಿಗೆ ಮಹತ್ವದ ಪಾತ್ರ ಇರಲಿಲ್ಲ. ತಪ್ಪೋ ಸರಿಯೋ ಅವತ್ತು ನಡೆದದ್ದೆಲ್ಲಾ ಸಿದ್ದರಾಮಯ್ಯ ಪ್ರಭಾವ, ವ್ಯಾಪ್ತಿ ಹಾಗೂ ನಿಯಂತ್ರಣದ ಆಚೆಗಿನ ವಿಚಾರ ಎಂಬಂತಿತ್ತು. ಆಮೇಲೆ ಕುಮಾರಸ್ವಾಮಿ ಒಂದೂಮುಕ್ಕಾಲು ವರ್ಷ ಸಿಎಂ ಆಗಿದ್ದರು. ಆ ನಡುವೆ ಸಿದ್ದು ದಳ ತ್ಯಜಿಸಿ ಕಾಂಗ್ರೆಸ್ ಸೇರಿ ಮತ್ತೆ ಶಾಸಕರಾದರು. ಗೌಡರ ಜೊತೆಗೇ ಇದ್ದ ಎಂ.ಪಿ. ಪ್ರಕಾಶ್ ಕೆಲಕಾಲ ಡಿಸಿಎಂ ಆಗಿದ್ದು ಆಮೇಲೆ ಕಾಂಗ್ರೆಸ್‌ನತ್ತ ಬಂದಿದ್ದರು.

ಆದರೆ ರಾಜಕೀಯ ಹೋರಾಟ ಅಂದರೇನು, ಸೋಲು-ಗೆಲುವಿನ ಬೆಲೆ ಏನೆಂಬುದು ಸಿದ್ದುಗೆ ಚಾಮುಂಡೇಶ್ವರಿ ಉಪಚುನಾವಣೆಯ ಫಲಿತಾಂಶದಲ್ಲೇ ಅರ್ಥವಾಗಿರಬೇಕಿತ್ತು. ಆ ಚುನಾವಣೆ ಬಹುಶಃ ಅವರ ಇಡೀ ರಾಜಕೀಯ ಜೀವನದ ಅಸಲಿ ಹೋರಾಟದ ಜಿದ್ದಾಜಿದ್ದಿಯ ಅಳಿವು ಉಳಿವಿನ ಹೋರಾಟವಾಗಿತ್ತು. ಸಿದ್ದು ಅದರಲ್ಲಿ **narrow escape** ಆಗಿ ಗೆದ್ದು ಬಂದಿದ್ದರು. ಸೆಟೆದು ನಿಲ್ಲದಿದ್ದರೆ ಗೆಲುವು ಸಿಗಲ್ಲ. ಅಳುತ್ತಾ ಮೂಲೆ ಸೇರಿದರೆ, ಮುನಿಸಿಕೊಂಡರೆ ರಾಜಕಾರಣಿ ಅನಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಪಾಠ ಹೇಳಿದ ಚುನಾವಣೆ ಅದಾಗಿತ್ತು. ಗುಂಪಿನಿಂದ ಬೇರಾದಾಗ ಸ್ನೇಹಿತರಾಗಿದ್ದವರೇ ಶತ್ರುಗಳಂತೆ ದಾಳಿ ಮಾಡುತ್ತಾರೆಂಬ ಪಾಠ ಅದು. ಹೋರಾಡದಿದ್ದರೆ ಮುಖ್ಯಮಂತ್ರಿ ಗಾದಿಯಿರಲಿ ಜುಜುಬಿ ಶಾಸಕಗಿರಿಯೂ ಸಿಗಲಾರದೆಂಬ ಕಹಿ ವಾಸ್ತವದ ಪಾಠ ಅದು.



ಆದರೆ ರಾಜಕಾರಣದ ಈ ನಿಷ್ಠುರ ಸತ್ಯವನ್ನು ಸಿದ್ದರಾಮಯ್ಯ ಈಗಲೂ ಅರಗಿಸಿಕೊಂಡಂತೆ ಕಾಣುತ್ತಿಲ್ಲ. ಬದಲಾಗಿ ಹೋದಲ್ಲಿ ಬಂದಲ್ಲೆಲ್ಲಾ ದೇವೇಗೌಡರನ್ನು ಟೀಕಿಸುತ್ತಾ ಇರುತ್ತಾರೆ. ಮಜಾ ಏನೆಂದರೆ ರಾಜ್ಯದ ಜನತೆ ಇದನ್ನೆಲ್ಲಾ ಈಗಾಗಲೇ ಮರೆತಾಗಿದೆ. ಸಿದ್ದರಾಮಯ್ಯ ಮುಂದೆಂದಾದರೂ ರಾಜ್ಯ ಕಾಂಗ್ರೆಸ್‌ನ ಮುಂಚೂಣಿ ಲೀಡರ್ ಆದಾಗ ಯಾರಿಗೆ ಗೊತ್ತು ಅವತ್ತು ಜೆಡಿಎಸ್‌ನವರೊಂದಿಗೆ ಮೈತ್ರಿಯ ಸಂದರ್ಭ ಬರಲೂಬಹುದಲ್ಲವೆ?

ಆಗಲೂ ಗೌಡರನ್ನು ಶಪಿಸುತ್ತಾ ಕುಳಿತರೆ ಸಿದ್ದು ರಾಜಕಾರಣಿ ಎನಿಸಿಕೊಳ್ಳಲು ಸಾಧ್ಯವೆ ಹೇಳಿ?

## ಕಾಂಗ್ರೆಸ್‌ನಲ್ಲೂ ಮುನಿಸು ಪರ್ವ

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗುವ, ವಿರೋಧ ಪಕ್ಷದ ಮುಖಂಡರಾಗುವ ಹಾಗೂ ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗುವ ಎಲ್ಲಾ ಅರ್ಹತೆಗಳೂ ಸಿದ್ದರಾಮಯ್ಯನವರಿಗಿದೆ. ಕರ್ನಾಟಕದ ಮುಖ್ಯಮಂತ್ರಿಯಾಗಬಲ್ಲ ಅರ್ಹತೆಯೇ ಇರುವಾಗ ಇವೆಲ್ಲಾ ದೊಡ್ಡ ಹುದ್ದೆಗಳಲ್ಲ ಬಿಡಿ. ಆದರೆ ಸಿದ್ದರಾಮಯ್ಯ ಬಯಸಿದಷ್ಟು ವೇಗವಾಗಿ ಇವೆಲ್ಲಾ ಕೈಗೂಡುತ್ತಿಲ್ಲ ಅಷ್ಟೆ. ಕಾಂಗ್ರೆಸ್ ಮೊದಲಿನಿಂದಲೂ ಒಂದು ಜಡ ಪಕ್ಷ. ಹೆಬ್ಬಾವಿನಂತೆ ಸಿಕ್ಕಿದ್ದು ನುಂಗಿ ಮಲಗಿಬಿಟ್ಟರೆ ಮತ್ತೆ ಹಸಿವಾದಾಗಲೇ ಎಚ್ಚರಗೊಳ್ಳುವಂಥ ಪಕ್ಷ. ಇಲ್ಲಿ ಕೆಲಸಕ್ಕೆ ಬಾರದವರೇ ನಾಯಕರಾಗುವುದು. ಮಾತ್ರವಲ್ಲ ಹಿತ್ತಾಳೆ ಕಿವಿಯ ಹೈಕಮಾಂಡ್, ಚಾಡಿಕೋರರು, ಅವಕಾಶವಾದಿಗಳೆಲ್ಲಾ ತುಂಬಿ ತುಳುಕುತ್ತಿದ್ದಾರೆ. ಇದೊಂಥರ **package deal** ಇದ್ದಂತೆ. ಕಾಂಗ್ರೆಸ್ ಸೇರುವವರು ಇಂಥದ್ದನ್ನೆಲ್ಲಾ ಸಹಿಸಿಕೊಂಡೇ ಮುಂದುವರೆಯಬೇಕಾಗುತ್ತದೆ. ಸಿದ್ದರಾಮಯ್ಯಗೆ ಇದೆಲ್ಲಾ ಗೊತ್ತಿರದ ಸಂಗತಿಗಳೇನಲ್ಲ. ಉತ್ಸಾಹ ಕಳೆದುಕೊಳ್ಳದೆ ಕೆಲಸ ಮಾಡುತ್ತಾ ಹೋಗುವುದು ಹಾಗೂ ಅವಕಾಶ ಸಿಕ್ಕಾಗ, ಸೂಕ್ತ ಸಂದರ್ಭ ಬಂದಾಗ ತಾನು ಬಯಸಿದ್ದನ್ನು ಪಡೆಯಲು ನಿಸ್ಸಂಕೋಚವಾಗಿ ಮುನ್ನುಗ್ಗಬೇಕಿರುವುದು ಕಾಂಗ್ರೆಸ್ಸಿಗರಿಗೆ ಇರಬೇಕಾದ ಗುಣ.

ಆದರೆ ಸಿದ್ದು ಈಗ ವಿರುದ್ಧ ದಿಕ್ಕಿನಲ್ಲಿ ಹೊರಟಿದ್ದಾರೆ. ಡಿಕೆ ಹಾಗೂ ದೇಶಪಾಂಡೆ ರಾಜ್ಯ ಕಾಂಗ್ರೆಸ್ ನಾಯಕರಾಗಿ ಅಧಿಕಾರ ಸ್ವೀಕರಿಸಿದಾಗ ಸಿದ್ದು ದೊಡ್ಡಬಳ್ಳಾಪುರದತ್ತ ತಲೆ ಹಾಕಲೇ ಇಲ್ಲ. ಅಧಿಕಾರಾರೂಢ ಬಿಜೆಪಿ ನಾಯಕ ಸದಾನಂದಗೌಡ ತಮ್ಮ ಮನೆಗೆ ಬಂದಾಗ ಬೈಯ್ದು ಓಡಿಸಲೂ ಇಲ್ಲ, ಸಿದ್ದು ಬಿಜೆಪಿ ಸೇರುತ್ತಾರಂತೆ ಅಂತ ಗಾಳಿಸುದ್ದಿ ಹಬ್ಬಿದಾಗ ಖಚಿತವಾಗಿ ನಿರಾಕರಿಸಲೂ ಇಲ್ಲ. ಈಗ ಎಂಟು ಕ್ಷೇತ್ರಗಳಲ್ಲಿ ಉಪಚುನಾವಣೆ ನಡೆದಾಗಿದೆ. ಅದರಲ್ಲಿ ಕಾಂಗ್ರೆಸ್ ಗೆಲ್ಲಲಿ ಅಥವಾ ಸೋಲಲಿ ಅದರಲ್ಲಿ ಸಿದ್ದು ಪಾತ್ರ ಇಲ್ಲವೇ ಇಲ್ಲ, ಇದೆಂತಹ ರಾಜಕೀಯ?

## ಬೇರೆ ಆಯ್ಕೆ ಏನಿದೆ?

ಸಿದ್ದರಾಮಯ್ಯ ಪ್ರಾದೇಶಿಕ ಪಕ್ಷ ಕಟ್ಟುತ್ತಾರಂತೆ ಎಂಬ ತೆಲುಸುದ್ದಿ ಒಂದೆರಡು ವರ್ಷಗಳಿಂದಲೂ ಇದೆ. ಅಂತ ಪ್ರಯತ್ನಕ್ಕೆ ಯಶ ಸಿಗುವುದಿಲ್ಲವೆಂಬ ಸತ್ಯ ಸ್ವತಃ ಸಿದ್ದರಾಮಯ್ಯಗೇ ಗೊತ್ತಿದೆ. ಮಾಯಾವತಿಯ ಬಿಎಸ್‌ಪಿ, ಸಮಾಜವಾದಿ ಪಕ್ಷ, ಭೂಮಾಫಿಯಾಗಳ ರಹಸ್ಯ ಬೆಂಬಲ ಹೊಂದಿರುವ ಸರ್ವೋದಯ ಎಂಬ ಲೆಟರ್‌ಹೆಡ್ ಪಕ್ಷ.... ಹೀಗೆ ನಾನಾ ಊಹಾಪೋಹಗಳನ್ನೆಲ್ಲಾ ಹಾದು ಕೊನೆಗೆ ಕರ್ನಾಟಕ ಜನತಾದಳವೆಂಬ ಹೊಸ ಪಕ್ಷ ತೇಲಿಬಿಡುವ ತನಕ ಮಾತುಗಳಿದ್ದವು. ಆದರೆ ಇವತ್ತಿನವರೆಗೂ ಅಂತಹ ಯಾವ ಸಿನಿಮಾನು ರಿಲೀಸ್ ಆಗಿಲ್ಲ. ಒಂದು ಹಂತದಲ್ಲಿ ಯಡಿಯೂರಪ್ಪ 100 ಕೋಟಿ ರೂಪಾಯಿ ಪಂಪ್ ಮಾಡಿ ಸಿದ್ದುರಿಂದ ಹೊಸ ಪಕ್ಷ ಹುಟ್ಟುಹಾಕಿಸುತ್ತಿದ್ದಾರೆಂಬ ಮಾತೂ ಇತ್ತು. ದಳ-ಕಾಂಗ್ರೆಸ್ ದುರ್ಬಲಗೊಳಿಸುವ ಬಿಜೆಪಿಗಳ ಪಿತೂರಿಯ ಭಾಗ ಅದು.

ಆದರೆ ಆ ಮಾತು ಈಗ ನಿಂತು ಹೋಗಿದೆ.

'ಸಿದ್ದರಾಮಯ್ಯಗೆ ಸದ್ಯದಲ್ಲೇ ಮಹತ್ವದ ಹುದ್ದೆ ಸಿಗಲಿದೆ' ಎಂದು ಕಳೆದ ತಿಂಗಳು ದೇಶಪಾಂಡೆ ಹೇಳಿದ್ದರು. ಅಂಥದ್ದೂ ಏನೂ ನಡೆಯುತ್ತಿಲ್ಲ. ಇದನ್ನೆಲ್ಲಾ ನೋಡಿ ನೋಡಿ ಸ್ವತಃ ಸ್ವಾಭಿಮಾನಿಯಾಗಿರುವ ಸಿದ್ದರಾಮಯ್ಯನವರಿಗೆ ಬೇಸರ, ಜಿಗುಪ್ಸೆಯಾಗಿರಲಿಕ್ಕೂ ಸಾಕು.

ಆದರೆ ರಾಜಕಾರಣದಲ್ಲಿ ಬಡಿದಾಟಕ್ಕೆ ಆಸ್ಪದವಿದೆಯೇ ವಿನಃ ಬೇಸರ-ನಿರಾಶೆಗಳಿಗಲ್ಲ.

ತಾವು ನಂಬಿರುವ ಅಹಿಂದ ವರ್ಗಗಳ ಹಿತರಕ್ಷಣೆಗಾಗಿ ಕರ್ನಾಟಕದ ರಾಜಕೀಯದಲ್ಲಿ ತಮಗೊಂದು ಪಾತ್ರ ಹಾಗೂ ಜವಾಬ್ದಾರಿ ಇದೆ ಅನ್ನಿಸಿದರೆ ಸಿದ್ದರಾಮಯ್ಯ ಮೊದಲು ಈ ನಿಷ್ಕ್ರಿಯತೆಯಿಂದ ಆಚೆ ಬರಲಿ.

■ ಪಾರ್ವತೀಶ್

## ಅನುಭವಿ ರಾಜಕಾರಣಿ ಹೇಳಿದ್ದು

ಕಾಲ ಯಾರಿಗೂ ಕಾಯುವುದಿಲ್ಲ

ಸಿದ್ದರಾಮಯ್ಯನವರ ನಿಷ್ಕ್ರಿಯ ರಾಜಕಾರಣದ ಬಗ್ಗೆ ಇವತ್ತು ಎಲ್ಲಾ ಪಕ್ಷಗಳಲ್ಲೂ ಚರ್ಚೆಯಾಗುತ್ತಿದೆ. ಸಿದ್ದು ಜೊತೆಗಾರರಾದ ಡಾ. ಮಹದೇವಪ್ಪ, ಬಿ.ಆರ್. ಪಾಟೀಲ್, ವರ್ತೂರು ಪ್ರಕಾಶ್, ಸುಭಾಷ್ಚಂದ್ರ, ಮಳವಳ್ಳಿ ಶಿವಣ್ಣ ಮುಕುಡಪ್ಪನವರು ಏನೇನು ಯೋಚಿಸುತ್ತಿದ್ದಾರೊ ಬಲ್ಲವರಿಲ್ಲ, ಆದರೆ ಜನ ಮಾತ್ರ ಅಸಹನೆ ತೋರಿಸುತ್ತಿದ್ದಾರೆ.

ಕಾಲ ಯಾರಿಗೂ ಕಾಯುವುದಿಲ್ಲ;
ಜನ ರಾಜಕಾರಣಿಗಳಿಗೆ ಕಾಯುವುದಿಲ್ಲ
ಆದರೆ
ರಾಜಕಾರಣಿ ಮಾತ್ರ ಸರಿಯಾದ ಸಮಯಕ್ಕೆ ಕಾಯಬೇಕು.

ಎಂದು ಸಿದ್ದುಗೆ ಅನ್ವಯಿಸುವಂತೆ ಕಾಂಗ್ರೆಸ್ ನಾಯಕರೊಬ್ಬರು ಹೇಳಿದ್ದಾರೆ. ಈಗ ಬಂಗಾರಪ್ಪ ಸಹ ಕಾಂಗ್ರೆಸ್‌ಗೆ ಬಂದಿರುವುದರಿಂದ ಸಿದ್ದರಾಮಯ್ಯನವರ ಅಸಹಕಾರದ ಕೊರತೆಯನ್ನು ಕೊಂಚ ಮಟ್ಟಿಗಾದರೂ ಕಾಂಗ್ರೆಸ್ ತುಂಬಿಕೊಳ್ಳುವ ಯತ್ನ ಮಾಡಲಿದೆ.

ಬಂಗಾರಪ್ಪನವರನ್ನೊಮ್ಮೆ ಸಿದ್ದರಾಮಯ್ಯ ಜೊತೆ ಹೋಲಿಸಿ ನೋಡಿ. ತೀವ್ರ ಅನಾರೋಗ್ಯವಿದ್ದಾಗಲೂ ಕಾಂಗ್ರೆಸ್ ಸೇರಿದ ತಕ್ಷಣ ಕಾರವಾರಕ್ಕೆ ಹೋಗಿ ಚುನಾವಣಾ ಪ್ರಚಾರ ನಡೆಸಿ ಬಂದರು 'ಬಂ'. ಆದರೆ ಕಾಂಗ್ರೆಸ್ ಸೇರಿ ಎರಡು ವರ್ಷಗಳಾದರೂ ಪಕ್ಷದ ಒಂದಾದರೂ ಅಧಿಕೃತ ಕಾರ್ಯಕ್ರಮದಲ್ಲಿ ಸಿದ್ದು ಪಾಲ್ಗೊಂಡಿಲ್ಲ. ಇದು ಹೀಗೇ ಮುಂದುವರೆದರೆ ನಾಳೆ ಕಾಂಗ್ರೆಸ್‌ನಲ್ಲಿ ಯಾವುದೇ ಉನ್ನತ ಸ್ಥಾನ ಸಿಗದಂತಾಗಲು ತಾವೇ ಕಾರಣ ಸೃಷ್ಟಿಸಿಕೊಟ್ಟಂತಾಗುವುದಿಲ್ಲವೆ?

ಸಿದ್ದರಾಮಯ್ಯ ಯೋಚಿಸಲಿ.

## ವಿಜಯ ಕರ್ನಾಟಕ ಮುಂದೇನು?

ನಂ.1 ಪತ್ರಿಕೆ 'ವಿಜಯ ಕರ್ನಾಟಕ'ದ ಸುತ್ತ ವದಂತಿಗಳ ಹುತ್ತ ಬೆಳೆಯುತ್ತಿದೆ. ಪತ್ರಿಕೆಯ ಸಂಪಾದಕರು, ಉಪಸಂಪಾದಕರು, ವರದಿಗಾರರು ಆತಂಕದ ಮುಖಮಾಡಿಕೊಂಡು ಓಡಾಡುತ್ತಿದ್ದಾರೆ. ಪತ್ರಿಕೆಯನ್ನು ಕೊಂಡಿರುವ ಟೈಮ್ಸ್‌ನವರು 'ವಿಜಯ ಕರ್ನಾಟಕ'ದ ಟೈಟಲ್ ಕಿತ್ತುಹಾಕಿ, 'ಟೈಮ್ಸ್ ಆಫ್ ಇಂಡಿಯಾ' (ಕನ್ನಡ) ಎಂಬ ಟೈಟಲ್‌ನಲ್ಲಿ ಪತ್ರಿಕೆಯನ್ನು ರಾಜ್ಯದಾದ್ಯಂತ ಕಳಿಸುತ್ತಾರಂತೆ; ವಿಜಯ ಕರ್ನಾಟಕವನ್ನು ಟ್ಯಾಬ್ಲಾಯ್ಡ್ ರೂಪಕ್ಕೆ ತಂದು 'ಬೆಂಗಳೂರು ಮಿರರ್' ರೀತಿಯಲ್ಲಿ ಮಾರುಕಟ್ಟೆಗೆ ಬಿಡುತ್ತಾರಂತೆ ಎಂಬೆಲ್ಲಾ ವದಂತಿಗಳು ಕೇಳಿಬರುತ್ತಿವೆ.

ಟೈಮ್ಸ್ ಗ್ರೂಪ್ ಇಂತಹ ಒಂದು ನಿರ್ಧಾರ ತೆಗೆದುಕೊಂಡರೆ ಆಶ್ಚರ್ಯವಿಲ್ಲ. 'ಬ್ರಾಂಡ್'ಗೆ ಹೆಚ್ಚು ಆದ್ಯತೆ ನೀಡುವ ಆ ಕಂಪನಿ ವಿಜಯ ಕರ್ನಾಟಕಕ್ಕೆ ಬದಲಾಗಿ 'ಟೈಮ್ಸ್ ಆಫ್ ಇಂಡಿಯಾ' ಎಂಬ ಹೆಸರು ರಾಜ್ಯದಲ್ಲಿ ಮನೆಮಾತಾದರೆ ಒಳ್ಳೆಯದು ಎಂಬ ಲೆಕ್ಕಾಚಾರ ಹಾಕಿರಲಿಕ್ಕೂ ಸಾಕು. ಕಿಡಿ ಇಲ್ಲದೆ ಹೊಗೆಯಾಡದು ಅಲ್ಲವೇ?


ಪ್ರಸ್ತುತ ಆರ್ಥಿಕ ಬಿಕ್ಕಟ್ಟನ್ನೇ ಕಾರಣ ಮಾಡಿಕೊಂಡು ಈ ಬದಲಾವಣೆ ಮಾಡಲು ಟೈಮ್ಸ್ ಗ್ರೂಪ್ ಹೊರಟದೆಯಂತೆ. ಈಗ ಬೆಂಗಳೂರಿಗೆ ಸೀಮಿತವಾಗಿ ಪ್ರಕಟವಾಗುತ್ತಿರುವ 'ಟೈಮ್ಸ್ ಆಫ್ ಇಂಡಿಯಾ'ದ ಕನ್ನಡ ಅವತರಣಿಕೆ ಹೇಳಿಕೊಳ್ಳುವಷ್ಟು ಯಶಸ್ಸು ಗಳಿಸಿಲ್ಲ. ಇದನ್ನು ರಾಜ್ಯದಾದ್ಯಂತ ವಿಸ್ತರಿಸಲು ವಿಕ ಅಡ್ಡಿಯಾಗುತ್ತಿದೆ. ಹೀಗಾಗಿ ವಿಕವನ್ನು ನಿಲ್ಲಿಸಿ, ಇಂಗ್ಲಿಷ್ ಪತ್ರಿಕೆಯ ಈ ಕನ್ನಡ ಅವತರಣಿಕೆಯನ್ನು ರಾಜ್ಯದಾದ್ಯಂತ ಬಿಡುಗಡೆ ಮಾಡುವ ಪ್ರಯತ್ನ ನಡೆಯುತ್ತಿದೆಯಂತೆ.

ಆದರೆ ಈಗಾಗಲೇ ನಂ.1 ಸ್ಥಾನದಲ್ಲಿರುವ ವಿಕವನ್ನು ಕೆಡವಿ ಮತ್ತೆ ಕಟ್ಟುವ ರಿಸ್ಕ್‌ನ್ನು ಟೈಮ್ಸ್‌ನವರು ಈ ಕಾಲದಲ್ಲಿ ಏಕೆ ತೆಗೆದುಕೊಳ್ಳುತ್ತಿದ್ದಾರೋ ಅರ್ಥವಾಗುತ್ತಿಲ್ಲ.

ಅದೇನೇ ಇರಲಿ, ಟೈಮ್ಸ್‌ನವರು ಏನೋ ಬದಲಾವಣೆ ಮಾಡಲು ಹೊರಟಿದ್ದಾರೆ ಎಂಬ ಸುದ್ದಿ ವಿ.ಕ. ಭಟ್ಟರ ಮೂಲಕವೇ ಸಿಬ್ಬಂದಿಗೆ ತಲುಪಿದೆಯಂತೆ. ಭಟ್ಟರು ಅಪ್‌ಸೆಟ್ ಆಗಿರುವುದನ್ನು ನೋಡಿ ಬೆಂಗಳೂರಿನ ಸಿಬ್ಬಂದಿ ತಲೆಮೇಲೆ ಕೈ ಹೊತ್ತುಕುಳಿತಿದ್ದಾರೆ. ಯಾರನ್ನು ಮಾತನಾಡಿಸಿದರೂ 'ಏನಾಗುತ್ತೋ ಏನೋ, ಏನೋ ನಡಿತಿದೆಯಂತೆ' ಎಂಬ ಉತ್ತರ ಸಿಗುತ್ತಿದೆ. ಈ ಮಧ್ಯೆ, ನಮ್ಮಲ್ಲಿ ಸಿಬ್ಬಂದಿ ಹೆಚ್ಚಿದೆ, ಬೇಡವಾದವರನ್ನು ಮನೆಗೆ ಕಳುಹಿಸೋಣ ಎಂಬ ನಿರ್ಧಾರವನ್ನೂ ಮ್ಯಾನೇಜ್‌ಮೆಂಟ್ ತೆಗೆದುಕೊಂಡಿದೆಯಂತೆ. ಒಟ್ಟಾರೆ ವಿಪಿಎಲ್ ಗ್ರೂಪ್‌ನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮಂದಿ ಅನವಶ್ಯಕವಾಗಿದ್ದಾರೆ ಎಂಬುದು ಮ್ಯಾನೇಜ್‌ಮೆಂಟ್ ವಾದವಂತೆ.

ಈ ಬೆಳವಣಿಗೆಯ ಬಗ್ಗೆ ಮಾಹಿತಿ ಪಡೆದ ಲಾರಿ ಮಾಲೀಕ ವಿಜಯ ಸಂಕೇಶ್ವರ, "ವಿಜಯ ಕರ್ನಾಟಕ ಮುಟ್ಟಲು ಹೋಗಬೇಡಿ. ಅದನ್ನು ನಡೆಸಲು ನಿಮಗೆ ಸಾಧ್ಯವಾಗದಿದ್ದರೆ ನನಗೇ ವಾಪಸ್ ಕೊಡಿ, ನಾನೇ ನಡೆಸುತ್ತೇನೆ" ಎಂದು ಟೈಮ್ಸ್‌ನವರಿಗೆ ಹೇಳಿ ಅವರಿಂದ 'ಹುಚ' ಎನಿಸಿಕೊಂಡಿದ್ದಾರೆಂಬ ಸುದ್ದಿಯೂ ಹರಡಿದೆ.

ಲಾಭಕ್ಕಾಗಿ ಏನು ಬೇಕಾದರೂ ಮಾಡುವ ಟೈಮ್ಸ್‌ನವರು ವಿಜಯ ಕರ್ನಾಟಕವನ್ನು ಯಾವ ರೂಪಕ್ಕಾದರೂ ತಂದುಕೊಳ್ಳಲಿ. ಆದರೆ ಚಡ್ಡಿಗಳ ಮುಖವಾಣಿಯಾಗಿ ಮುಂದುವರೆಸದಿದ್ದರೆ ಸಾಕು. ಅಷ್ಟೇ ಅಲ್ಲ, ಈ ಪತ್ರಿಕೆಯನ್ನೇ ನಂಬಿರುವ ಸಿಬ್ಬಂದಿಯನ್ನು ಬೀದಿಗೆ ತಳ್ಳದಿರಲಿ... ■


ಪೆದ್ದಗುಂಡ

ಸುಮಾರು ಐವತ್ತು ಮಂದಿ ಚಲ್ಲೆಗಳ ಗ್ಯಾಂಗ್ ಖತರ್‌ನಾಕ್ ಪೆದ್ದಗುಂಡನನ್ನು ಜೈಲೊಳಗೆ ಹಿಡಿದು ಮುಖಾಮೂತಿ ಚಚ್ಚುತ್ತಿದ್ದರೆ; ತನ್ನ ಸೆಲ್ಲೊಳಗೆ ಮುಗುಮ್ಮಾಗಿ ಕೂತು ಗಡ್ಡ ನೀವಿಕೊಳ್ಳುತ್ತಿದ್ದವನು ಸೈಲೆಂಟ್ ಸುನೀಲ!

ನಡೆದ ಮಾರಾಮಾರಿಯ ಭೀಕರತೆ, ಅದಕ್ಕಾಗಿ ನಡೆದ ತಯಾರಿ ಮತ್ತು ಮುಂದೆ ಸಂಭವಿಸಬಹುದಾದ ಅಡ್ಡಪರಿಣಾಮಗಳನ್ನು ಬೆಂಗಳೂರು ಅಂಡರ್‌ವರ್ಲ್ಡ್‌ನ ಪುಡಿಪಾತಕಿಯೂ ತನ್ನದೇ ಆದ ರೀತಿಯಲ್ಲಿ ಲೆಕ್ಕಹಾಕುತ್ತಿರಬೇಕು.

ಕಾಮಾಕ್ಷಿಪಾಳ್ಯದ ಮಚ್ಚನ ಗ್ಯಾಂಗ್ ಇಬ್ಭಾಗವಾಗಿದೆ. ತನ್ಮೂಲಕ ಕೊರಂಗು-ಸೈಲೆಂಟ್ ಸುನೀಲರ ಅಭೇದ್ಯ ಕೋಟೆಯೂ ಬಿರುಕುಬಿಟ್ಟಿದೆ. ಬಹುಶಃ ಪರಪ್ಪನ ಅಗ್ರಹಾರದ ಜೈಲು ಕಟ್ಟಿದಾಗಿನಿಂದಲೂ ಈ ಥರದ ಮಾರಾಮಾರಿಯೊಂದನ್ನು ಕಂಡಿರಲಿಕ್ಕಿಲ್ಲ. ಅದು ಯಾರೋ ಬೇಕಾರ್ ಹುಡುಗರ ಚಿಲ್ಲರೆ ಬಡಿದಾಟವಾಗಿದ್ದರೆ ಆ ಮಾತು ಬೇರೆ. ಒದೆ ಬಿದ್ದಿರುವುದು ಮಚ್ಚನ ಪಡೆಯ ಮಹಾನ್ ಪಂಟರ್ ಪೆದ್ದಗುಂಡನಿಗೆ. ಜೊತೆಗೆ ಆತನ ರೈಟ್‌ಹ್ಯಾಂಡ್ ಕಮಲಾನಗರದ ಕುಲ್ಡಾ ದಿನೇಶನಿಗೂ ಪೆಟ್ಟಾಗಿದೆ. ಹೊಡೆದವರು ಲಿಂಗನ ಹುಡುಗರು.


ಡಿಸೆಂಬರ್ 24ರ ಬೆಳಿಗ್ಗೆ ಪರಪ್ಪನ ಅಗ್ರಹಾರ ಜೈಲಿನ

ಪರಪ್ಪನ ಅಗ್ರಹಾರ ಜೈಲಲ್ಲಿ ಭೀಕರ ಮಾರಾಮಾರಿ

ಜೈಲಧಿಕಾರಿಗಳು ಸಾಮಾನ್ಯವಾಗಿ ಒಂದೇ ತಂಡದ ಪಾತಕಿಗಳನ್ನು ಒಂದೆಡೆ ಬಂಧಿಸಿಡುತ್ತಾರೆ. ಈ ಪೈಕಿ ನಾಲ್ಕನೇ ಬ್ಲಾಕಿನ ಒಂದನೇ ಕೊಠಡಿಯಲ್ಲಿ ಮಾರನೇಹಳ್ಳಿ ಜಗ್ಗ ಮತ್ತು ಟೀಸಿರಾಜನ ಹುಡುಗರಿದ್ದರೆ, ಎರಡನೆ ಕೋಣೆಯಲ್ಲಿ ಮುಸ್ಲಿಂ ಪಾತಕಿಗಳನ್ನು ಕೂಡಿಡಲಾಗಿದೆ. ಮೂರನೇ ಕೋಣೆಯಲ್ಲಿರುವವರ ಪೈಕಿ ಬಹುತೇಕರು ಸೈಲೆಂಟ್ ಸುನೀಲನ ಹುಡುಗರು. ವಿಶೇಷವಾಗಿ ದಾಸರಹಳ್ಳಿಯವರು. ನಾಲ್ಕನೇ ಕೋಣೆಯೇ ಸುನೀಲನದ್ದು. ಅಲ್ಲಿ ಇಡೀ ಸುನೀಲನ ಗ್ಯಾಂಗ್, ಆತನ ರೈಟ್‌ಹ್ಯಾಂಡ್ ಪಿ.ಸಿ.ವಿಜಿ, ಚಿಕ್ರಿ ತಮ್ಮ ಸುಬ್ರಮಣಿ, ಡೇನಿಯಲ್, ಮಾಡು ಮುಂತಾದ ಅಪಾಯಕಾರಿ ಹಿಂಡೇ ಇದೆ.

ಪಕ್ಕದ ಐದನೇ ಕೋಣೆಯಲ್ಲಿರುವವನೇ ಕಾಮಾಕ್ಷಿಪಾಳ್ಯದ ಪೆದ್ದಗುಂಡ. ಆತನ ನಂಬಿಕಸ್ಥ ಕುಲ್ಡಾ ದಿನೇಶ, ಪಾನ್ ಬಾಬು, ರೇವಾ, ಗೋಲ್ಡ್‌ರವಿ ಇತ್ಯಾದಿಗಳಲ್ಲದೇ ತಿಮ್ಮೇನಹಳ್ಳಿಯ ಗೋವಿಂದನ ಹಂತಕರಾದ ಲಂಬಾಸೋಮ, ಪಾನಿಪುರಿ ಹರೀಶ, ಕುಳ್ಳಾ ಶಿವರಾಜ, ಹಂಡೆ ಕುಮಾರನ ಶಿಷ್ಯ ನರಸಿಂಹ ಮುಂತಾದವರಿದ್ದಾರೆ.

ಕೊನೆಯ ರೂಮೇ ಆರನೇ ಕೊಠಡಿ. ಅದು ಕತ್ರಿಗುಪ್ಪೆ ಲಿಂಗನ ಹುಡುಗರ ಆಧಿಪತ್ಯಕ್ಕೊಳಪಟ್ಟಿದೆ. ಲಿಂಗನ ಪಡೆಯ ಖತರ್‌ನಾಕ್ ಫೈಟರ್ ಡಬಲ್ ಮೀಟ್ರು ಮೋಹನ, ಕೋಳಿ ಮಂಜ, ಸೀನಾ, ರಘು, ವೆಂಕಿಯ ಕೊಲೆಕೇಸಿನ ದೀಪು ಮುಂತಾದ ಪಾತಕಿಗಳ ಹಿಂಡೇ ಆರನೇ


ಸುನೀಲ

ಡಿಸೆಂಬರ್ 24ರ ಬೆಳಿಗ್ಗೆ ಪರಪ್ಪನ ಅಗ್ರಹಾರ ಜೈಲಿನ ನಾಲ್ಕನೇ ಬ್ಲಾಕಿನಲ್ಲಿ ಪೆದ್ದಗುಂಡನ ಗ್ಯಾಂಗಿಗೂ ಕತ್ರಿಗುಪ್ಪೆ ಲಿಂಗನ ಗ್ಯಾಂಗಿಗೂ ನಡೆದ ಮಾರಾಮಾರಿಯಲ್ಲಿ ಜೈಲು ಸಿಬ್ಬಂದಿಗಳೂ ಒದೆತಿಂದಿದ್ದಾರೆ. ಪೆದ್ದಗುಂಡ ಮತ್ತು ದಿನೇಶರನ್ನು ಜೈಲಾಧಿಕಾರಿಗಳೇ ನಿಂತು ಆಸ್ಪತ್ರೆಗೆ ಸಾಗಿಸಿದ್ದಾರೆ. ಈ ಬಗ್ಗೆ ಇನ್ನಿಲ್ಲದಂತೆ ತಲೆಕೆಡಿಸಿಕೊಂಡ ಜೈಲು ಸೂಪರಿಂಟೆಂಡೆಂಟ್ ವಿಶ್ವನಾಥಯ್ಯ ಇಡೀ ನಾಲ್ಕನೇ ಬ್ಲಾಕಿನ ಮೇಲೆ ಲಾಠಿಚಾರ್ಜ್ ಮಾಡಿಸಿದ್ದೂ ಅಲ್ಲದೇ ಸೈಲೆಂಟ್ ಸುನೀಲನ ಗ್ಯಾಂಗನ್ನು ಬಿಜಾಪುರಕ್ಕೆ ಕಮಾನೆತ್ತಿದ್ದಾರೆ. ಒಟ್ಟಾರೆ ಮಚ್ಚನ ಗ್ಯಾಂಗಿನ ಅಂತಃಕ್ಷೋಭೆಗೆ ಸೈಲೆಂಟ್ ಸುನೀಲ ದಂಡಕಟ್ಟುತ್ತಿದ್ದಾನೆ.

# ಪೆದ್ದಗುಂಡನ ಮೇಲೆ ಸುನೀಲನ ದಾಳಿ!

ನಾಲ್ಕನೇ ಬ್ಲಾಕಿನಲ್ಲಿ ಪೆದ್ದಗುಂಡನ ಗ್ಯಾಂಗಿಗೂ ಕತ್ರಿಗುಪ್ಪೆ ಲಿಂಗನ ಗ್ಯಾಂಗಿಗೂ ನಡೆದ ಮಾರಾಮಾರಿಯಲ್ಲಿ ಜೈಲು ಸಿಬ್ಬಂದಿಗಳೂ ಒದೆತಿಂದಿದ್ದಾರೆ. ಪೆದ್ದಗುಂಡ ಮತ್ತು ದಿನೇಶರನ್ನು ಜೈಲಾಧಿಕಾರಿಗಳೇ ನಿಂತು ಆಸ್ಪತ್ರೆಗೆ ಸಾಗಿಸಿದ್ದಾರೆ. ಈ ಬಗ್ಗೆ ಇನ್ನಿಲ್ಲದಂತೆ ತಲೆಕೆಡಿಸಿಕೊಂಡ ಜೈಲು ಸೂಪರಿಂಟೆಂಡೆಂಟ್ ವಿಶ್ವನಾಥಯ್ಯ ಇಡೀ ನಾಲ್ಕನೇ ಬ್ಲಾಕಿನ ಮೇಲೆ ಲಾಠಿಚಾರ್ಜ್ ಮಾಡಿಸಿದ್ದೂ ಅಲ್ಲದೇ ಸೈಲೆಂಟ್ ಸುನೀಲನ ಗ್ಯಾಂಗನ್ನು ಬಿಜಾಪುರಕ್ಕೆ ಕಮಾನೆತ್ತಿದ್ದಾರೆ. ಒಟ್ಟಾರೆ ಮಚ್ಚನ ಗ್ಯಾಂಗಿನ ಅಂತಃಕ್ಷೋಭೆಗೆ ಸೈಲೆಂಟ್ ಸುನೀಲ ದಂಡಕಟ್ಟುತ್ತಿದ್ದಾನೆ.

ಸದ್ಯ ಪರಪ್ಪನ ಅಗ್ರಹಾರ ಜೈಲಿನ ನಾಲ್ಕನೇ ಬ್ಲಾಕ್ ಪೂರ್ತಿ ಸುನೀಲ-ಕೊರಂಗು ಶಿಷ್ಯರಿಂದಲೇ ಭರ್ತಿಯಾಗಿದೆ. ಬಂಧಿಗಳ ಮಧ್ಯೆ ಅನಗತ್ಯ ಮಾರಾಮಾರಿ ತಪ್ಪಿಸಲೆಂದೇ ಕೋಣೆಯಲ್ಲಿದೆ. ಒಟ್ಟಾರೆ ನಾಲ್ಕನೇ ಬ್ಲಾಕಿನ ಪ್ರತಿ ಕೋಣೆಯಲ್ಲಿರುವವರೆಲ್ಲ ಒಂದಲ್ಲಾ ಒಂದು ರೀತಿಯಲ್ಲಿ ಸ್ನೇಹಿತರೇ. ಯಾರಿಗೂ ದುಷ್ಮನಿಯಿಲ್ಲ. ಕೊರಂಗು-ಸುನೀಲರ ನೇತೃತ್ವದ ಸಿಂಡಿಕೇಟಿನ ಇವರೆಲ್ಲರೂ ಒಬ್ಬರಿಗೊಬ್ಬರು ನೆರವಾಗುತ್ತಲೇ ಬಂದವರು.

ಹಾಗೇ ಪರಪ್ಪನ ಅಗ್ರಹಾರ ಜೈಲಿನ ಏಳನೇ ಮತ್ತು ಮೂರನೇ ಬ್ಲಾಕ್‌ಗಳಲ್ಲಿ ಸುನೀಲನ ವಿರೋಧಿ ಗ್ಯಾಂಗ್‌ನ ಮುಲಾಮನ ಹುಡುಗರು, ಪಾಯ್ಸನ್‌ರಾಮನ ಶಿಷ್ಯರು, ಬ್ರೇಕ್ ಜಗ್ಗಿ ಕಡೆಯವರನ್ನು ಕೂಡಿಡಲಾಗಿದೆ.

ಸಾಮಾನ್ಯವಾಗಿ ಯಾರೇ ಪಾತಕಿಯೊಬ್ಬ ತನ್ನ ಆಪ್ತ ವಲಯದ ಕ್ರಿಮಿನಲ್‌ಗಳೊಂದಿಗೆ ಅನಗತ್ಯವಾಗಿ ಜಿದ್ದುಕಟ್ಟಿಕೊಳ್ಳುವುದಿಲ್ಲ, ಸಣ್ಣಪುಟ್ಟ ಕಿರಿಕ್‌ಗಳೇನಾದರೂ ಅನುಸರಿಸಿಕೊಂಡು ಹೋಗುತ್ತಾನೆ. ಆದರೆ ಪೆದ್ದಗುಂಡನ ಜಾಯಮಾನವೇ ಬೇರೆ. ಆತ ಮಚ್ಚನ ಪರಮಾಪ್ತರಲ್ಲೊಬ್ಬ. ಮಚ್ಚನ ಹತ್ಯೆಯ ನಂತರ ಆತನ ಇಡೀ ತಂಡವನ್ನು ನಿಭಾಯಿಸುತ್ತಿರುವುದು ಕೋತಿರಾಮ ಮತ್ತು ಬೈಚಕುಪ್ಪೆಯ ಜಾನಿ. ಇಬ್ಬರಿಗೂ ಮುಲಾಮ ಮತ್ತು ಪಾಯ್ಸನ್ ರಾಮನ ಮೇಲೆ ಹಗೆಯಿದೆ.


ಈ ಮಧ್ಯೆ ಕೋತಿರಾಮ ಮತ್ತು ಜಾನಿಯ ವಿರುದ್ಧ ಸಣ್ಣದೊಂದು ಅಸಮಾಧಾನ ಶುರುವಾಗಿದ್ದು ಪೆದ್ದಗುಂಡನಿಗೆ. ಒಂದು ಮೂಲದ ಪ್ರಕಾರ ಅದು ಸೈಟೊಂದರ ದುಡ್ಡಿನ ತಗಾದೆ. ಲಗ್ಗೆರೆಯ ಸೈಟೊಂದನ್ನು ಮಾರಿದ ದುಡ್ಡನ್ನು ತನಗೆ ತಲುಪಿಸಲಿಲ್ಲ ಎಂದು ಕೋತಿ ರಾಮ ಪೆದ್ದಗುಂಡನ ಮೇಲೆ ಮುನಿಸಿಕೊಂಡ. ಅಥವಾ ತಿಮ್ಮೇನಹಳ್ಳಿಯ ಸೂರಿಯ ಡಬ್ಬಲ್ ಮರ್ಡರ್ ಕೇಸಿನಲ್ಲಿದ್ದ ತನಗೆ ದುಡ್ಡು ಕಾಸಿನ ನೆರವಾಗುತ್ತಿಲ್ಲ ಎಂದು ಪೆದ್ದಗುಂಡನಿಗೆ ಜಾನಿ ಮತ್ತು ಕೋತಿರಾಮನ ಮೇಲೆ ಅಸಹನೆ ಶುರುವಾಗಿದೆ. ಬರುಬರುತ್ತಾ ತನ್ನದೇ ಪ್ರತ್ಯೇಕ ಗ್ಯಾಂಗೊಂದನ್ನು ಹುಟ್ಟು ಹಾಕಲು ಯತ್ನಿಸಿದ್ದಾನೆ ಅಥವಾ ಇಡೀ ಮಚ್ಚನ ಸಾಮ್ರಾಜ್ಯವನ್ನು ತಾನೇ ಆಳಬೇಕೆಂಬ ಮಹತ್ವಾಕಾಂಕ್ಷೆಯೂ ಇದ್ದಿರಬೇಕು.

ವರ್ಷದ ಹಿಂದೆ ಏಕಾಏಕಿ ಬೆಂಗಳೂರು ಸೆಂಟ್ರಲ್ ಜೈಲ್‌ನಿಂದ ಬಿಜಾಪುರಕ್ಕೆ ಎತ್ತಂಗಡಿಯಾದ ಪೆದ್ದಗುಂಡ ಇಲ್ಲಿಗೆ ಏಳುತಿಂಗಳ ಹಿಂದಷ್ಟೇ ಪುನಃ ಪರಪ್ಪನ ಅಗ್ರಹಾರಕ್ಕೆ ಬಂದವನು ತನ್ನ ಜೊತೆ ಹಾಕಿಕೊಂಡಿದ್ದು ಮಚ್ಚನ ಮತ್ತೊಬ್ಬ ಶಿಷ್ಯ ಕುಲ್ಡಾ ದಿನೇಶನನ್ನು. ಜೊತೆಗೆ ತಿಮ್ಮೇನಹಳ್ಳಿ ಗೋವಿಂದನ ಹಂತಕರಾದ ಲಂಬಾಸೋಮ, ಪಾನಿಪೂರಿ ಹರೀಶ, ಕುಳ್ಳಾ ಶಿವರಾಜ ಮುಂತಾದವರೆಲ್ಲ ಸೇರಿಕೊಂಡರು. ಜೈಲಿನ ನಾಲ್ಕನೇ ಬ್ಲಾಕಿನ ಐದನೇ ಕೊಠಡಿ ಪೂರ್ತಿ ಪೆದ್ದಗುಂಡನ ಅಧಿಪತ್ಯಕ್ಕೊಳಪಟ್ಟಿತು. ಪಕ್ಕದ್ದೇ ಲಿಂಗನ ಹುಡುಗರ ಕೋಣೆ. ಮತ್ತೊಂದು ಮಗ್ಗುಲಿಗೆ ಸುನೀಲನ ಹುಡುಗರಿದ್ದರು.

ಮೊನ್ನೆ ಅಂದರೆ ಇಲ್ಲಿಗೆ ಹತ್ತು ದಿನಗಳ ಹಿಂದೆ ಸುನೀಲನ ಎಂಟ್ರಿಯಾಗುವತನಕ ಇಡೀ ನಾಲ್ಕನೇ ಬ್ಲಾಕಿನ ಅಧಿಪತಿಯಂತಿದ್ದದ್ದು ಪೆದ್ದಗುಂಡನೇ. ಅತ್ತ ಕೋತಿರಾಮ ಬಳ್ಳಾರಿ ಜೈಲಿಗೆ ಎತ್ತಂಗಡಿಯಾದರೆ, ಜಾನಿ ತುಮಕೂರು ಜೈಲಿಗೆ ಬಂದು ಕೂತವನು ಪೆದ್ದಗುಂಡನ ಉಸಾಬರಿಯನ್ನೇ ಮರೆತುಬಿಟ್ಟ. ಇಡೀ ಮಚ್ಚನ ಗ್ಯಾಂಗ್‌ನ ಆಧಾರಸ್ತಂಭಗಳಂತಿದ್ದದ್ದು ನಾಲ್ವರು: ಕೋತಿರಾಮ, ಜಾನಿ, ಮಾರೇನಹಳ್ಳಿ ಜಗ್ಗ ಮತ್ತು ಹಂಡೆಕುಮಾರ. ಹಂಡೆಕುಮಾರ ಇತ್ತೀಚೆಗೆ ರಸ್ತೆ ಅಪಘಾತವೊಂದರಲ್ಲಿ ನಿಗೂಢವಾಗಿ ಸತ್ತ. ನಂತರ ಹೊರಗಿದ್ದುಕೊಂಡು ಫೀಲ್ಡ್ ಮಾಡುವ ಮಚ್ಚನ ಬಂಟರೇ ಇಲ್ಲದಂತಾಗಿದೆ. ಕೋತಿರಾಮನಿಗೆ ತನ್ನೆಲ್ಲಾ ಲೆಕ್ಕಾಚಾರ ಚುಕ್ತಾ ಮಾಡಿಕೊಂಡು ಸೆಟಲ್ ಆಗುವ ಬಯಕೆ. ಬೈಚಕುಪ್ಪೆ ಜಾನಿಗೆ ಜೈಲಲ್ಲಿ ಕೂತೇ ಬೋರು ಹೊಡೆದು ಸಾಕಾಗಿದೆ. ಹೊಸ ದುಷ್ಮನಿ ಬೇಕಿಲ್ಲ. ಹಳೆಯ ಜಿದ್ದಾಜಿದ್ದಿಯಿಂದ ಬಚಾವಾದರೆ ಸಾಕು.


ಇನ್ನು ಮಾರೇನಹಳ್ಳಿ ಜಗ್ಗನಿಗೆ ಅಂಡರ್‌ವರ್ಲ್ಡ್‌ನ ಉಸಾಬರಿಯೇ ಬೇಕಿಲ್ಲ. ತನ್ನ ಆಜನ್ಮವೈರಿ ತಿಮ್ಮೇನಹಳ್ಳಿ ಗೋವಿಂದ ನಿಕಾಲಿಯಾದ ನಂತರ ತಾನಾಯಿತು: ತನ್ನ ಪಾಡಾಯಿತು ಎಂಬಂತಿರುವ ಜಗ್ಗನಿಗೆ ತನ್ನ ಪುರಾತನ

## ತಿಮ್ಮೇನಹಳ್ಳಿ ವಿಶ್ವನ ರೌಂಡಿಂಗ್


ವಿಶ್ವ

ಇಡೀ ಮಚ್ಚನ ಸಾಮ್ರಾಜ್ಯವನ್ನು ನಿಭಾಯಿಸಬೇಕಿದ್ದ ಮಾರೇನಹಳ್ಳಿ ಜಗ್ಗ ಏಕಾಏಕಿ ಎಲ್ಲಾ ಬಿಟ್ಟು ತಾನಾಯಿತು ತನ್ನ ಪಾಡಾಯಿತು ಎಂಬಂತೆ ಇರುವುದಕ್ಕೂ ಕಾರಣಗಳಿವೆ. ಜಗ್ಗನಿಗೀಗ ಭೂಗತ ಬದುಕು ಬೇಕಿಲ್ಲ, ಆತನ ಗುರಿ ಯೇನಿದ್ದರೂ ಮುಂಬರುವ ಪಾಲಿಕೆ ಚುನಾವಣೆಗೆ ನಿಂತು ಮಾರೇನಹಳ್ಳಿ ವಾರ್ಡಿನ ಮುಂದಿನ ಕೌನ್ಸಿಲರ್ ಆಗುವುದು. ಬೆಂಗಳೂರು ಕಂಡ ನಿಷ್ಠುರಿ ಪೊಲೀಸ್ ಅಧಿಕಾರಿಗಳಲ್ಲೊಬ್ಬರಾದ ಕೆವಿಕೆ ರೆಡ್ಡಿ ವಿಜಯನಗರದ ಎಸಿಪಿ ಆಗಿ ಬಂದಿದ್ದೇ ಜಗ್ಗನನ್ನು ಈ ನಿಟ್ಟಿನಲ್ಲಿ ತಿದ್ದಲಾರಂಭಿಸಿದ್ದಾರೆ.

ಹಾಗಂತ ಗೋವಿಂದನ ಜಿದ್ದು ಜಗ್ಗನ ಬೆನ್ನು ಬಿಡುತ್ತಿಲ್ಲ. ಗೋವಿಂದ ಬದುಕಿದ್ದಷ್ಟೂ ದಿನ ಜಗ್ಗನನ್ನು ಮುಗಿಸಲು ಹೊಣಗಾಡಿಕೊಂಡೇ ಬಂದ. ಕೊನೆಗೆ ತಾನೇ ನಿಕಾಲಿಯಾದ. Of course ಗೋವಿಂದನ ಹತ್ಯೆಯಲ್ಲಿ ಜಗ್ಗನ ಪಾತ್ರವಿರಲಿಲ್ಲ. ಗೋವಿಂದನನ್ನು ಕೊಂದ ಹುಡುಗರ್‍ಯಾರೂ ಸದ್ಯ ಜಗ್ಗನ ಜೊತೆಗಿಲ್ಲ. ಆದರೆ ಗೋವಿಂದನ ಪಕ್ಕಾ ಶಿಷ್ಯ ವಿಶ್ವನಿಗೆ ಜಗ್ಗನ ಮೇಲೇ ಕಣ್ಣು. ಗೋವಿಂದನ ಮತ್ತೊಬ್ಬ ಬಂಟ ಬಿ.ಎನ್. ರವಿ ಮತ್ತು ಕಡ್ಡಿಸೀನಾ ಕೂಡ ವಿಶ್ವನ ಜೊತೆ ಕೈಜೋಡಿಸಿ ಜಗ್ಗನಿಗಾಗಿ ರೌಂಡ್ಸ್ ಮಾಡುತ್ತಿದ್ದಾರೆ. ಎರಡು ಸುಮೋ, ಒಂದು ಕ್ವಾಲೀಸ್ ಮತ್ತೊಂದು ಸ್ಯಾಂಟ್ರೋ ಗಾಡಿಗಳಲ್ಲಿ ಇಪ್ಪತ್ತಕ್ಕೂ ಹೆಚ್ಚು ಮಂದಿ ಹುಡುಗರನ್ನು ಕಲೆ ಹಾಕಿ ಜಗ್ಗ ಅಥವಾ ಎಸ್ಕಿಡಿ ಪರಮೇಶ ಯಾರೇ ಸಿಕ್ಕರೂ ಕತ್ತರಿಸುತ್ತೇನೆಂದು ರೌಂಡ್ಸ್ ಶುರು ಹಚ್ಚಿಕೊಂಡ ತಿಮ್ಮೇನಹಳ್ಳಿ ವಿಶ್ವನಿಗೆ ವಿಜಯನಗರ ಐದನೇ ಕ್ರಾಸಿನ ಟೋಪಿ ಪುಟ್ಟೇಗೌಡನೆಂಬ ವಂಚಕನ ಪುತ್ರ ಮಹೇಂದ್ರ ಎಂಬ ಪೋರ್ಕಿಯೊಬ್ಬ ಸಾತು ಕೊಡುತ್ತಿದ್ದಾನೆ.


ಜಗ್ಗ

ಈ ಮಹೇಂದ್ರ ಮುಲಾಮನ ಛೇಲಾ. ಅಪ್ಪನ ವಂಚನೆಗೆ ನೆರವಾಗಲೆಂದೇ ಪೋರ್ಕಿಗಳ ಹಿಂಡನ್ನು ಸಾಕಿಕೊಂಡ ಪೋರ್ಕಿ. ಮಹೇಂದ್ರನಿಗೆ ರೌಡಿಯಾಗುವ ಖಯಾಲಿ. ವಿಜಯನಗರ ಪೊಲೀಸ್ ಠಾಣೆಗೆ ಜಗನ್ನಾಥ್ ರೈ ಎಂಬ ನಿಷ್ಠುರಿ ಪೊಲೀಸ್ ಅಧಿಕಾರಿ ಬಂದನಂತರ ಬಹುತೇಕ ರೌಡಿಗಳೆಲ್ಲ ಏರಿಯಾ ಬಿಟ್ಟಿದ್ದಾರೆ. ವಿಜಯನಗರದ ಮಟ್ಟಿಗೆ ಪೋರ್ಕಿಗಳ ಹಾವಳಿಯೂ ಕಮ್ಮಿಯಾಗಿದೆ. ಆದರೆ ಮಹೇಂದ್ರನ ಗ್ಯಾಂಗ್ ಪೊಲೀಸ್ ಠಾಣೆಯ ಪಕ್ಕದಲ್ಲೇ ಅಡ್ಡೆ ಹಾಕಿ ಕೇಕೆ ಹಾಕುತ್ತದೆ. ಜೊತೆಗೆ ಜಗ್ಗನ ವಿರುದ್ಧ ವಿಶ್ವನ ಬೆನ್ನಿಗೆ ನಿಂತವನು ಸ್ವತಃ ಜಗ್ಗನ ಚಿಕ್ಕಪ್ಪ ಡಿ. ಮುನಿರಾಜು. ಗೋವಿಂದನ ಪಕ್ಕಾ ಶಿಷ್ಯನಂತಿದ್ದ ತನ್ನ ಮಗ ಸುರೇಶನನ್ನು ಜಗ್ಗನ ಹುಡುಗರು ಮುಗಿಸಿದ್ದಕ್ಕೆ ಪ್ರತೀಕಾರ ಹೇಳಲು ಚಿಕ್ಕಪ್ಪ ಮುನಿರಾಜುವೇ ಫೀಲ್ಡಿಗಿಳಿದ ಮೇಲೆ ಜಗ್ಗನ ತಲೆನೋವು ಮತ್ತಷ್ಟು ಉಲ್ಬಣಿಸಿದೆ. ಇಲ್ಲಿಗೆ ವಾರದ ಹಿಂದೆ ವಿಜಯನಗರದ ಕದಂಬ ಹೋಟೆಲಿನಲ್ಲಿದ್ದ ತಮ್ಮಯ್ಯನ ಶಿಷ್ಯ ಎಸ್ಕಿಡಿ ಪರಮೇಶನ ಮೇಲೆ ವಿಶ್ವನ ಗ್ಯಾಂಗ್ ದಾಳಿಗೆ ಯತ್ನಿಸಿತೆಂಬುದು ಒಂದು ಸುದ್ದಿಯಾದರೆ, ಬಾರ್ ಒಂದರಲ್ಲಿ ಕುಡಿದು ಜಗ್ಗನನ್ನು ಮುಗಿಸುತ್ತೇನೆಂದ ಬಿ.ಎನ್. ರವಿಯನ್ನು ಜಗ್ಗನ ಹುಡುಗರೇ ಹುಡುಕಿ ಬಂದರೆಂದೂ, ರವಿ ಉಪಾಯವಾಗಿ ಪರಾರಿಯಾದನೆಂಬುದೂ ಮತ್ತೊಂದು ಸುದ್ದಿ.

ಒಟ್ಟಾರೆ ಇಷ್ಟರಲ್ಲೇ ವಿಜಯನಗರದಲ್ಲೇನೋ ಅನಾಹುತ ಕಟ್ಟಿಟ್ಟ ಬುತ್ತಿ. ತಿಮ್ಮೇನಹಳ್ಳಿಯಾಗಲಿ ಮಾರೇನಹಳ್ಳಿಯಾಗಲಿ ಇಷ್ಟೆಲ್ಲ ತಲೆಗಳುರುಳಿದ ನಂತರವೂ ಪಾಠ ಕಲಿತಂತಿಲ್ಲ. ತನ್ನ ಪಾಡಿಗೆ ತಾನಿರಬೇಕೆಂದರೆ ಜಗ್ಗನನ್ನು

ನ್‌ಗಳಿಂದ ಬಚಾವಾಗುವುದೇ ದೊಡ್ಡ ಸಮಸ್ಯೆ. ಗಿ ಮಚ್ಚನ ಗ್ಯಾಂಗಿಗೊಬ್ಬ ಸಮರ್ಥ ನಾಯಕನೇ ಂತಹ ಪರಿಸ್ಥಿತಿ. ಇದನ್ನೆಲ್ಲ ಮನಗಂಡೇ ಮಚ್ಚನ ಾಧಿಕಾರಿಯಾಗಲು ಹೊರಟವನು ಪೆದ್ದಗುಂಡ.

ಆತ ಇಡೀ ಮಚ್ಚನ ತಂಡದ ನಿಷ್ಣಾತ ಬ್ಯಾಟ್ಸ್‌ಮನ್ ುದರಲ್ಲಿ ಎರಡು ಮಾತಿಲ್ಲ. ಮಚ್ಚನ ಹತ್ಯೆಯ ನಂತರ ಯ್ಯನ ಪ್ರಮುಖ ಹಂತಕರಲ್ಲೊಬ್ಬನಾದ ತಿಮ್ಮೇನ ು ಸೂರಿಯನ್ನು ಆತನ ಶಿಷ್ಯ ಟೋನಿಯ ಸಮೇತ ಸಿದ್ದು ಪೆದ್ದಗುಂಡನ ನಟೋರಿಟಿಗೆ ಹೇಳಿಮಾಡಿಸಿ ತ್ತು, ತುಮಕೂರಿನ ಸುಜಿತ್, ಕಮಲಾನಗರದ ಕುಲ್ಲಾ ಶ, ನಾಗರಬಾವಿಯ ಕಳ್ಳಾಜಗ್ಗ ಮತ್ತು ಲಿಂಗನ ಗರ ಜೊತೆ ಸೇರಿ ಕೆಂಗೇರಿಯಲ್ಲಿ ್ ಮರ್ಡರ್ ಮಾಡಿದ ಪೆದ್ದಗುಂಡ ಸೆರೆಹಿಡಿದದ್ದು ಇನ್ಸ್‌ಪೆಕ್ಟರ್ ಎಸ್.ಕೆ. ೇಶ್. ಮಂಡಿಚಿಪ್ಪು ಪುಡಿಮಾಡಿ ಯಲ್ಲಿದ್ದ ಹಲ್ಲುಗಳನ್ನೆಲ್ಲ ಇಕ್ಕಳದಿಂದ ು ಇನ್ಸ್‌ಪೆಕ್ಟರ್ ಉಮೇಶ್ .

ಹಾಗೇ ಎನ್‌ಕೌಂಟರ್‌ನಿಂದ ಬಚಾ ಜೈಲು ಸೇರಿದ ಪೆದ್ದಗುಂಡ ಮೂರೇ ಲ್ಲಿ ರೆಡಿಯಾದ. ಬರುಬರುತ್ತಾ ತಾನೇ ನ ಸಾಮ್ರಾಜ್ಯದ ಅಧಿಪತಿಯೆಂಬಂತೆ ು ಕೊಡಲಾರಂಭಿಸಿದ. ಕೇವಲ ಆಗಿದ್ದರೆ ಈ ಬಗ್ಗೆ ಯಾರೂ ರೆತ್ತುತ್ತಿರಲಿಲ್ಲ. ಪೆದ್ದಗುಂಡನದು ವಿಚಿತ್ರ ವಿಕೃತಿ. ಗೆ ಮೇಲೆ ಹಿಡಿತವಿಲ್ಲ. ಜೈಲಲ್ಲಿ ತನ್ನ ಮುಂದೆ ೂ ಸಿಗರೇಟು ಸೇದುವಂತಿಲ್ಲ ಎಂಬ ನಿಯಮ ದ. ಬಿಜಾಪುರ ಜೈಲಿನಿಂದ ಬೆಂಗಳೂರಿಗೆ ವನೇ ತನ್ನ ಮುಂದೆ ಸಿಗರೇಟು ಸೇದುತ್ತಾರೆಂಬ ಕಾರಣಕ್ಕೆ ಒಂದನೇ ಕೋಣೆಯಲ್ಲಿದ್ದ ಮಾರೇನಹಳ್ಳಿ ಹುಡುಗರ ಮೇಲೆ ಕೈ ಮಾಡಿದ.

ಪೆದ್ದಗುಂಡ ಬೆಂಗಳೂರು ಜೈಲಿಗೆ ಕಾಲಿಟ್ಟ ಐದೇ ಗೆ ಡಬಲ್ ಮೀಟ್ರು ಮೋಹನನೂ ಬೆಂಗಳೂರಿಗೆ . ಅದಕ್ಕೂ ಮುನ್ನ ಬಿಜಾಪುರ ಜೈಲಲ್ಲಿದ್ದ ಡಬಲ್ ್ರು ಮೋಹನನಿಗೂ ಪೆದ್ದಗುಂಡನಿಗೂ ಬಿಜಾಪುರ ್ಲೇ ಮಾತಿನ ಚಕಮಕಿ ನಡೆದಿತ್ತು. ಅದು 'ಈಗೋ' ಧಿ ಘರ್ಷಣೆ. ಥರೇವಾರಿಯ ಪಾತಕಿಗಳೆಲ್ಲ ಒಂದೇ ೆಯಲ್ಲಿದ್ದಾಗ ಆಧಿಪತ್ಯಕ್ಕಾಗಿ ಇಂಥ ಘರ್ಷಣೆ ತ್ತವೆ. ಕೆಲವರು ನಿರ್ಲಕ್ಷಿಸಿ ಸುಮ್ಮನಾ ನ್ನೂ ಕೆಲವರು ಅದನ್ನೇ ದೊಡ್ಡದು ಕೊಳ್ಳುತ್ತಾರೆ.

ಲ್ಲಿಗೆ ಮೂರು ತಿಂಗಳ ಹಿಂದೆ ಂಡನ ಬಂಟ ಪಾನ್ ಮತ್ತು ಲಿಂಗನ ಗನೊಬ್ಬ ಯಾವುದೋ ಕ್ಷುಲ್ಲಕ ಕ್ಕೆ ಕಿತ್ತಾಡಿದ್ದಾರೆ. ಅದೇ ಹೊತ್ತಿಗೆ ್‌ಕಾಕ್ ಆಡುವಾಗ ಇದ್ದಕ್ಕಿದ್ದಂತೆ ಮೀಟ್ರು ಮೋಹನ ಪೆದ್ದಗುಂಡನಿಗೆ ೋ ಹೇಳಲು ಬಂದವನು 'ಲೋ ಂಡ...!' ಎಂದು ಏಕವಚನದಲ್ಲಿ ೀದಿಸಿಬಿಟ್ಟದ್ದೇ ದೊಡ್ಡ ರಂಪವಾಗಿದೆ. ಏನೋ 'ಬಾಸ್'ಅನ್ನ ಹೆಸರು ಹಿಡಿದು ಕರೀತೀಯಾ? ್ಲೇ ಪಾನ್ ಡಬಲ್ ಮೀಟ್ರು ಮೋಹನನಿಗೆ ನಾಲ್ಕು ಮುಂದೊಮ್ಮೆ ಇದೇ ಪೆದ್ದಗುಂಡನಿಗೆ ಮುಳುವಾಗು ಂಬುದು ಯಾರಿಗೆ ಗೊತ್ತು?

ಯಾವತ್ತು ಡಬಲ್ ಮೀಟ್ರು ಮೋಹನನಿಗೆ ಒದೆ ಲಿಂಗನ ಹುಡುಗರ ತಲೆಕೆಟ್ಟಿದೆ. ಅದೇ ಜೋಶ್‌ಗೆ ಪೆದ್ದಗುಂಡನ ಶಿಷ್ಯ ಪಾನ್ ಲಿಂಗನ ಒಬ್ಬೊಬ್ಬರೇ ಗರನ್ನು ಹಿಡಿದು ಬೆದರಿಸಲಾರಂಭಿಸಿದ್ದಾನೆ. ಆ

ಂದನ ಗ್ಯಾಂಗ್ ಬಿಡುತ್ತಿಲ್ಲ. ಮೊದಲು ತಮ್ಮಯ್ಯ ಾದ. ಅದಕ್ಕೆ ಪ್ರತಿಯಾಗಿ ಸೂರಿ, ಕರಿ ನರಸಿಂಹ ೊಲೆಯಾದರು. ಗೋವಿಂದನೇ ಮುಗಿದು ಹೋದ. ಹಳ್ಳಿಯ ಮಕ್ಕಳ್ಯಾರೂ ಕಾಲೇಜು ಕಂಡಿಲ್ಲ. ಗೂ ಮೊದಲೇ ಜೈಲು ಕೈ ಬೀಸಿ ಕರೆಯುತ್ತದೆ. ಮ್ಮ ತಾನೇನಾದರೂ ಸುಮ್ಮನಿದ್ದರೆ ತನ್ನನ್ನು ್ಯನ ಹುಡುಗರು ಮುಗಿಸುತ್ತಾರೆಂದು ವಿಶ್ವ-ಬಿಎನ್ ಳಿದರೆ, ಇದೇ ಲೆಕ್ಕ ಹಾಕಿ ತಮ್ಮಯ್ಯನ ಶಿಷ್ಯರೂ ು ಹಾಕುತ್ತಿದ್ದಾರೆ.

ೋವಿಂದನ ಪಳೆಯುಳಿಕೆಯಂತೆ ಉಳಿದವರು ವಿಶ್ವ ಬಿ.ಎನ್. ರವಿ. ಅವರಿಬ್ಬರು ಮುಗಿದುಹೋದರೆ ಂದನ ಪ್ರತೀಕಾರಕ್ಕೆ ಯಾರೂ ಉಳಿಯೋಲ್ಲ. ಇದು ್ಯನ ಹುಡುಗರ ಲೆಕ್ಕಾಚಾರವಾದರೆ ಗೋವಿಂದನ ದ ಬಂಟರೂ ತಾವುಳಿಯಬೇಕೆಂದರೆ ತಮ್ಮಯ್ಯನ ್ನ ನಿರ್ನಾಮ ಮಾಡಬೇಕೆನ್ನುತ್ತಾರೆ. ಸದ್ಯಕ್ಕಿದು ಕತೆಯಲ್ಲ. ಇದಕ್ಕೊಂದು ಅಂತ್ಯ ಹೇಳುವುದು ನಗರದ ಚಾಣಾಕ್ಷ ಇನ್ಸ್‌ಪೆಕ್ಟರ್ ಜಗನ್ನಾಥ್ ರೈಗೆ ಲ್ಲ. ಮನಸ್ಸು ಮಾಡಬೇಕಷ್ಟೆ. ■

ಹೊತ್ತಿಗಾಗಲೇ ಪೆದ್ದಗುಂಡನ ವರ್ತನೆಗಳೂ ಬದಲಾಗಿದ್ದವು. ಕೋತಿರಾಮ ಮತ್ತು ಜಾನಿಯ ಬಗ್ಗೆಯೂ ಹಗುರವಾಗಿ ಮಾತನಾಡಲಾರಂಭಿಸಿದ್ದಾನೆ. ಕ್ರಮೇಣ ಕೋತಿರಾಮ ಮತ್ತು ಜಾನಿ ತನಗಿಂತಲೂ ಲಿಂಗನ ಹುಡುಗರಿಗೆ ಹೆಚ್ಚು ಪ್ರಾಶಸ್ತ್ಯ ಕೊಡಲಾರಂಭಿಸಿದ್ದು ಪೆದ್ದಗುಂಡನನ್ನು ಇನ್ನಷ್ಟು ಕೆರಳಿಸಿದೆ.

ಇದಕ್ಕೆ ಪೂರಕವಾಗಿ ಲಿಂಗನ ಹುಡುಗರ ಬೆನ್ನಿಗೆ ಕೋತಿರಾಮ ಮತ್ತು ಜಾನಿ ನಿಂತಿರುವುದೂ ಪುಕಾರಾಗಿದೆ. ಪೆದ್ದಗುಂಡ ಮತ್ತು ಕುಲ್ಲಾ ದಿನೇಶನ ಕಾಟಕ್ಕೆ ರೋಸತ್ತು ಮಚ್ಚನ ತಂಡದ ಮತ್ತೊಬ್ಬ ಖತರ್‌ನಾಕ್ ಪಂಟರ್ ಕಳ್ಳಾ ಜಗ್ಗನೇ ಬಳ್ಳಾರಿ ಜೈಲಲ್ಲಿದ್ದ ಕೋತಿರಾಮನನ್ನು ಸೇರಿಕೊಂಡ ಮೇಲೆ ನಾಲ್ಕನೇ ಬ್ಲಾಕಿನಲ್ಲಿದ್ದ ಬಹುತೇಕ ತಂಡಗಳಿಗೆಲ್ಲ ಪೆದ್ದಗುಂಡನ ಬೆನ್ನಿಗೆ ದೊಡ್ಡ ಬೆಂಬಲವಿಲ್ಲವೆಂಬುದು ನಿಕ್ಕಿಯಾಗಿದೆ. ಒಂದನೇ ರೂಮಿನಲ್ಲಿದ್ದ ಜಗ್ಗನ ಹುಡುಗರು, ಮೂರನೇ ರೂಮಿನಲ್ಲಿದ್ದ ದಾಸರಹಳ್ಳಿಯ ಸುನೀಲನ ಬೆಂಬಲಿಗರು, ನಾಲ್ಕನೇ ಕೋಣೆಯಲ್ಲಿದ್ದ ಸ್ವತಃ ಸುನೀಲನ ಗ್ಯಾಂಗ್ ಮತ್ತು ಆರನೇ ಕೊಠಡಿಯ ಲಿಂಗನ ಹುಡುಗರಿಗೆಲ್ಲ ಮೊದಲೇ ಪೆದ್ದಗುಂಡನ ಬಗ್ಗೆ 'ಚಿಂತೆ' ಇತ್ತಲ್ಲ?

ಅದು ಭುಗಿಲೆದ್ದಿದ್ದು ಡಿಸೆಂಬರ್ 24ರ ಬೆಳಿಗ್ಗೆ. ಮಾಮೂಲಿಯಂತೆ ಲಾಕಪ್ ತೆರೆಯುತ್ತಿದ್ದಂತೆ ಪೆದ್ದಗುಂಡನ ಶಿಷ್ಯ ಪಾನ್‌ನನ್ನು ಲಿಂಗನ ಹುಡುಗರಾದ ರಘು, ಸೀನಾ ಮತ್ತು ಕೋಳಿ ಮಂಜ ಸೇರಿಕೊಂಡು ಬಡಿದಿದ್ದಾರೆ. ಅಷ್ಟಕ್ಕೆ ಸುಮ್ಮನಿದ್ದರೆ ಸರಿಹೋಗುತ್ತಿತ್ತೇನೋ. ಯಾವತ್ತು ಪಾನ್‌ಗೆ ಒದೆ ಬತ್ತೋ ಕುಲ್ಲಾ ದಿನೇಶ ಕೆರಳಿದ್ದಾನೆ. ಹೋದವನೇ ಲಿಂಗನ ಹುಡುಗ ಕೋಳಿಮಂಜನ ಮೇಲೆ ಕೈ ಮಾಡಿದ್ದಾನೆ. ಅಷ್ಟೇ, ಇದ್ದಕ್ಕಿದ್ದಂತೆ ಡಬಲ್ ಮೀಟ್ರು ಮೋಹನ, ಸುನೀಲನ ರೈಟ್‌ಹ್ಯಾಂಡ್ ಟಿ.ಸಿ.ವಿಜಿ, ಸುನೀಲನ ಮತ್ತೊಬ್ಬ ಬಂಟ ಮಾದು, ಲಿಂಗನ ಶಿಷ್ಯರಾದ ದೀಪು, ರಘು, ಸುಂಕದಕಟ್ಟೆಯ ಕರಿಯ, ಎಳನೀರ್ ಸೀನಾ, ವಾಲೆ ಸೀನಾ, ಅಶೋಕ ಮುಂತಾದವರೆಲ್ಲ ಕವರ್ ಆಗಿದ್ದೇ ದಿನೇಶನನ್ನು ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಬಿದ್ದ ಏಟಿಗೆ ದಿನೇಶನ ಮೂಗಿನಿಂದ ರಕ್ತ ಚಿಮ್ಮಿದೆ.

ಇಷ್ಟಾಗಿದ್ದೇ ಪೆದ್ದಗುಂಡ ಗಾಬರಿಯಿಂದ ಧಾವಿಸಿ ಬಂದಿದ್ದಾನೆ. 'ಏನ್ರೋ ನಿಮ್ಮಮ್ಮನ್, ನಮ್ಮ ಹುಡುಗ್ರ ಮೇಲೇ ಕೈ ಮಾಡ್ತೀರೇನ್ರೋ' ಎಂದು ಹೂಂಕರಿಸುತ್ತಿದ್ದಂತೆ ಡಬಲ್ ಮೀಟ್ರು ಮೋಹನ ದಿಚ್ಚಿ ಹೊಡೆದಿದ್ದಾನೆ. ಅದೆಲ್ಲಿದ್ದರೋ, ಪೆದ್ದಗುಂಡನನ್ನು ಕಂಡಿದ್ದೇ ಸರಿಸುಮಾರು ಐವತ್ತು ಮಂದಿ ಹುಡುಗರು ಮುತ್ತಿಕೊಂಡಿದ್ದೇ ಕುಲ್ಲಾದಿನೇಶ, ಪಾನ್, ಲಂಬೂ ಸೋಮ, ಪಾನಿಪೂರಿ ಹರೀಶ, ಕುಳ್ಳಾ ಶಿವರಾಜ, ನರಸಿಂಹ ಇತ್ಯಾದಿಗಳನ್ನೆಲ್ಲ ಹಾಕಿ ತದುಕಿದ್ದಾರೆ.

ಬಿದ್ದ ಏಟಿಗೆ ಪೆದ್ದಗುಂಡನ ಕಣ್ಣಿಗೆ ಗಾಯವಾದದ್ದು ಒಂದೆಡೆಯಾದರೆ ಮತ್ತೊಂದೆಡೆ ಜೈಲು ಸಿಬ್ಬಂದಿಗೂ ಪೆಟ್ಟಾಗಿದೆ. ಗೋವಿಂದ ಕೊಲೆ ಕೇಸಿನ ಹುಡುಗರಿಗೂ ಗಾಯಗಳಾಗಿವೆ. ಪೆದ್ದಗುಂಡ, ದಿನೇಶ, ಪಾನ್ ಎಲ್ಲರನ್ನೂ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿ ಸುಸ್ತಾದ ಜೈಲು ಪೊಲೀಸರು ಸುನೀಲನನ್ನೂ ಸೇರಿಸಿದಂತೆ ಇಡೀ ನಾಲ್ಕನೇ ಬ್ಲಾಕಿನ ಮೇಲೆ ಲಾಠಿಚಾರ್ಜ್ ಮಾಡಿದ್ದಾರೆ.

ಪೆದ್ದಗುಂಡ ಮಾತಾಡುವ ಸ್ಥಿತಿಯಲ್ಲಿಲ್ಲ, ಕೋತಿರಾಮ ಬಾಯಿಬಿಡುತ್ತಿಲ್ಲ. 'ಏನೋ ಚಿಕ್ಕ ಗಲಾಟೆ ಮಾಡ್ಕಂಡವ್ರೆ ಇದೇನ್ ದೊಡ್ಡ ವಿಷಯ ಅಂತಾ ತಲೆಕೆಡಿಸ್ಕೋತೀರಿ?' ಎಂದಷ್ಟೇ ಜಾನಿ ಡೈಲಾಗ್ ಹೊಡೆಯುತ್ತಾನೆ. ಪ್ರಶ್ನೆಯೆಂದರೆ ಪೆದ್ದಗುಂಡನ ಪಕ್ಕದ ಕೋಣೆಯಲ್ಲೇ ಇದ್ದ ಸುನೀಲ ಏಕೆ ಬಂದು ಬಿಡಿಸಲಿಲ್ಲ? ಸುನೀಲನ ಅಪ್ಪಣೆಯಿಲ್ಲದೇ ಆತನ ಹುಡುಗರು ಪೆದ್ದಗುಂಡನ ಮೇಲೆ ಕೈ ಮಾಡುವುದುಂಟಾ? ಇದರರ್ಥ ಪೆದ್ದಗುಂಡನ ಮೇಲಿನ ದಾಳಿಗೆ ಸುನೀಲನೇ ಆದೇಶ ಕೊಟ್ಟನಾ? ಪೆದ್ದಗುಂಡನ ಅಧಿಕ ಪ್ರಸಂಗಿತನಕ್ಕಿದು ಕೋತಿರಾಮನ ಶಾಕ್‌ಟ್ರೀಟ್‌ಮೆಂಟಾ? ಕೋತಿರಾಮನನ್ನು ಕೇಳದೇ ಸುನೀಲ ಪೆದ್ದಗುಂಡನನ್ನು ಬಿಡಿಸಲು ಸಾಧ್ಯವಾ? ಅಲ್ಲಿಗೆ ಮಚ್ಚನ ಗ್ಯಾಂಗ್ ಇಬ್ಭಾಗವಾದಂತೆ ತಾನೇ ಅರ್ಥ?

ಮಚ್ಚನ ಗ್ಯಾಂಗ್ ದುರ್ಬಲವಾಯಿತೆಂದರೆ ನಷ್ಟ ಸುನೀಲನಿಗೋ? ಅಥವಾ ಕೊರಂಗು ಕೃಷ್ಣನಿಗೋ?

ಸಿಂಡಿಕೇಟು ಸುನೀಲನಾದರೂ ಒಂದೇ ಕೊರಂಗುದಾದರೂ ಒಂದೇ ತಾನೇ? ಪೆದ್ದಗುಂಡನ ರಿವೇಂಜು ಡಬಲ್ ಮೀಟರ್ ಮೋಹನ ವಿರುದ್ಧ ತಿರುಗುತ್ತಾ ಅಥವಾ ಸುನೀಲನ ವಿರುದ್ಧವೇ ನುಗ್ಗುತ್ತಾ ಬಲ್ಲವರ್‍ಯಾರು?

ಎದುರಾಳಿ ಗ್ಯಾಂಗಿನ ರಕ್ತ ಕುಡಿಯಲು ನಿಂತವರೀಗ ತಮ್ಮದೇ ಗ್ಯಾಂಗಿನೊಳಗೆ ಬಡಿದಾಡಿಕೊಳ್ಳುತ್ತಿದ್ದಾರೆ. ಇನ್ನೆಷ್ಟು ರಕ್ತ ಹರಿಯುತ್ತೋ ಯಾರಿಗೆ ಗೊತ್ತು?


■ ರಾ. ಸೋಮನಾಥ

# ಹುಬ್ಬಳ್ಳಿ ಮಟ್ಕಾ ಕಿಂಗ್ ಮಾಧುಸಾ!

ಈತನ ಪೂರ್ಣ ಹೆಸರು ಮಾಧುಸಾ ಮೇತ್ರಾಣಿ. ಇಡೀ ಉತ್ತರ ಕರ್ನಾಟಕ, ಗೋವಾ ಮತ್ತು ಆಂಧ್ರಪ್ರದೇಶದ ರಾಯಲಸೀಮ ಪ್ರದೇಶದಾದ್ಯಂತ ಹಬ್ಬಿಕೊಂಡಿರುವ ಮಟ್ಕಾ ಸಾಮ್ರಾಜ್ಯದ ಚಕ್ರವರ್ತಿ. ಹುಬ್ಬಳ್ಳಿಯ ಕೇಶ್ವಾಪೂರವೇ ಅದಕ್ಕೆ ರಾಜಧಾನಿ. ಹಿಂದೆಲ್ಲ ಸಿಗರೇಟ್ ಪ್ಯಾಕಿನ ಪೇಪರ್‌ನಲ್ಲಿ ನಡೆಯುತ್ತಿದ್ದ ಈ ದಂಧೆಯನ್ನು ಮೊಬೈಲ್ ಫೋನ್ ಬಳಸುತ್ತಾ ಹೈಟೆಕ್ ಸ್ಪರ್ಶ ಕೊಟ್ಟ ಕೀರ್ತಿಯೂ ಇವನಿಗೆ ಸಲ್ಲಬೇಕು. ಮಟ್ಕಾ ದಂಧೆಯಿಂದ ಅದೆಷ್ಟು ಸಾವಿರ ಜನ ಬೀದಿಪಾಲಾಗಿದ್ದಾರೋ ಗೊತ್ತಿಲ್ಲ, ಅಂತೂ ಮಾಧುಸಾನ ಮಟ್ಕಾ ಸಾಮ್ರಾಜ್ಯ ಮಾತ್ರ ವಿಸ್ತರಿಸುತ್ತಲೇ ಇದೆ.

ಈ ಹಿಂದೆ ರವಿಕಾಂತೆಗೌಡರು ಡಿಸಿಪಿಯಾಗಿದ್ದಾಗ ಮಾಧುಸಾ ಮೇತ್ರಾಣಿಯನ್ನು ಬಂಧಿಸಿ ಜೈಲಿಗಟ್ಟಿದ್ದರು. ಈಗ ಆತ ಮತ್ತೆ ಹೊರಬಂದಿದ್ದಾನೆ. ತಡ ಮಾಡದೇ ತನ್ನ ಹಳೆಯ ಮಟ್ಕಾ ದಂಧೆಯನ್ನು ಇನ್ನಷ್ಟು ವ್ಯವಸ್ಥಿತವಾಗಿ ಶುರುಹಚ್ಚಿಕೊಂಡಿದ್ದಾನೆ. ಅವಳಿ ನಗರಗಳ ಪೊಲೀಸ್ ಕಮೀಷನರ್ ಎಸ್.ಶಿವಕುಮಾರ್ ಮಾತ್ರ ಇದೆಲ್ಲದನ್ನು ನೋಡಿಯೂ ನೋಡದಂತೆ ಜಾಣಕುರುಡು ಪ್ರದರ್ಶಿಸುತ್ತಿದ್ದಾರೆ.

ಹುಬ್ಬಳ್ಳಿಯ ಈ ದೊ ನಂಬರ್ ದಂಧೆಗಳಿಗೆ ತನ್ನದೇ ಆದ ಚರಿತ್ರೆಯಿದೆ. ಕೇಶ್ವಾಪೂರ್, ಕಮರಿಪೇಟೆ, ಸೆಟ್ಲಮೆಂಟ್‌ನಂತಹ ಏರಿಯಾಗಳೇ ಉತ್ತರ ಕರ್ನಾಟಕದ ದೊ ನಂಬರ್ ಸಾಮ್ರಾಜ್ಯದ ರಾಜಧಾನಿಗಳು.



ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಿಗೆ ಅದೆಷ್ಟೋ ಪೊಲೀಸ್ ಕಮೀಷನರ್‌ಗಳು ಬಂದು ಹೋಗಿದ್ದಾರೆ. ಬರುವಾಗ ಎಲ್ಲರೂ ಘರ್ಜಿಸುತ್ತಲೇ ಬರುತ್ತಾರೆ. ಒಂದೆರಡು ವಾರ, ತೀರಾ ದಕ್ಷ ಅಧಿಕಾರಿಯಾದರೆ ಒಂದೆರಡು ತಿಂಗಳು ಮಾತ್ರ ಈ ಘರ್ಜನೆ ನಡೆಯುತ್ತದೆ. ನಿಧಾನಕ್ಕೆ ಕೇಶ್ವಾಪೂರ್, ಕಮರಿಪೇಟೆ, ಸೆಟ್ಲಮೆಂಟ್ ಡಾನ್‌ಗಳು ಕಮೀಷನರ್‌ಗಳಿಗೂ friends ಆಗಿಬಿಡುತ್ತಾರೆ. ಆಮೇಲೆ ಎಲ್ಲಾ ಮಾಮೂಲು. ಈ ಕಾರಣಕ್ಕಾಗಿಯೇ ಎಷ್ಟೋ ವರ್ಷಗಳಿಂದ ಹುಲುಸಾಗಿ ಬೆಳೆದು ನಿಂತಿರುವ ಮಟ್ಕಾ, ಇಸ್ಪೀಟ್, ಗಾಂಜಾ ಮಾರಾಟ, ಸೆಕೆಂಡ್ಸ್ ಮಾರಾಟ, ವೈ ದಂಧೆಗಳನ್ನು ಸಂಪೂರ್ಣವಾಗಿ ನಿಯಂತ್ರಿಸುವುದಕ್ಕೆ ಯಾವ ಪೊಲೀಸ್ ಕಮೀಷನರ್‌ನಿಂದಲೂ ಸಾಧ್ಯವಾಗಿಲ್ಲ.

ಗಗನದೀಪ್ ಅವಳಿ ನಗರಗಳಿಗೆ ಪೊಲೀಸ್ ಕಮೀಷನರ್ ಆಗಿ ಬಂದಿದ್ದಾಗ ಈ ಎಲ್ಲಾ ದಂಧೆಗಳಿಗೆ ತಾತ್ಕಾಲಿಕ ಬ್ರೇಕ್ ಬಿದ್ದಿದ್ದು ನಿಜ. ಆಗ ಗಗನದೀಪ್‌ರಿಗೆ ಸಾಥ್ ನೀಡಿದ್ದ ರವಿಕಾಂತೆಗೌಡರು ಇದೇ ಮಟ್ಕಾ ಕಿಂಗ್ ಮಾಧುಸಾನನ್ನು ಗದುಮಿ ಜೈಲಿಗಟ್ಟಿದ್ದರು. ಆದರೆ, ಅಷ್ಟು ಹೊತ್ತಿಗಾಗಲೇ ದೈತ್ಯನಾಗಿ ಬೆಳೆದಿದ್ದ ಮಾಧುಸಾ ಬೇಲ್ ಮೇಲೆ ಹೊರಬರಲು ಬಹಳ ಕಾಲ ತೆಗೆದುಕೊಳ್ಳಲಿಲ್ಲ. ಯಾವಾಗ, ಗಗನದೀಪ್‌ರ ಜಾಗಕ್ಕೆ ನಾರಾಯಣ ನಡುಮನಿ ಕಮೀಷನರಾಗಿ ಬಂದು ಕುಳಿತರೋ ಮಾಧುಸಾನ ಮಟ್ಕಾ ದಂಧೆಯೂ ನಿಧಾನಕ್ಕೆ ಪ್ರಾರಂಭವಾಗಿಬಿಟ್ಟಿತು. ಈಗ ಎಷ್ಟರಮಟ್ಟಿಗೆ ಬೆಳೆದು ನಿಂತಿದೆಯೆಂದರೆ ಇಡೀ ಉತ್ತರ ಕರ್ನಾಟಕ ಮಾತ್ರವಲ್ಲದೆ, ಗೋವಾ ಮತ್ತು ಆಂಧ್ರಪ್ರದೇಶದ ಗುಂತಕಲ್‌ತನಕ ಈತನ ಮಟ್ಕಾ ಸಾಮ್ರಾಜ್ಯ ಹರಡಿಕೊಂಡಿದೆ; ಖಲಮು, ಖುಲ್ಲಾ ಚೀಟಿಯಲ್ಲಿ ಬರೆದಿಡುತ್ತಿದ್ದ ಮಟ್ಕಾಕ್ಕೆ ಮೊಬೈಲ್ ಬಳಕೆ ಪ್ರಾರಂಭವಾಗಿ ಹೈಟೆಕ್ ಸ್ಪರ್ಶ ಕೂಡ ಬಂದಿದೆ. ದಿನವೊಂದಕ್ಕೆ ಏನಿಲ್ಲವೆಂದರೂ ಕೋಟ್ಯಾಂತರ ರೂಪಾಯಿ ವ್ಯವಹಾರ ಮೊಬೈಲ್‌ನಲ್ಲಿಯೇ ನಡೆಯುತ್ತಿದೆ.


ಅವಳಿ ನಗರಗಳ ಮೂವತ್ತಕ್ಕೂ ಹೆಚ್ಚು ಬುಕ್ಕಿಗಳು ಮೊಬೈಲ್ ಮೂಲಕವೇ ತಮ್ಮ ಮಟ್ಕಾ ವ್ಯವಹಾರಗಳನ್ನು ನಡೆಸುತ್ತಾರೆ. ಅರಳಿಕಟ್ಟೆ ಓಣಿಯ ಭೋಜು, ಕಮರಿಪೇಟೆಯ ಗಜು, ಕಠಾರೆ, ಕೇಶ್ವಾಪೂರದ ರಾಜೇಶ, ಜನತಾ ಬಜಾರ್‌ನ ವಿಷ್ಣು ಲದ್ವಾ, ಶ್ರೀಕಾಂತ; ಕಬಾಡೆ ಶೀತಲ್, ಮೋದಿ ಎಲ್ಲರ ಮೊಬೈಲುಗಳೂ ಈಗ ಬಿಜಿಯಾಗಿಬಿಟ್ಟಿವೆ. ಈಗ ಈ ಹಳೆ ಕುಳಗಳ ಜೊತೆ ಹೊಸ ಬುಕ್ಕಿಗಳೂ ಸೇರಿಕೊಂಡಿದ್ದಾರೆ. ಗೋಕುಲ ರಸ್ತೆಯ ತೋಪಲಗಟ್ಟಿ, ಗದಗ ರಸ್ತೆಯ ಆರ್‌ಜಿಎಸ್‌ವರೆಗೆ, ಬಂಕಾಪೂರ ಚೌಕ ಹತ್ತಿರದ ಇಂದಿರಾನಗರದಲ್ಲಿ ವ್ಯವಹಾರ ನಡೆಸುತ್ತಿರುವ ಬುಕ್ಕಿಗಳು ಮಟ್ಕಾ ಜೊತೆಗೆ ಅಂದರ್-ಬಾಹರ್ ಅಡ್ಡೆಗಳನ್ನೂ ತೆರೆದಿದ್ದಾರೆ. ಇನ್ನು ಧಾರವಾಡದ ಮಟ್ಕಾ ಬುಕ್ಕಿ ಕಲಾಲ್ ತಮ್ಮ ಕುಟುಂಬದ ಯುವರಾಜನನ್ನು ಪಟ್ಟಕ್ಕೆ ತಂದು ಕೂಡ್ರಿಸಿದ್ದಾರೆ.

ಬಾಂಬೆ ಮಟ್ಕಾ ಕಿಂಗ್ ರತನ್ ಖತ್ರಿ ಸಿಂಡಿಕೇಟ್‌ನ ಪ್ರತಿನಿಧಿಯಾಗಿ ಮುಂದುವರೆದಿರುವ ಮಾಧುಸಾ ಮೇತ್ರಾಣಿಗೆ ಬಿಜೆಪಿಯೇ ಗಾಡ್‌ಫಾದರ್. ಬಿಜೆಪಿ ಪಕ್ಷ ಹುಬ್ಬಳ್ಳಿ-ಧಾರವಾಡಗಳಲ್ಲಿ ಭದ್ರವಾಗಿ ನೆಲೆಯೂರುವುದಕ್ಕೆ ಪಟ್ವೇಗಾರ ಸಮಾಜವೇ ಅನ್ನ ನೀರು ಹಾಕಿ ಬೆಳೆಸಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಪಟ್ವೇಗಾರ ಸಮಾಜದ ಕುಡಿಯಾಗಿರುವ ಮಾಧುಸಾನ ಬೆನ್ನಿಗೆ ಬಿಜೆಪಿ ನಿಂತಿರುವುದರಲ್ಲಿ ಆಶ್ಚರ್ಯವೂ ಇಲ್ಲ. ಮಾಧುಸಾನ ಮಟ್ಕಾಗೆ ಜನ ಎಷ್ಟೊಂದು ಅಡಿಕ್ಟ್ ಆಗಿ ಬಿಟ್ಟಿದ್ದಾರೆಂದರೆ ಮಧ್ಯಾಹ್ನ ಬರುವ ಓಪನ್ ನಂಬರ್‌ಗಾಗಿ ಊಟ ಬಿಟ್ಟು ಕಾಯುತ್ತಾರೆ, ರಾತ್ರಿ ಬರುವ ಕ್ಲೋಸ್ ನಂಬರ್‌ಗಾಗಿ ನಿದ್ರೆಬಿಟ್ಟು ಎದುರುನೋಡುತ್ತಿರುತ್ತಾರೆ. ಜನ ಊಟ-ನಿದ್ರೆ ಬಿಟ್ಟರೂ ಮಾಧುಸಾ ಜೇಬು ತುಂಬುತ್ತಲೇ ಇರುತ್ತದೆ. ಹೀಗಾಗಿಯೇ ಇಂದು ಮಾಧುಸಾ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಕೋಟ್ಯಾಧಿಪತಿಗಳಲ್ಲಿ ನಂಬರ್ ಒನ್ ಸ್ಥಾನ ಪಡೆದಿದ್ದಾನೆ.

ಮಾಧುಸಾನ ಕಂಟ್ರೋಲ್ ರೂಮ್ ಮೊದಲು ಹುಬ್ಬಳ್ಳಿಯ ಕೇಶ್ವಾಪೂರ್‌ನಲ್ಲಿತ್ತು. ಈಗದು ಹರಿಹರಕ್ಕೆ ವರ್ಗಾವಣೆಯಾಗಿದೆ. ಈತನ ಮಟ್ಕಾ ಸಾಮ್ರಾಜ್ಯ ಇಷ್ಟೊಂದು ವಿಸ್ತಾರವಾಗಿ ಹರಡಿಕೊಳ್ಳಲು ಪ್ರಧಾನವಾಗಿ ಪೊಲೀಸರೇ ಕಾರಣ ಎಂದರೆ ತಪ್ಪಾಗಲಾರದು. ಇಂದಿಗೂ ಕೆಲವು ಹಳೆ-ಹೊಸ ಪೊಲೀಸ್ ಅಧಿಕಾರಿಗಳು ನೇರವಾಗಿ ಮಾಧುಸಾನ ಮಟ್ಕಾ ದಂಧೆಗೆ ಬೆಂಗಾವಲಾಗಿ ನಿಂತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಹಳೆಯ ಮಟ್ಕಾ ಡಾನ್‌ಗಳೆಲ್ಲಾ ಈಗ ಮೇಲ್ನೋಟಕ್ಕೆ ರೆಡಿಮೇಡ್ ಬಟ್ಟೆ ಅಂಗಡಿ, ಮೊಬೈಲ್ ಅಂಗಡಿಗಳನ್ನು ತೆರೆದುಕೊಂಡು ಕುಳಿತಿದ್ದಾರಾದರೂ ಅದು ತೋರಿಕೆಗೆ ಮಾತ್ರ. ಈ ಅಂಗಡಿಗಳಲ್ಲಿ ಮಟ್ಕಾ ದಂಧೆಯೇ ಮೊದಲಿಗಿಂತ ಜೋರಾಗಿ ನಡೆಯುತ್ತಿರುವುದು ಪೊಲೀಸರಿಗೆ ಗೊತ್ತಿದ್ದರೂ ಮಾಮೂಲಿ ವಸೂಲಿ ಮಾಡಿಕೊಂಡು ಸುಮ್ಮನಿದ್ದಾರೆ.

ಇದೆಲ್ಲಾ ಕಮೀಷನರ್ ಶಿವಕುಮಾರ್‌ಗೆ ಕಾಣಿಸುತ್ತಿಲ್ಲವೆ?

■ ಹುಬ್ಬಳ್ಳಿಯಾಂವ








# ಮಾಧ್ಯಮಗಳೂ ಪಾಪರ್

ಮೊನ್ನೆ ಮೊನ್ನೆ ತನಕ ಪತ್ರಕರ್ತ ಸುಂದರ್ ಜೀವನದಲ್ಲಿ ಅಂತಹ ಸಮಸ್ಯೆಗಳೇನಿರಲಿಲ್ಲ. ಸದ್ಯದಲ್ಲೇ ಶುರುವಾಗಲಿದ್ದ ಟಿವಿ ಚಾನೆಲ್ ಒಂದರ ಸುದ್ದಿ ವಿಭಾಗಕ್ಕೆ ಮುಖ್ಯಸ್ಥರಾಗಿ ಆಯ್ಕೆಯಾಗಿದ್ದ ಸುಂದರ್ ಪ್ರತಿ ತಿಂಗಳು ಮೂವತ್ತು ಸಾವಿರದಷ್ಟು ಕೈತುಂಬ ಸಂಬಳ ಪಡೆಯುತ್ತಿದ್ದರು. ಹೊಸ ಜಾಗವಾದ್ದರಿಂದ ಹೊಸದನ್ನು ಮಾಡುವ ಹುಮ್ಮಸ್ಸೂ ಅವರಲ್ಲಿತ್ತು. ಆದರೀಗ ಆ ಚಾನೆಲ್ ಅನ್ನು ಪ್ರಾರಂಭಿಸುವ ಯೋಜನೆ ಸ್ಥಗಿತಗೊಂಡಿದ್ದು ಸುಂದರ್ ಕೆಲಸವೂ ಇಲ್ಲ, ಸಂಬಳವೂ ಇಲ್ಲದಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ.

ಇವತ್ತು ಕರ್ನಾಟಕದಲ್ಲಿ ಮಾತ್ರವಲ್ಲ ಜಗತ್ತಿನಾದ್ಯಂತ ಆರ್ಥಿಕ ಬಿಕ್ಕಟ್ಟಿಗೆ ಬಲಿಯಾಗಿ ಹಲವಾರು ಪತ್ರಿಕೆಗಳು ಮತ್ತು ಟಿವಿ ಚಾನೆಲ್‌ಗಳು ಬಂದಾಗುತ್ತಿವೆಯಲ್ಲದೆ ಸುಂದರ್ ತರಹದ ಸಾವಿರಾರು ಪತ್ರಕರ್ತರೂ ತಮ್ಮ ಕೆಲಸ ಕಳೆದುಕೊಂಡು ನಿರುದ್ಯೋಗದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

ಅಮೆರಿಕದಲ್ಲಿ ಪ್ರಸ್ತುತ ಸ್ಥಿತಿಯನ್ನೇ ನೋಡಿ. ಅಲ್ಲಿನ ಜನಪ್ರಿಯ ಪತ್ರಿಕೆಗಳಾದ 'ಲಾಸ್ ಏಂಜಲೀಸ್ ಟೈಮ್ಸ್' ಮತ್ತು 'ಶಿಕಾಗೊ ಟ್ರಿಬ್ಯೂನ್' ಗಳನ್ನು ಪ್ರಕಟಿಸುತ್ತಿದ್ದ 'ದಿ ಟ್ರಿಬ್ಯೂನ್ ಕಂಪನಿ' ಎಂಬ ಪ್ರಕಾಶಕ ಸಂಸ್ಥೆ ದಿವಾಳಿ ಎದ್ದಿವೆ. ಈ ಕಂಪನಿ 23 ಟಿವಿ ಕೇಂದ್ರ ಮತ್ತು 12 ಪತ್ರಿಕೆಗಳನ್ನು ನಡೆಸುತ್ತಿತ್ತು. ಪ್ರಭಾವಶಾಲಿ ಪತ್ರಿಕೆ 'ನ್ಯೂಯಾರ್ಕ್ ಟೈಮ್ಸ್' ತನ್ನ ಆಸ್ತಿಯನ್ನೆಲ್ಲಾ ಮಾರಿಕೊಂಡರೂ ಆರ್ಥಿಕ ತೊಂದರೆಯಿಂದ ಬಚಾವಾಗಲು ಸಾಧ್ಯವಾಗಲು ಅದಕ್ಕೆ ಸಾಧ್ಯವಾಗುತ್ತಿಲ್ಲ. ಅದೀಗ 225 ದಶಲಕ್ಷ ಡಾಲರ್ ನೆರವು ನೀಡುವಂತೆ ಬೇಡಿಕೊಳ್ಳುತ್ತಿದೆ. 'ಮಿಯಾಮಿ ಹೆರಾಲ್ಡ್'ಎಂಬ ಇನ್ನೊಂದು ಜನಪ್ರಿಯ ಪತ್ರಿಕೆಯನ್ನು ಮಾರಲು ಮಾಲೀಕರು ಸಿದ್ಧವಾಗಿ ಕುಳಿತಿದ್ದಾರೆ. ಆದರೆ ಗಿರಾಕಿಗಳೇ ಇಲ್ಲ. ಈ ಪತ್ರಿಕೆಯ ಪ್ರಸಾರ ಸಂಖ್ಯೆ 2,10,000!




ಇನ್ನು ಸುದ್ದಿವಾಹಿನಿಗಳ ಕತೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಅತ್ಯಂತ ಜನಪ್ರಿಯ ಚಾನಲ್ ಸಿಬಿಎಸ್‌ನ ಷೇರುದರ ಐದು ಡಾಲರ್‌ಗಿಂತಲೂ ಕಡಿಮೆಯಾಗಿದೆ. ಇದೇ ದಾರಿಯಲ್ಲಿ ದಿ ನ್ಯೂಸ್, ಟೈಮ್ ವಾರ್ನರ್ ಮತ್ತಿತರ ಚಾನಲ್ ಕಂಪನಿಗಳ ಷೇರುಬೆಲೆ ಪಾತಾಳಕ್ಕೆ ಬಿದ್ದಿದೆ.

ಆರ್ಥಿಕ ಬಿಕ್ಕಟ್ಟು ಭಾರತದ ಮೇಲೂ ಪರಿಣಾಮ ಬೀರುತ್ತಿದ್ದಂತೆ ಇಲ್ಲಿಯ ಮಾಧ್ಯಮಗಳೂ ಸಂಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿವೆ. ಪ್ರತಿಷ್ಠಿತ ವಾರಪತ್ರಿಕೆ 'ಔಟ್‌ಲುಕ್' ಮಾರಾಟಕ್ಕಿದೆ ಎಂಬ ಮಾತು ಕೇಳಿಬರುತ್ತಿದೆ. ನಿರೀಕ್ಷಿತ ಆದಾಯವಿಲ್ಲದಿರುವುದರಿಂದ ಎನ್‌ಡಿಟಿವಿ ಜಾಸ್ತಿ ನಿಧಿ ಸಂಗ್ರಹಿಸಲು ಹೊರಟಿದೆ. ಇಂಡಿಯಾ ಟುಡೆ ಬೆಂಗಾಲಿ ಆವೃತ್ತಿಯನ್ನು ಸ್ಥಗಿತಗೊಳಿಸಿದೆ. ಸುದ್ದಿವಾಹಿನಿ ಶುರು ಮಾಡಲು ಹೊರಟಿದ್ದ ಯುಟಿವಿ ಸುಮ್ಮನಾಗಿದೆ. ಬಿಸಿನೆಸ್ ಸ್ಟ್ಯಾಂಡರ್ಡ್ ಗುಜರಾತಿ ಆವೃತ್ತಿಯನ್ನು ಸ್ಥಗಿತಗೊಳಿಸಿದೆ. ಹಿಂದಿಯಲ್ಲಿ ಬಿಸಿನೆಸ್ ಪತ್ರಿಕೆ ಆರಂಭಿಸಲು ಹೊರಟಿದ್ದ ದೈನಿಕ್ ಜಾಗರಣ್ ಪ್ರಾಜೆಕ್ಟನ್ನು ಕ್ಯಾನ್ಸಲ್ ಮಾಡಿದೆ. ಮಹಾರಾಷ್ಟ್ರ ಮೂಲದ ಇಂಗ್ಲಿಷ್ ಪತ್ರಿಕೆ 'ಸಕಾಲ್ ಟೈಮ್ಸ್' ದೆಹಲಿ ಆವೃತ್ತಿಯನ್ನು ಹೇಳದೇ ಕೇಳದೇ ನಿಲ್ಲಿಸಿ ನೂರಾರು ಮಂದಿ ಪತ್ರಕರ್ತರನ್ನು ಬೀದಿಗೆ ತಳ್ಳಿದೆ.

ಪ್ರಪಂಚದ ನಂ.1 ಇಂಗ್ಲಿಷ್ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಟೈಮ್ಸ್ ಆಫ್ ಇಂಡಿಯಾ ಪುಟಗಳನ್ನು ಕಡಿತಮಾಡಿದ್ದಲ್ಲದೆ, ಕೆಲ ನಗರಗಳಲ್ಲಿ ಪತ್ರಿಕೆಯ ಬೆಲೆ ಹೆಚ್ಚಿಸಿದೆ. ಮುಂಬೈನಲ್ಲಿ ಈಗ ಟಿಒಐ ಬೆಲೆ 4.50! ಈ ಪತ್ರಿಕೆ ಪ್ರಕಟಿಸುವ ಬೆನೆಟ್, ಕೋಲ್‌ಮನ್ ಅಂಡ್ ಕಂಪನಿ ಒಂದು ಸಾವಿರ ಮಂದಿಯನ್ನು ಕೆಲಸದಿಂದ ತೆಗೆದು ಹಾಕಲು ನಿರ್ಧರಿಸಿದೆ. ಈಗಾಗಲೇ ಇಂಟರ್‌ನೆಟ್ ಎಡಿಷನ್ ಮತ್ತು ಟೈಮ್ಸ್ ಫೌಂಡೇಷನ್‌ನಿಂದ ಹಲವರನ್ನು ಮನೆಗೆ ಕಳುಹಿಸಿಯಾಗಿದೆ. ಸಾಫ್ಟ್‌ವೇರ್ ಕಂಪನಿಗಳಂತೆ ಈ ಕಂಪನಿ ಕೂಡ ಉದ್ಯೋಗಿಗಳಿಗೆ ನೀಡಿದ್ದ ಸವಲತ್ತುಗಳನ್ನು ಒಂದೊಂದಾಗಿ ನಿಲ್ಲಿಸುತ್ತಿದೆ.

ಇನ್ನೊಂದು ಪ್ರತಿಷ್ಠಿತ ಇಂಗ್ಲಿಷ್ ದೈನಿಕ 'ಡಿಎನ್‌ಎ' ಬೆಂಗಳೂರು ಆವೃತ್ತಿಯನ್ನು ಇತ್ತೀಚೆಗೆ ಆರಂಭಿಸಿದೆಯಾದರೂ, ಪುಟಗಳ ಸಂಖ್ಯೆಯನ್ನು ಕಡಿಮೆ ಮಾಡಿದೆ, ಬೆಲೆ ಹೆಚ್ಚಿಸಿದೆ. ಭಾರತದ ಪತ್ರಿಕೆಗಳಲ್ಲಿ ಪ್ರಕಟವಾಗುವ ಜಾಹಿರಾತುಗಳ ಮೇಲೆ ಕಣ್ಣಿಟ್ಟಿರುವ 'ಆಡೆಕ್ಸ್'ನ ಪ್ರಕಾರ ಕಳೆದ ಆಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ಪ್ರತಿಕೆಗಳಿಗೆ ಜಾಹೀರಾತು ಹರಿವು ಶೇ. 45ರಷ್ಟು ಕಡಿಮೆಯಾಗಿದೆ. ಕೇವಲ ಪತ್ರಿಕೆಗಳಿಗೆ ಮಾತ್ರ ಜಾಹೀರಾತು ಕಡಿಮೆಯಾಗಿಲ್ಲ ಸುದ್ದಿ ವಾಹಿನಿಗಳು ಮತ್ತು ಮನರಂಜನಾ ಚಾನಲ್‌ಗಳಿಗೂ ಇದರ ಹೊಡೆತ ಬಿದ್ದಿದೆ. ಒಂದು ಅಂದಾಜಿನ ಪ್ರಕಾರ ಚಾನಲ್‌ಗಳ ಈ ವರ್ಷದ ನಷ್ಟ 300 ಕೋಟಿ ರೂ.ಗಳನ್ನೂ ಮೀರಲಿದೆ.

ಇನ್ನು ನಮ್ಮ ರಾಜ್ಯಕ್ಕೆ ಸೀಮಿತವಾಗಿ ಹೇಳುವುದಾದರೆ, ನಂ.1 ಕನ್ನಡ ಪತ್ರಿಕೆ 'ವಿಜಯ ಕರ್ನಾಟಕ' ಪ್ರಕಟಿಸುತ್ತಿರುವ, ಟೈಮ್ಸ್ ಗ್ರೂಪ್‌ನ ಆಡಳಿತಕ್ಕೆ ಒಳಪಟ್ಟ ವಿಪಿಎಲ್ ಸಂಸ್ಥೆ ತೀವ್ರ ನಷ್ಟ ಅನುಭವಿಸುತ್ತಿದೆ. ಹೀಗಾಗಿ ಈ ಪತ್ರಿಕೆಗೆ ಹೊಸ ರೂಪ ನೀಡಲು ಮುಂದಾಗಿದೆ (ವಿವರಗಳಿಗೆ ಬಾಕ್ಸ್ ನೋಡಿ). ಈಗಾಗಲೇ ವಿಜಯ ಕರ್ನಾಟಕದ ಪುಟಗಳ ಸಂಖ್ಯೆಯನ್ನು ಬೆಂಗಳೂರಿನಲ್ಲಿ 12ಕ್ಕೆ ಇತರೆಡೆ 10ಕ್ಕೆ ಇಳಿಸಲಾಗಿದೆ. ಪುರವಣಿಗಳ ಪುಟಗಳಿಗೂ ಕತ್ತರಿ ಬಿದ್ದಿದೆ. ಇದೇ ಸಂಸ್ಥೆ ಪ್ರಕಟಿಸುವ ಟೈಮ್ಸ್ ಆಫ್ ಇಂಡಿಯಾ (ಕನ್ನಡ) ಪತ್ರಿಕೆಯ ಪುಟಗಳ ಸಂಖ್ಯೆಯನ್ನೂ 12ಕ್ಕೆ ಇಳಿಸಲಾಗಿದೆ, ಪ್ರಾಪರ್ಟಿ ಟೈಮ್ಸ್ ಎಂಬ ಪುರವಣಿಯನ್ನು ನಿಲ್ಲಿಸಲಾಗಿದೆ. ಪ್ರಜಾವಾಣಿಯಲ್ಲಿಯೂ ಖರ್ಚು ಕಡಿಮೆ ಮಾಡಬೇಕೆಂದು ಸೂಚನೆ ಹೊರಡಿಸಲಾಗಿದೆ. 'ಏಕಾಂತ ಕರ್ನಾಟಕ' ವಾರಪತ್ರಿಕೆ ಸ್ಥಗಿತಗೊಂಡಿದೆ.

ಕನ್ನಡದಲ್ಲಿ ಚಾನಲ್ ಆರಂಭಿಸಲು ಹೊರಟಿದ್ದ ರಾಜ್ ಟಿವಿ ಹಿಂದೆ ಸರಿದಿದೆ. ಹೀಗಾಗಿ ಈಗಾಗಲೇ ಈ ಚಾನಲ್‌ಗಾಗಿ ಕೆಲಸ ಮಾಡುತ್ತಿದ್ದ ಹತ್ತಾರು ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ. ಅನಿತಾ ಕುಮಾರಸ್ವಾಮಿ ಮಾಲಿಕತ್ವದ 'ಕಸ್ತೂರಿ' ಚಾನಲ್ ಶೇ.30ರಷ್ಟು ಸಿಬ್ಬಂದಿ ಕಡಿತ ಮಾಡಲು ಹೊರಟಿದೆ. ಈಗಾಗಲೇ 35 ಕ್ಕೂ ಹೆಚ್ಚು ಮಂದಿಯನ್ನು ಕೆಲಸದಿಂದ ತೆಗೆದುಹಾಕಲಾಗಿದೆ.

ಸ್ಟಾರ್ ಒಡೆತನಕ್ಕೆ ಒಳಪಟ್ಟ ಏಷ್ಯಾನೆಟ್‌ನ ಸುವರ್ಣ ಚಾನಲ್‌ನಲ್ಲೂ ಉದ್ಯೋಗ ಕಡಿತದ ವದಂತಿಗಳಿವೆ. ಇಂತಹ ಪರಿಸ್ಥಿತಿಯಲ್ಲಿ ಸತೀಶ್ ಜಾರಕಿಹೊಳಿ ಮಾಲಿಕತ್ವದ 'ಸಮಯ' ಸುದ್ದಿವಾಹಿನಿ ಆರಂಭವಾಗುವುದು ಕಷ್ಟ. ಒಟ್ಟಾರೆ ರಾಜ್ಯದಲ್ಲಿಯೂ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ನೂರಾರು ಪತ್ರಕರ್ತರು, ಮಾಧ್ಯಮಗಳ ತಾಂತ್ರಿಕ ಸಿಬ್ಬಂದಿ ಬೀದಿಗೆ ಬೀಳುತ್ತಿದ್ದಾರೆ. ■

## ನ್ಯೂಸ್ ಪೇಪರ್‌ಗೂ ಕತ್ತರಿ!

ಸಾಫ್ಟ್‌ವೇರ್ ಉದ್ಯಮದ ಒಳಗಡೆ ಚಿಲ್ಲರೆ ಖರ್ಚುಗಳ ಬಗ್ಗೆಯೂ ಈಗ ಎಷ್ಟು ನಿಗಾ ಇಡುತ್ತಿದ್ದಾರೆಂದರೆ ಕೆಲವು ಕಂಪನಿಗಳು ನ್ಯೂಸ್ ಪೇಪರ್ ತರಿಸುವುದನ್ನು ನಿಲ್ಲಿಸಿದೆ.

ಎಂ.ಜಿ. ರೋಡಿನಲ್ಲಿರುವ ವಿಪ್ರೋ ಕಂಪನಿಯು ಎರಡು ಮಹಡಿಗಳಲ್ಲಿ ಹರಡಿಕೊಂಡಿದ್ದ ತನ್ನ ಕಚೇರಿಗೆ ಈ ಮೊದಲು ಫೈನಾನ್ಷಿಯಲ್ ಟೈಮ್ಸ್, ಡೆಕ್ಕನ್ ಹೆರಾಲ್ಡ್, ಎಕನಾಮಿಕ್ ಟೈಮ್ಸ್‌ಗಳನ್ನು ಡಜನ್ ಲೆಕ್ಕದಲ್ಲಿ ತರಿಸುತ್ತಿತ್ತು. ಈಗ ಅದೆಲ್ಲಾ ಕಟ್ ಮಾಡಿ ಮಿಡ್ ಡೇ ಪೇಪರ್ ಮಾತ್ರ ತರಿಸುತ್ತಿದ್ದಾರೆ. ಅದೂ ದಿನಕ್ಕೆ ನೂರೈವತ್ತು ಪ್ರತಿಗಳು! ಯಾಕೆ ಗೊತ್ತಾ ಮಿಡ್‌ಡೇ ಫ್ರೀಯಾಗಿ ಸಿಗುತ್ತೇಂತ. ಅದೇ ರೀತಿ ಸಿಸ್ಕೋ ಸಿಸ್ಟಮ್ಸ್ ಎಂಬ ಇನ್ನೊಂದು ಸಾಫ್ಟ್‌ವೇರ್ ಕಂಪನಿ ಕಚೇರಿಗೆ ಮೊದಲು ಎಷ್ಟು ತರದ ಪತ್ರಿಕೆಗಳು ಸರಬರಾಜಾಗುತ್ತಿದ್ದವೆಂದರೆ ಅದರ ಬಾಬ್ತು ತಿಂಗಳ ಬಿಲ್ ಮೊತ್ತವೇ ಹದಿನೈದು ಸಾವಿರವಿತ್ತು.

ಈಗ ಸಿಸ್ಕೋನವರು ದುಡ್ಡು ಉಳಿಸಲು ಕೆಲವು ಪೇಪರ್ ನಿಲ್ಲಿಸಿ ತಿಂಗಳ ಖರ್ಚನ್ನು ಕೇವಲ ಐದು ಸಾವಿರ ಮಾಡಿಕೊಂಡಿದ್ದಾರೆ. ಅವರೇನೊ ಖರ್ಚು ಕಡಿಮೆ ಮಾಡಿಕೊಂಡರು ಸರಿ ಆದರೆ ಈ ಆರ್ಥಿಕ ಕುಸಿತದ ಪರಿಣಾಮಕ್ಕೂ ಇನ್ನೊಂಥರಾ ಚೈನ್ ರಿಯಾಕ್ಷನ್ ಇದೆ.

ಅದು ಹೇಗಂತೀರಾ?

ಪೇಪರ್ ಮಾಲೀಕರಿಗೆ ಅಷ್ಟು ಪ್ರತಿಗಳ ಮಾರಾಟ ಕಡಿಮೆಯಾಯಿತು, ಜೊತೆಗೆ ಏಜೆಂಟರಿಗೆ ಅಷ್ಟು ಕಮಿಷನ್ ಆದಾಯ ಕಡಿಮೆಯಾಯಿತಲ್ಲ? ■

# ದಿವಾಳಿ

ಕಳೆದ ಸೆಪ್ಟಂಬರ್ ಮಧ್ಯಭಾಗದಲ್ಲಿ ಅಮೇರಿಕಾದ ಬ್ಯಾಂಕಿಂಗ್ ವಲಯದಲ್ಲಿ ಸ್ಫೋಟಗೊಂಡ ಹಣಕಾಸು ಬಿಕ್ಕಟ್ಟು ಎರಡೇ ತಿಂಗಳಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟಾಗಿ ಪರಿವರ್ತನೆಗೊಂಡಿದೆ. ದಿನದಿಂದ ದಿನಕ್ಕೆ ಮತ್ತಷ್ಟು ಆಳವಾಗುತ್ತಿರುವ, ವಿಸ್ತಾರವಾಗುತ್ತಿರುವ ಈ ಬಿಕ್ಕಟ್ಟು ಜಾಗತೀಕರಣದ ಈ ಯುಗದಲ್ಲಿ ಒಂದಕ್ಕೊಂದು ಹೆಣೆದುಕೊಂಡಿರುವ ವಿಶ್ವದ ಯಾವ ದೇಶವನ್ನೂ ಬಿಟ್ಟಿಲ್ಲ. ಕರ್ನಾಟಕದಲ್ಲೇ ನೋಡುವುದಾದರೆ ಒಂದಾದ ಮೇಲೊಂದರಂತೆ ಗಾರ್ಮೆಂಟ್ ಫ್ಯಾಕ್ಟರಿಗಳು ಬಂದ್ ಆಗುತ್ತಿದ್ದು ಬೆಂಗಳೂರೊಂದರಲ್ಲೇ ನಾಲ್ಕು ಲಕ್ಷ ಜನ ಬೀದಿಪಾಲಾಗಲಿದ್ದಾರೆ. ಐಟಿ-ಬಿಟಿ ಕಂಪನಿಗಳಿಂದ ಐವತ್ತು ಸಾವಿರ ಉದ್ಯೋಗಿಗಳು ನಿರುದ್ಯೋಗಿಗಳಾಗಿ ಹೊರನಡೆಯುತ್ತಿದ್ದಾರೆ. ಟಿವಿಗಳಿಗೆ, ಪತ್ರಿಕೆಗಳಿಗೆ ಸಿಗುತ್ತಿದ್ದ ಜಾಹಿರಾತುಗಳೇ ನಿಂತುಹೋಗಿ ಕೆಲವು ಮುಚ್ಚುವ ಭೀತಿಯಲ್ಲಿದ್ದು ಹೊಸದಾಗಿ ತಲೆಯತ್ತಬೇಕಿದ್ದ ಸಂಸ್ಥೆಗಳು ಹೇಳಹೆಸರಿಲ್ಲದಂತೆ ಹೋಗಿವೆ. ರಿಯಲ್ ಎಸ್ಟೇಟ್ ಉದ್ಯಮ ಸಂಪೂರ್ಣವಾಗಿ ನೆಲಕಚ್ಚಿ ಕುಳಿತಿದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲಬೆಲೆ ಚರಿತ್ರೆಯಲ್ಲಿ ಕೇಳರಿಯದಷ್ಟು ಕುಸಿದಿದ್ದು ಆಟೋಮೊಬೈಲ್ ಉದ್ಯಮ ಸಂಕಷ್ಟದಲ್ಲಿದೆ. ಇದನ್ನೇ ನಂಬಿದ ರಬ್ಬರ್ ಬೆಳೆಗಾರರು ಎರಡು ಹೊತ್ತಿನ ಊಟ ಹೊಂದಿಸಿಕೊಳ್ಳುವ ಚಿಂತೆಯಲ್ಲಿದ್ದಾರೆ. ಷೇರುದರಗಳು ಪಾತಾಳಕ್ಕಿಳಿಯುತ್ತಿದ್ದು ದುಡ್ಡಿರುವ ಮಧ್ಯಮ ವರ್ಗ ದಿವಾಳಿಯಂಚಿಗೆ ಬರುತ್ತಿದೆ. ಅಸ್ತಿತ್ವ ಉಳಿಸಿಕೊಳ್ಳಲು ಕೈಗಾರಿಕೆ ಮತ್ತು ಹಣಕಾಸು ಸಂಸ್ಥೆಗಳು ವಿಲೀನಗೊಳ್ಳುತ್ತಿರುವುದು, ಬೃಹತ್ ಕಂಪನಿಗಳು ಅಸ್ತಿತ್ವದಲ್ಲಿರುವ ಉದ್ಯೋಗಗಳನ್ನು ಕಡಿತಗೊಳಿಸುತ್ತಿರುವುದು ಮತ್ತು ಹೊಸ ನೇಮಕಾತಿಗಳನ್ನು ನಿಲ್ಲಿಸಿರುವುದು, ಕೈಗಾರಿಕೆಗಳು ಉತ್ಪಾದನಾ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಿರುವುದು, ಕೊಡುತ್ತಿರುವ ಸಂಬಳದ ಪ್ರಮಾಣವನ್ನು ದೊಡ್ಡ ಪ್ರಮಾಣದಲ್ಲಿ ಇಳಿಸಿರುವುದು, ಹೊಸ ಕೈಗಾರಿಕೆಗಳು ಅಸ್ತಿತ್ವಕ್ಕೆ ಬಾರದಿರುವುದು - ಬಿಕ್ಕಟ್ಟು ಸೃಷ್ಟಿಸಿದ ಅನಾಹುತಗಳು ಒಂದೇ ಎರಡೆ? ದಿನದಿಂದ ದಿನಕ್ಕೆ ಜನಜೀವನದ ಎಲ್ಲಾ ಕ್ಷೇತ್ರಗಳಿಗೆ ವ್ಯಾಪಕವಾಗಿ, ವೇಗವಾಗಿ ಹಬ್ಬುತ್ತಿರುವ ಈ ಬಿಕ್ಕಟ್ಟು ಯಾವಾಗ ಕೊನೆಗೊಳ್ಳುತ್ತದೆ, ವಿಶ್ವದಾದ್ಯಂತ ಎಷ್ಟು ಕೋಟಿ ನಿರುದ್ಯೋಗಿಗಳನ್ನು ಸೃಷ್ಟಿಸುತ್ತದೆ, ಎಷ್ಟು ಜನ ಅನ್ನ-ನೀರಿಲ್ಲದೆ ಸಾಯುತ್ತಾರೆ ಎಂಬುದನ್ನು ಅಂದಾಜಿಸಲು ಯಾವ ಅರ್ಥಶಾಸ್ತ್ರಜ್ಞರಿಂದಲೂ ಸಾಧ್ಯವಾಗುತ್ತಿಲ್ಲ.

## ನೆಲಕಚ್ಚಿದ ರಿಯಲ್ ಎಸ್ಟೇಟ್ ಮತ್ತು ಜೈಲುಪಾಲಾದ ಕುಪ್ಪಂ ಗಣೇಶ

ಗ್ರಹಚಾರ ಒಟ್ಟೊಟ್ಟಿಗೇ ವಕ್ಕರಿಸುವುದೇ ಹೌದಾದರೆ ರಿಯಲ್ ಎಸ್ಟೇಟ್ ನೆಲಕಚ್ಚಿದ್ದಕ್ಕೂ ಕುಪ್ಪಂ ಗಣೇಶನೆಂಬ ನಟೋರಿಯಸ್ ಭೂಕಟಂಕನೊಬ್ಬನ ದುರಂತಕ್ಕೂ ಸಂಬಂಧವಿದೆ.

ದಯಾನಂದ ಪೈ, ರೆಡ್ಡಿ ವೀರಣ್ಣ, ಕುಪೇಂದ್ರ ರೆಡ್ಡಿ, ಆದರ್ಶ ಬಿಲ್ಡರ್ಸ್, ಧಣಿ ಜೈಶಂಕರ್, ಪ್ರಸಾದ್ ರೆಡ್ಡಿ, ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮುಂತಾದ ಭೂಚೋರರಿಗೆ ಹೋಲಿಸಿದರೆ ಈ ಕುಪ್ಪಂ ಗಣೇಶ್ ಏನೇನೂ ಅಲ್ಲ. ಹಕೀಕತ್ತೇನೆಂದರೆ ಕಟ್ಟಾ ನಾಯ್ಡು, ದಯಾನಂದ ಪೈ ಥರದವರಿಗೆ ಭೂಮಿಯ ಮೇಲೆ ಬಂಡವಾಳ ಹೂಡಿ ವರ್ಷಾನುಗಟ್ಟಲೇ ಕಾಯುವ ತಾಕತ್ತಿದೆ. ಜೊತೆಗೆ ಪೆಟ್ರೋಲ್ ಬಂಕ್, ಗ್ಯಾಸ್ ಏಜೆನ್ಸಿ, ನರ್ಸಿಂಗ್ ಕಾಲೇಜುಗಳು ಮತ್ತು ಕಾಂಪ್ಲೆಕ್ಸ್ ಬಾಡಿಗೆಯೂ ಬರುತ್ತಿರುತ್ತದೆ. ಈಗ ನಿಜಕ್ಕೂ ತೊಂದರೆಗೀಡಾಗಿರುವುದು ಇಂಥ ತಿಮಿಂಗಿಲಗಳಲ್ಲ, ಇನ್ನೂ ಐದು ವರ್ಷ ಕಾದರೂ ದುಡ್ಡು ಭೂಮಿಯ ರೂಪದಲ್ಲಿ ಹಾಗೇ ಉಳಿದಿರುತ್ತದೆ.



ಅಸಲಿಗೆ ರಿಯಲ್ ಎಸ್ಟೇಟ್ ಕುಸಿತದಿಂದ ಅತಂತ್ರಕ್ಕೀಡಾಗಿರುವುದು ಮಂತ್ರಿ, ರಹೇಜಾ, ಪ್ರೆಸ್ಟೀಜ್‌ನಂಥ ಬಿಲ್ಡರುಗಳು ಮತ್ತು ಮಧ್ಯಮ ವರ್ಗದ ನೆಲಗಳ್ಳರು. ಕುಪ್ಪಂ ಗಣೇಶ್ ಇಂಥ ನೆಲಗಳ್ಳರ ಪೈಕಿ ಅಗ್ರಗಣ್ಯ. ರಹೇಜಾ, ಮಂತ್ರಿ ಥರದ ಬಿಲ್ಡರುಗಳು ಕಟ್ಟಿಸಿರುವ ಫ್ಲ್ಯಾಟುಗಳಿಗೆ ಹೇಗೆ ಗಿರಾಕಿಗಳಿಲ್ಲವೋ ಹಾಗೇ ಕುಪ್ಪಂ ಗಣೇಶನಂಥವರು ದೋಚಿದ ಹುಡುಪಿಡಿ ಸೈಟುಗಳಿಗೆ ಬೆಲೆಯೂ ಇಲ್ಲ, ಗಿರಾಕಿಗಳೂ ಸಿಗುತ್ತಿಲ್ಲ. 'ಮಾದೇಶ' ಚಿತ್ರದ ನಿರ್ಮಾಪಕ ಸೈಕೋ ಗೋವರ್ಧನಮೂರ್ತಿ, ಸುಂಕದಕಟ್ಟೆಯ ಭೈರೇಗೌಡ, ಡೆಪ್ಯೂಟಿ ಮೇಯರ್ ಪುಟ್ಟರಾಜು, ಮಂತ್ರಿ ಅಶೋಕ್ ತಮ್ಮ ರವಿ, ಕೆ.ಆರ್. ಪುರಂ ಶಾಸಕ ನಂದೀಶ್ ರೆಡ್ಡಿ, ಯಲಹಂಕದ ಎಮ್ಮೆಲ್ಲೇ ವಿಶ್ವನಾಥ್ ರೆಡ್ಡಿ, ಚೆಸ್ ಕ್ಲಬ್ ಅರುಣಾಚಲಂ ಮುಂತಾದವರಿಗೆ ಹೋಲಿಸಿದರೆ ಕುಪ್ಪಂ ಗಣೇಶ್ ಅವರೆಲ್ಲರಿಗಿಂತಲೂ ನಿಸ್ಸೀಮ ಮತ್ತು ಖತರ್‌ನಾಕ್.

ಮೂಲತಃ ಆಂಧ್ರದ ಕುಪ್ಪಂನ ಈತ ಒಂದಾನೊಂದು ಕಾಲಕ್ಕೆ ಟೈಲರ್. ಪಿ ಅಂಡ್ ಟಿ ಹೌಸಿಂಗ್ ಸೊಸೈಟಿಯ ವಿರುದ್ಧ ಲ್ಯಾಂಡ್ ಲಿಟಿಗೇಷನ್ನಿಗೆ ಕೈಯಿಟ್ಟು ವಿಜಯನಗರ ಫೈಪ್ ಲೈನ್ ರಸ್ತೆಯಲ್ಲಿದ್ದ ಟೆಲಿಕಾಮ್ ಲೇಔಟ್‌ನ ಭೂಮಿ ದೋಚಿದ್ದು ಈತನ ಮೊದಲ ಭೂಬಳಿಕೆ. ಆನಂತರ ಕೆಂಗೇರಿ, ನಾಗದೇವನಹಳ್ಳಿ ಭಾಗದ ಬಿಡಿಎ ಆಸ್ತಿಗೆ ವಕ್ಕರಿಸಿದ. ನಾಗದೇವನಹಳ್ಳಿಯ ಬಡ ಬೋವಿಗಳನ್ನು ಹೆದರಿಸಲೆಂದೇ ರೌಡಿಗಳಾದ ಮುಲಾಮ, ದಡಿಯಾ ಹರೀಶ, ಕಾಂತ, ಗುಂಡಾ ಇತ್ಯಾದಿಗಳಿಗೆಲ್ಲ ಒಂದೊಂದು ಬಿಟ್ಟಿ ಸೈಟು ಕರುಣಿಸಿದ. ಇಂಥ ರೌಡಿಗಳನ್ನಿಟ್ಟುಕೊಂಡೇ ಕಂಡವರ ಭೂಮಿ ದೋಚಿದ್ದ. ರಿಯಲ್ ಎಸ್ಟೇಟ್ ನಡೆದಷ್ಟೂ ದಿನ ಕುಪ್ಪಂ ಗಣೇಶನ ಅಟ್ಟಹಾಸ ಜೋರಾಗೇ ಇತ್ತು. ಅರುಣಾಚಲಂ ಚೆಸ್‌ಕ್ಲಬ್‌ನಲ್ಲಿ ಯಾವತ್ತೂ ಎರಡು ರೂಮು ಬುಕ್ಕಾಗಿರುತ್ತಿತ್ತು. ರೌಡಿ ಗ್ಯಾಂಗಿನ ಜೊತೆಗೇ ಗುಂಡೂ ಇಸ್ಪೀಟು ಸಮಾರಾಧನೆಯಾಗುತ್ತಿತ್ತು. ಸ್ಲಂ ರಮೇಶ್ ಬದುಕಿದ್ದಷ್ಟೂ ದಿನ ಕುಪ್ಪಂ ಆತನ ಬಲಗೈ ಬಂಟನಂತಿದ್ದವನು ಕ್ರಮೇಣ ಬಿನ್ನಿಪೇಟೆಯ ಶಾಸಕ ಸೋಮಣ್ಣನ ಚಮಚಾಗಿರಿಗೆ ನಿಂತು ಮಿಂಚುತ್ತಲೇ ಇದ್ದ.

ಯಾವತ್ತು ರಿಯಲ್ ಎಸ್ಟೇಟ್ ನೆಗೆದು ಬಿತ್ತೋ ಕುಪ್ಪಂ ಗಣೇಶನ ಅದೃಷ್ಟದ ದಿನಗಳೂ ಮುಗಿದು ಹೋದವು. ದುಡ್ಡೇ ಹುಟ್ಟುತ್ತಿಲ್ಲ ಎಂದ ಮೇಲೆ ಆಟ ನಡೆಯಬೇಕಲ್ಲ. ತೀರ ಇತ್ತೀಚೆಗೆ ಬಿಡದಿ ವ್ಯಾಪ್ತಿಯಲ್ಲಿ ಯಾವುದೋ ಲಿಟಿಗೇಷನ್ನಿಗೆಂದು ದಾಳಿಯಿಟ್ಟ ಕುಪ್ಪಂ ಪೊಲೀಸ್ ಠಾಣೆಗೇ ನುಗ್ಗಿ ಪೊಲೀಸರನ್ನು ದಬಾಯಿಸಿದ್ದಾನೆ. ಕೋರ್ಟ್ ಆದೇಶದ ವಿರುದ್ಧ ಪೊಲೀಸರಾದರೂ ಹೇಗೆ ಕುಪ್ಪಂ ಗಣೇಶನನ್ನು ರಕ್ಷಿಸುತ್ತಾರೆ?

ಅದು ದುಡ್ಡಿನ ಬರದ ವಿರುದ್ಧ ಕುಪ್ಪಂನ ಹತಾಶ ಯತ್ನವಾಗಿತ್ತು. ಬಿದ್ದ ರಿಯಲ್ ಎಸ್ಟೇಟನಲ್ಲಿ ಅಳಿದುಳಿದ ಭೂಮಿಯನ್ನೂ ದೋಚಿ ಪುಡಿಗಾಸಿಗೆ ಮಾರಲು ಹೋಗಿ ಯಾರದೋ ಭೂಮಿಗೆ ಕುಪ್ಪಂ ಕೈಹಾಕಿದ್ದ. ರಾಮನಗರದ ದಿವ್ಯ ಎಸ್‌ಪಿ ದೇವರಾಜ್‌ರನ್ನೇ ವಾಚಾಮಗೋಚರ ಬಯ್ದುಬಿಟ್ಟ. ಈ ಹೊತ್ತಿಗಾಗಲೇ ಸೋಮಣ್ಣನಿಂದಲೂ ದಬ್ಬಿಸಿಕೊಂಡಿದ್ದ ಕುಪ್ಪಂ ಒಂದಲ್ಲ ಎರಡು ಬಾರಿ ಚಂದ್ರಾಲೇಔಟ್‌ನಿಂದ ಪಾಲಿಕೆ ಚುನಾವಣೆಗೆ ನಿಂತು ಸೋತಿದ್ದ. ಇನ್ನು ಬಿಡದಿ ಪೊಲೀಸರಾದರೂ ಎಷ್ಟು ಅಂತ ಸಹಿಸುತ್ತಾರೆ?

ಕುಪ್ಪಂ ಗಣೇಶನನ್ನು ಒದ್ದು ಲಾಕಪ್ಪಿಗೆ ದಬ್ಬಿ ಜೈಲಿಗೆ ಸಾಗಿಸಿದ್ದಾರೆ. ಇತ್ತ ಕುಪ್ಪಂ ಜೈಲು ಪಾಲಾಗಿದ್ದೇ ತಡ ಆತನ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಅತ್ತ ಜೈಲಲ್ಲೂ ನಾಯಿಪಾಡು. ಇದ್ದಷ್ಟು ದಿನ ತಿಂದು ತೇಗಿದ ರೌಡಿಗಳ್ಯಾರೂ ಜೈಲು ಪಾಲಾದ ಕುಪ್ಪಂ ಗಣೇಶನನ್ನು ಮೂಸಿಯೂ ನೋಡಿಲ್ಲ. ದೋಚಿದ ದುಡ್ಡೂ ಇಲ್ಲ, ಮರ್ಯಾದೆಯೂ ಉಳಿಯಲಿಲ್ಲ.

ರಿಯಲ್ ಎಸ್ಟೇಟ್ ನೆಲಕಚ್ಚಿದ್ದು ಏನೆಲ್ಲಾ ಅನಾಹುತಗಳನ್ನು ಸೃಷ್ಟಿಸುತ್ತದೆ ಎಂಬುದಕ್ಕೆ ಕುಪ್ಪಂ ಗಣೇಶನಿಗಿಂತ ಉದಾಹರಣೆಬೇಕೆ? ■

# ಬೀದಿಗೆ ಬೀಳುತ್ತಿರುವ ಐಟಿ, ಬಿಟಿ ಮಂದಿ

ಜಾಗತಿಕ ಆರ್ಥಿಕ ಹಿಂಜರಿತದಿಂದ ದೊಡ್ಡ ಹೊಡೆತ ನ್ನುತ್ತಿರುವ ಕ್ಷೇತ್ರಗಳೆಂದರೆ ಐಟಿ, ಬಿಟಿ ಮತ್ತು ಬಿಪಿಒ ುದ್ಯಮಗಳು. ಮುಂದುವರೆದ ದೇಶಗಳನ್ನೇ ಅವಲಂಬಿ ರುವ ಈ ಉದ್ಯಮಗಳೀಗ ನಷ್ಟ ಅನುಭವಿಸುತ್ತಿವೆ. ೊನ್ನೆ ಮೊನ್ನೆವರೆಗೂ ಕೋಟ್ಯಂತರ ರೂಪಾಯಿ ಾಭಗಳಿಸಿ, ಪ್ರಪಂಚದ ಆಗರ್ಭ ಶ್ರೀಮಂತರ ಪಟ್ಟಿಯಲ್ಲಿ ್ಥಾನ ಪಡೆದ ಈ ಉದ್ಯಮಗಳ ಪ್ರಮುಖರು, ಈಗ ುದ್ಯೋಗಿಗಳ ಮೇಲೆ ಕೆಂಗಣ್ಣು ೀರುತ್ತಿದ್ದಾರೆ. ಹಗಲಿರುಳು ದುಡಿದು ಾಭಮಾಡಲು ಉದ್ಯೋಗಿಗಳು ೇಕು, ಕೆಲಸವಿಲ್ಲದಾಗ ಇವರೆಲ್ಲಾ ೇಡ ಎಂಬ ನೀತಿ ಈ ಐಟಿ, ಬಿಟಿ ುಹಾಶಯರದ್ದು.



ಈಗಾಗಲೇ ಸಣ್ಣ-ಪುಟ್ಟ ಐಟಿ ುತ್ತು ಬಿಪಿಒ ಕಂಪನಿಗಳು ಮುಚ್ಚುವ ಂತಕ್ಕೆ ಬಂದಿವೆ. ಉದ್ಯೋಗಿಗಳನ್ನು ುಲಾಜಿಲ್ಲದೆ ಮನೆಗೆ ಕಳುಹಿಸಲಾಗುತ್ತಿದೆ. ಶೇ. 40 ಷ್ಟು ಪ್ರಾಜೆಕ್ಟ್‌ಗಳು ಕಡಿಮೆಯಾಗಿವೆ. ಹೀಗಾಗಿ ನೌಕರರಿಗೆ ಂಕ್ ಸ್ಲಿಪ್' ನೀಡುವುದು ಅರ್ಥಾತ್ ಸಿಬ್ಬಂದಿ ಕಡಿತ ಾಡುವುದು ಅನಿವಾರ್ಯ ಎಂದು ಐಟಿ ಉದ್ಯಮಿಗಳು ೇಳುತ್ತಿದ್ದಾರೆ.

ಮುಂದಿನ ಆರು ತಿಂಗಳಿನಲ್ಲಿ ದೇಶದ ಐಟಿ ಕ್ಷೇತ್ರದ 0 ಸಾವಿರ ಮಂದಿ ನೌಕರಿ ಕಳೆದುಕೊಳ್ಳಲಿದ್ದಾರೆ ಎಂದು ಾಹಿತಿ ತಂತ್ರಜ್ಞಾನ ಆಧರಿತ ಸೇವೆಗಳ ಕಂಪನಿಗಳ ುದ್ಯೋಗಿಗಳ ಸಂಘಟನೆ (ಯುನೈಟ್ಸ್) ಹೇಳಿದೆ. ಅಮೆರಿಕ ುತ್ತು ಬ್ರಿಟನ್‌ನ ಐಟಿ ಆಧರಿತ ಕಂಪನಿ ಸಿಬ್ಬಂದಿ ಂಘಟನೆಗಳು ನೀಡಿದ ಭವಿಷ್ಯ ನೋಟದ ಹಿನ್ನೆಲೆಯಲ್ಲಿ ಅಂದಾಜು ಮಾಡಲಾಗಿದೆ ಎಂದಿದ್ದಾರೆ ಈ ಸಂಘಟ ಯ ಪ್ರಧಾನಕಾರ್ಯದರ್ಶಿ ಕಾರ್ತಿಕ್ ಶೇಖರ್.

"ನಮ್ಮ ಕೈಯಲ್ಲಿರುವ ಪ್ರಾಜೆಕ್ಟ್‌ಗಳು ಮುಗಿದ ಮೇಲೆ ುಮ್ಮನ್ನೇನು ಮಾಡುತ್ತಾರೋ ಗೊತ್ತಿಲ್ಲ, ಹೊಸ ಪ್ರಾಜೆಕ್ಟ್‌ಗಳು ರುತ್ತಿಲ್ಲ" ಎಂದು ಆತಂಕ ವ್ಯಕ್ತಪಡಿಸುತ್ತಾರೆ ಇನ್ನೂ ುದ್ಯೋಗದಲ್ಲಿರುವ ಟೆಕ್ಕಿಗಳು. ಬಹುತೇಕ ಐಟಿ ಪನಿಗಳಲ್ಲಿ ವೇತನ ಕಡಿತ ಮಾಡಲಾಗಿದೆ. ಅವರಿಗೆ ಡಲಾಗುತ್ತಿದ್ದ ಸವಲತ್ತುಗಳಿಗೆ ಬ್ರೇಕ್ ಬಿದ್ದಿದೆ. ಈ ಂದೆ ಕೆಲಸ ಮಾಡುವಾಗ ಕುಡಿಯಲೆಂದು ಒಂದು ೀಟರ್ ಬಿಸ್ಲೇರಿ ನೀರು ನೀಡುತ್ತಿದ್ದ ಕಂಪನಿಗಳು, ಈಗ ರ್ಧ ಲೀಟರ್ ನೀರಿನ ಚಿಕ್ಕ ಬಾಟಲಿ ನೀಡುತ್ತಿವೆ. ೇರೆ ಸವಲತ್ತು ಬೇಡ, ಬೇಕಾದಷ್ಟು ಟಿಷ್ಯೂ ಪೇಪರ್ ಡ ಬಳಸಲು ಬಿಡುತ್ತಿಲ್ಲವಂತೆ!

ಇನ್ನು ಕೆಲ ಕಂಪನಿಗಳು ಬೇಕಾಬಿಟ್ಟಿಯಾಗಿ ಉದ್ಯೋಗಿಗಳಿಗೆ ರಜೆ ನೀಡುತ್ತಿವೆ. ವಾರದ ಕೆಲಸದ ದಿನಗಳನ್ನು ನಾಲ್ಕುದಿನಗಳಿಗೆ ಇಳಿಸಿವೆ. ಈ ಬೆಳವಣಿಗೆಯಿಂದ ಆತಂಕಕ್ಕೊಳಗಾಗಿರುವ ಟೆಕ್ಕಿಗಳು, ಏನಾದರೂ ಮಾಡಿ ಉದ್ಯೋಗದಿಂದ ಮಾತ್ರ ತೆಗೆಯಬೇಡಿ ಎಂದು ಬೇಡಿಕೊಳ್ಳುವ ಸ್ಥಿತಿಗೆ ಬಂದಿದ್ದಾರೆ.

ಯುನೈಟ್ಸ್ ಪ್ರಕಾರ, ದೇಶದ ಐಟಿ ಮತ್ತು ಬಿಪಿಒ ಉದ್ಯಮದಲ್ಲಿ ಕಳೆದ ಸೆಪ್ಟೆಂಬರ್‌ನಿಂದ ಈವರೆಗೆ 10 ಸಾವಿರ ಉದ್ಯೋಗ ನಷ್ಟವಾಗಿದೆ. ಮಧ್ಯಮ ಮತ್ತು ದೊಡ್ಡ ಉದ್ದಿಮೆಗಳು ನೌಕರರ ಹೊರೆಯನ್ನು ಸಹಿಸಿಕೊಂಡಿವೆ. ಆದರೆ ಇದೇ ಪರಿಸ್ಥಿತಿಯಲ್ಲಿ ಮುಂದುವರೆಯುವುದು ಕಷ್ಟವಾಗಿದ್ದ ರಿಂದ ನಿರೀಕ್ಷಿಸಲಾರದಷ್ಟು ಮಂದಿ ಉದ್ಯೋಗ ಕಳೆದುಕೊಳ್ಳಲಿದ್ದಾರೆ.

ಎಸಿ ಕಚೇರಿಗಳಲ್ಲಿ ಕಂಪ್ಯೂಟರ್ ಪ್ರೋಗ್ರಾಮ್‌ಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಬರೆಯುತ್ತಾ ಜೇಬು ತುಂಬಾ ದುಡ್ಡು ತುಂಬಿಕೊಂಡು ಮನೆಗೆ ಹೋಗುತ್ತಿದ್ದ ಟೆಕ್ಕಿಗಳಿಗೆ ಇದನ್ನು ಬಿಟ್ಟರೆ ಬೇರೆ ಉದ್ಯೋಗ ಗೊತ್ತಿಲ್ಲ. ಹೊರಗಿನ ಪ್ರಪಂಚದ ಸಂಬಂಧವೇ ಇಲ್ಲ ದವರಂತೆ ಬದುಕಿದ ಅವರ ಕತೆ ಯೀಗ ನೀರಿನಿಂದ ಹೊರಹಾಕಿದ ಮೀನಿನಂತಾಗಿದೆ.



ಇನ್ನು ಬಿಪಿಒಗಳ ಕತೆ ಐಟಿ ಉದ್ಯಮಕ್ಕಿಂತ ಘೋರವಾದದು. ದೊಡ್ಡಣ್ಣನನ್ನೇ ನಂಬಿ ಬದುಕುತ್ತಿರುವ ಈ ಕ್ಷೇತ್ರದ ಸಣ್ಣಪುಟ್ಟ ಉದ್ದಿಮೆಗಳು ಮುಚ್ಚಿಹೋಗಿವೆ. ಈಗಾಗಲೇ ನೂರಾರು ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ. ಈ ಆರ್ಥಿಕ ವರ್ಷ ಪೂರ್ಣಗೊಳ್ಳುವ ಹೊತ್ತಿಗೆ – ಅಂದರೆ ಮುಂದಿನ ಮೂರು ತಿಂಗಳಿನಲ್ಲಿ – ದೇಶದಲ್ಲಿ 2.50 ಲಕ್ಷ ಮಂದಿ ಉದ್ಯೋಗ ಕಳೆದು ಕೊಳ್ಳಲಿದ್ದಾರೆ ಎನ್ನುತ್ತಾರೆ ಬಿಪಿಐಎಐನ ಅಧ್ಯಕ್ಷ ಸಮೀರ್ ಛೋಪ್ರ. ಐಟಿ ಮತ್ತು ಬಿಪಿಒಗಳಿಗೆ ಸಂಬಂಧಿಸಿದ ಸಂಸ್ಥೆ 'ನ್ಯಾಸ್ಕಾಮ್' ಕೂಡ ಭಾರಿ ಪ್ರಮಾಣದಲ್ಲಿ ಉದ್ಯೋಗ ಕಡಿತವಾಗಲಿದೆ ಎಂಬುದನ್ನು ಒಪ್ಪಿಕೊಂಡಿದೆ. ಅಮೆರಿಕದಲ್ಲಿನ ಆರ್ಥಿಕ ಹಿಂಜರಿತ ಮತ್ತು ಮುಂದಿನ ಅಧ್ಯಕ್ಷ ಬರಾಕ್ ಒಬಾಮರ ಉದ್ಯೋಗ ನೀತಿ ಭಾರತದ ಬಿಪಿಒ ಕ್ಷೇತ್ರಗಳ ಭವಿಷ್ಯಕ್ಕೆ ಮಾರಕವಾಗಲಿದೆ ಎಂದು ಉದ್ಯಮ ತಜ್ಞರು ವಿಶ್ಲೇಷಿಸುತ್ತಿದ್ದಾರೆ. ಹೀಗಾಗಿ ತಮಗೆ 'ಪ್ಯಾಕೇಜ್' ನೀಡಬೇಕೆಂದು ಉದ್ಯಮದ ಮಂದಿ ಸರ್ಕಾರವನ್ನು ಕೋರುತ್ತಿದ್ದಾರೆ.

ಬೆಂಗಳೂರಿನ ಕಾಲ್‌ಸೆಂಟರ್‌ಗಳಲ್ಲಿ ದುಡಿಯುತ್ತಿದ್ದ ಯುವಜನತೆ ಬೀದಿಗೆ ಬೀಳುತ್ತಿದೆ. ಕಾಲ್‌ಸೆಂಟರ್‌ಗಳಿಗೆ ಮಾತಿನ ಮೂಲಕವೇ ಮೋಡಿ ಮಾಡುವ ಕಲೆಯೊಂದು ಗೊತ್ತಿದ್ದರೆ ಸಾಕಿತ್ತು. ಹೀಗಾಗಿ ಹೆಚ್ಚು ಓದುವ ಗೋಜಿಗೆ ಹೋಗದ ಯುವಕ ಯುವತಿಯರು, ಇಂಗ್ಲಿಷ್ ಭಾಷೆಯನ್ನು ಕಲಿತು ಕಾಲ್‌ಸೆಂಟರ್‌ಗಳಲ್ಲಿ ಉದ್ಯೋಗ ಗಿಟ್ಟಿಸಿಕೊಂಡಿದ್ದರು. ಇದೀಗ ಒಬ್ಬೊಬ್ಬರಾಗಿ ಅವರನ್ನು ಕೆಲಸದಿಂದ ತೆಗೆದು ಹಾಕಲಾಗುತ್ತಿದೆ. ಕಾಲ್‌ಸೆಂಟರ್‌ಗಳಲ್ಲಿ ಉದ್ಯೋಗವಿಲ್ಲ, ಬೇರೆ ಕೆಲಸ ಮಾಡಲು ಪದವಿ ಇಲ್ಲ, ಹೀಗಾಗಿ ಇವರೆಲ್ಲಾ ಅಂತರಾಗಿದ್ದಾರೆ.

ಇನ್ನು ಉದ್ಯೋಗದಲ್ಲಿರುವ ಕಾಲ್‌ಸೆಂಟರ್ ಉದ್ಯೋಗಿಗಳೇನೂ ಈ ಹಿಂದಿನಂತೆ ನೆಮ್ಮದಿಯಾಗಿಲ್ಲ, ಹಿಂದೆ ಹತ್ತಾರು ಮಂದಿ ಮಾಡುತ್ತಿದ್ದ ಕೆಲಸವನ್ನು ಈಗ ನಾಲ್ಕೈದು ಜನ ಮಾಡಬೇಕಾಗಿದೆ. ಕೆಲಸದ ಹೊರೆ ಜಾಸ್ತಿ ಇದ್ದರೂ, ನೀಡಲಾಗುತ್ತಿದ್ದ ಒಂದೊಂದೇ ಸವಲತ್ತನ್ನು ಹಿಂದಕ್ಕೆ ಪಡೆಯಲಾಗುತ್ತಿದೆ. ರಾತ್ರಿಪಾಳಯದಲ್ಲಿ ಕೆಲಸ ಮಾಡಿದರೂ ಮನೆಗೆ ಹೋಗಲು ಗಂಟೆಗಟ್ಟಲೆ ಕಾಯಬೇಕು. ಏಕೆಂದರೆ ಕ್ಯಾಬ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗುತ್ತಿದೆ. 'ನಾವೆಂದೂ ಈ ರೀತಿಯಾಗುತ್ತದೆ ಎಂದು ಎಣಿಸಿರಲಿಲ್ಲ' ಎನ್ನುತ್ತಾರೆ ಎಚ್‌ಪಿ ಕಾಲ್‌ಸೆಂಟರ್‌ನ ಮಹೇಶ್ ಎನ್.

ಬಿಪಿಒಗಳಲ್ಲಿ ಉದ್ಯೋಗಾವಕಾಶ ಇಲ್ಲವೇ ಇಲ್ಲ. ಉದ್ಯೋಗದಲ್ಲಿದ್ದವರೂ ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಹೀಗಾಗಿ ಹೆಚ್ಚು ಓದದ ನಿರುದ್ಯೋಗಿಗಳು ಹೆಸರು ನೊಂದಾಯಿಸಿಕೊಳ್ಳುತ್ತಿರುವುದು ಹೆಚ್ಚುತ್ತಿದೆ. ಅವರೀಗ ಸೆಕ್ಯುರಿಟಿ ಗಾರ್ಡ್ ಉದ್ಯೋಗವಾದರೂ ಅಡ್ಡಿ ಇಲ್ಲ, ಕೆಲಸ ಕಾಲಿ ಇದ್ದರೆ ಹೇಳಿ ಎನ್ನುತ್ತಿದ್ದಾರೆ ಎಂದು ಮಾಹಿತಿ ನೀಡುತ್ತಾರೆ ಜಾಬ್ ಕನ್ಸಲ್ಟೆಂಟ್ ಕಂಪನಿಯ ವಿಜಯ್‌ಕುಮಾರ್.

ಕೇಂದ್ರ ವಾಣಿಜ್ಯ ಇಲಾಖೆ ಇತ್ತೀಚೆಗೆ ರಫ್ತು ಚಟುವಟಿಕೆಯನ್ನೇ ಅವಲಂಬಿಸಿರುವ 121 ಸಂಸ್ಥೆಗಳಲ್ಲಿ ಸಮೀಕ್ಷೆ ನಡೆಸಿದೆ. ಈ ಸಮೀಕ್ಷೆ ಪ್ರಕಾರ ಇನ್ನು ಮುಂದೆ 65,500 ಮಂದಿ ಉದ್ಯೋಗ ಕಳೆದುಕೊಳ್ಳಲಿದ್ದಾರಂತೆ.

ಈ ಬೆಳವಣಿಗೆ ಐಟಿ, ಬಿಟಿ ಮತ್ತು ಬಿಪಿಒ ರಾಜಧಾನಿ ಎನಿಸಿದ ಬೆಂಗಳೂರಿನ ಮೇಲೆ ಭಾರಿ ಪರಿಣಾಮ ಬೀರಲಾರಂಭಿಸಿದೆ. ಇದನ್ನು ಅರ್ಥಮಾಡಿಕೊಂಡು, ಎಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕಾಗಿದ್ದ ಸರ್ಕಾರ ಸತ್ತು ಮಲಗಿದೆ. ■

# ಗಾರ್ಮೆಂಟ್ಸ್ -ಮುಂದಿದೆ ಅಪಾಯ

ರಾಧಾ ಎಂಬ ಆಂಧ್ರ ಮೂಲದ 40 ವರ್ಷದ ವೆ ಇತ್ತೀಚಿನ ತನಕ ತುಮಕೂರು ರಸ್ತೆಯ ಗಾರ್ಮೆಂಟ್ಸ್ ್ಯಕ್ಟರಿಯಲ್ಲಿ ಕಟ್ಟರ್ ಆಗಿ ಕೆಲಸ ಮಾಡುತ್ತಿದ್ದಳು. ಆಕೆಗೆ ುತ್ತಿದ್ದ ತಿಂಗಳ ಸಂಬಳ ಮೂರುಸಾವಿರ ರೂಪಾಯಿ. ದರಲ್ಲೇ ಆಕೆ ತನ್ನ ಮಗಳನ್ನು ಸಾಕುತ್ತಾ ಜೀವನ ಿಸುತ್ತಿದ್ದಳು.

ಆದರೆ ಈಗ ಆಕೆ ಕೆಲಸ ಮಾಡುತ್ತಿದ್ದ ಫ್ಯಾಕ್ಟರಿ ಂದ್ ಆಗಿದ್ದು ರಾಧಾಳ ಬದುಕು ಅತಂತ್ರವಾಗಿದೆ. ು ಆಕೆಯೊಬ್ಬಳ ಕತೆಯಲ್ಲ

ಬೆಂಗಳೂರಿನ ಗಾರ್ಮೆಂಟ್ಸ್ ಉದ್ಯಮದ ಇಲ್ಲಿ ದಾಜು ಒಂಬೈನೂರು ಘಟಕಗಳಲ್ಲಿ ಕೆಲಸ ಡುತ್ತಿರುವ ನಾಲ್ಕು ಲಕ್ಷದಷ್ಟು ಜನರ ಕತೆಯೂ ದೆ.

ಈ ಉದ್ಯಮಕ್ಕೆ ಅಮೆರಿಕ ಹಾಗೂ ಯುರೋಪ್ ಶಗಳೇ ದೊಡ್ಡ ಮಾರ್ಕೆಟ್. ಆ ದೇಶಗಳಲ್ಲಿ ಈಗ ದುಡ್ಡು ಖರ್ಚು ಮಾಡಲು ಹೆದರುತ್ತಿದ್ದಾರೆ. ಜೊತೆಗೆ ಲರ್ ಎದುರು ರೂಪಾಯಿ ಬೆಲೆ ಏರಿಳಿತವೂ ಹೊಡೆತ ಡುತ್ತಿವೆ.

ಅಮೆರಿಕದ್ದೇ ಒಂದ ಉದಾಹರಣೆ ನೋಡಿ. ಗಳೂರು ಸೇರಿದಂತೆ ಇಂಡಿಯಾದಿಂದ ರೆಡಿಮೇಡ್ ಟ್ಟೆ ತರಿಸಿಕೊಂಡು ಅಮೆರಿಕದಲ್ಲಿ ಮಾರುತ್ತಿದ್ದ ಸ್ಟೀವ್ ಡ್ ಬ್ಯಾರಿ, ಮೆರಿನ್‌ನಂತಹ ಅನೇಕ ವ್ಯಾಪಾರಿಗಳು ದಿವಾಳಿ ಘೋಷಿಸಿಕೊಂಡಿದ್ದಾರೆ. ಫೆಸಿಫಿಕ್ ಸನ್‌ವೇರ್ 150 ಶೋರೂಂ ಬಾಗಿಲು ಮುಚ್ಚಿದೆ. ಲೇನ್ ರೂಂಟ್ ಫ್ಯಾಶನ್ ಬಗ, ಕ್ಯಾಥರೀನ್‌ಗಳು ತಲಾ 0 ಅಂಗಡಿಗಳನ್ನು ಬಂದ್ ಮಾಡಿವೆ. ಫುಟ್ ಲಾಕರ್ 0, ಎಡ್ಡಿ ಬೈನರ್, ಕಚಿ, ಲಾಲ್‌ಬಾತ್, ಗುಡ್‌ಬೈ ಜ್‌ನಂತಹ ಗಾರ್ಮೆಂಟ್ಸ್ ಜೈನ್ ಸ್ಟೋರ್ಸ್ ನಡೆಸುತ್ತಿದ್ದ ನ್‌ಗಟ್ಟಲೆ ವ್ಯಾಪಾರಿ ಕಂಪನಿಗಳು ಈಗ ಹೇಳಹೆಸರಿಲ್ಲದೆ ಶ ಹೊಂದಿವೆ.

ಇವರಿಗೆಲ್ಲ ಗಾರ್ಮೆಂಟ್ಸ್ ಸರಬರಾಜಾಗುತ್ತಿದ್ದುದು ಇಂಡಿಯಾದಿಂದ, ಅದರಲ್ಲೂ ಬೆಂಗಳೂರಿನಿಂದ ಹೆಚ್ಚು ಇತ್ತು, ಇದರಿಂದ ಬೆಂಗಳೂರಿನಲ್ಲಿ ಕೆಲವು ಘಟಕಗಳು ಬಂದ್ ಆಗಿವೆ. ಎಸ್.ಬಿ. ಅಪರೇಟ್ಸ್ (2200 ನೌಕರರು), ಮೈಸೂರು ರಸ್ತೆಯ ಪಿ.ಆರ್. ಫ್ಯಾಶನ್ (300 ಜನ), ನಾಕೋಡ (300 ಜನ), ತುಮಕೂರು ರಸ್ತೆಯ ಭಾನು ಗಾರ್ಟೆಕ್ಸ್ (350 ಜನ) ಈಗಾಗಲೇ ವ್ಯವಹಾರ ನಿಲ್ಲಿಸಿದ್ದಾರೆ. ಗಾರ್ಮೆಂಟ್ಸ್ ನೌಕರರ ಯೂನಿಯನ್‌ನ (GATWN) ಉಪಾಧ್ಯಕ್ಷರಾದ ಜಯರಾಂ ಅನಿಸಿಕೆಯಂತೆ.




ಈ ಹಂತದಲ್ಲಿ ತೊಂದರೆಗೊಳಗಾಗುವವರೆಂದರೆ ಒಂದೋ ಎರಡೋ ಯೂನಿಟ್ ಹೊಂದಿರುವ ಬ್ಯುಸಿನೆಸ್ ಮಂದಿ ಮಾತ್ರ. ಗೋಕುಲದಾಸ್, ಬಾಂಬೆ ರೆಯಾನ್‌ನಂತಹ ಇಪ್ಪತ್ತು-ನಲ್ವತ್ತು ಉತ್ಪಾದನಾ ಘಟಕ ಇರುವವರಿಗೇನೂ ಕಷ್ಟವಿಲ್ಲ, ಅಂತಹವರಿಗೆ ಈಗಲೂ ಎಕ್ಸ್‌ಪೋರ್ಟ್ ಆರ್ಡರ್‌ಗಳು ಸಿಗುತ್ತಿವೆ. ಚಿಕ್ಕ ಯೂನಿಟ್‌ಗಳು ಬಿಕ್ಕಟ್ಟಿನ ಸನ್ನಿವೇಶದಲ್ಲಿ ಉಳಿಯಲಾರವು.

ಹಾಗೆ ನೋಡಿದರೆ ಈಗಿನ ಆರ್ಥಿಕ ಕುಸಿತ ಶುರುವಾಗುವ ಮೊದಲೇ ಅಂದರೆ ಕಳೆದ ಏಪ್ರಿಲ್‌ನಲ್ಲೇ ಬೆಂಗಳೂರಿನ ಗಾರ್ಮೆಂಟ್ಸ್ ಉದ್ಯಮ ತೊಂದರೆಗೆ ಸಿಲುಕಿಕೊಂಡಿತ್ತು. ಡಾಲರ್ ಎದುರು ರೂಪಾಯಿ ಮೌಲ್ಯ ಜಾಸ್ತಿಯಾಗಿ 36 ರೂ.ಗೆ ಒಂದು ಡಾಲರ್ ಎಂಬ ಹಂತಕ್ಕೆ ಬಂದಿದ್ದಾಗಲೇ 20% ರಷ್ಟು ಬೇಡಿಕೆ ಕುಸಿದಿತ್ತು. ಅಮೆರಿಕನ್ ಕಂಪನಿಗಳು ಚೀನಾ, ವಿಯೆಟ್ನಾಂ, ಬಾಂಗ್ಲಾ ಇಂಡೋನೇಷಿಯಾಗಳ ಅಗ್ಗದ ಕೂಲಿ ರೇಟಿನ ದೇಶಗಳಿಗೆ ಬೇಡಿಕೆ ಆದೇಶ ಕೊಡಲು ಶುರುಮಾಡಿವೆ.

ಅಮೆರಿಕ-ಯುರೋಪ್‌ನಲ್ಲೀಗ ದುಬಾರಿ ಬೆಲೆಯ ಬಟ್ಟೆ ಮಾರಾಟ ಕುಸಿಯುತ್ತಿದೆ. ಜನ ಕಡಿಮೆ ಬೆಲೆಯ ಬಟ್ಟೆ ಕೇಳುತ್ತಿದ್ದಾರೆ. ಇದರಿಂದಾಗಿ Wal Mart ನಂತಹ ಸರಣಿ ಅಂಗಡಿ ಮಳಿಗೆ ನಡೆಸುವ ಕಂಪನಿಗಳು ಇಂಡಿಯಾದ ಬಟ್ಟೆಗಳಿಗೆ ತಾನೇ ರೇಟು ನಿಗದಿ ಮಾಡಿ ಇಷ್ಟಕ್ಕಾದರೆ ಸಪ್ಲೈ ಕೊಡುತ್ತೀರಾ ಎಂದು ಕೇಳುತ್ತಿದ್ದಾರಂತೆ. ಆವಾಗ ಇಲ್ಲಿನವರ ಲಾಭಾಂಶ ತೀರಾ ಕಡಿಮೆಯಾಗಿ ಫ್ಯಾಕ್ಟರಿ ನಡೆಸುವುದೇ ಕಷ್ಟವಾಗುತ್ತದೆ. ಈಗಾಗಲೇ ಬೆಂಗಳೂರಿನ ಗಾರ್ಮೆಂಟ್ಸ್ ಮಾಲೀಕರಿಗೆ 20% ರಷ್ಟು ಬೇಡಿಕೆ ಕಡಿಮೆಯಾಗಿದೆ. ಕೆಲ ಯೂನಿಟ್‌ಗಳಲ್ಲಿ ಲೇ ಆಫ್ ಅನ್ನು ಬ್ಯಾಚುವಾರು ಜಾರಿಗೆ ತರುತ್ತಿದ್ದಾರೆ. ಇದರಿಂದ ನೌಕರರ ಸಂಬಳ ಕಟ್ ಆಗದಿದ್ದರೂ ಮುಂದೇನು ಗತಿಯೆಂಬ ಆತಂಕ ಕವಿದುಕೊಳ್ಳುತ್ತಿದೆ. ಬೆಂಗಳೂರಿನ ಗಾರ್ಮೆಂಟ್ಸ್ ಉದ್ಯಮದಲ್ಲಿರುವ ನಾಲ್ಕು ಲಕ್ಷ ನೌಕರರ ಪೈಕಿ 70% ರಷ್ಟು ಜನ ಪರ ಊರುಗಳಿಂದ ಬಂದಿರುವವರಿದ್ದಾರೆ. ಅವರು ಇಲ್ಲಿ ದುಡಿದು ಹಳ್ಳಿಗಳಲ್ಲಿ ಉಳಿದಿರುವ ಅಪ್ಪ-ಅಮ್ಮಂದಿರಿಗೆ ಕಳುಹಿಸುತ್ತಿದ್ದ ಪುಡಿಗಾಸಿನಲ್ಲೇ ಅಲ್ಲಿ ಅವರ ಜೀವನ ನಡೆಯುತ್ತಿತ್ತು. ಹೀಗೆ ಗಾರ್ಮೆಂಟ್ಸ್ ಮೇಲೆ ಅವಲಂಬಿತವಾಗಿರುವ ಸಾವಿರಾರು ಗ್ರಾಮಗಳ ಲಕ್ಷಾಂತರ ಕುಟುಂಬಗಳು ಕರ್ನಾಟಕದಲ್ಲಿವೆ.

ಈಗಿನ ಆರ್ಥಿಕ ಕುಸಿತ ಹೀಗೆ ವಿಸ್ತರಿಸುತ್ತಾ ದೀರ್ಘಕಾಲ ಕಾಡಿದರೆ ಗಾರ್ಮೆಂಟ್ಸ್ ಉದ್ಯಮಕ್ಕೂ ಕಷ್ಟ. ಈಗಾಗಲೇ ಕೆಲವರು ಬೆಂಗಳೂರಿನಲ್ಲಿ ಬಾಡಿಗೆ ಜಾಸ್ತಿ ಎಂದು ರಾಮನಗರ, ತುಮಕೂರು, ಹಾಸನ, ಕೋಲಾರಗಳಿಗೆ ತಮ್ಮ ಘಟಕ ಶಿಫ್ಟ್ ಮಾಡುತ್ತಿದ್ದಾರೆ. ಈಗ ವಿದೇಶಿ ಬೇಡಿಕೆ ಕಡಿಮೆಯಾದರಂತೂ ಕೆಲಸಗಾರರಿಗೆ ಜೀವನ ಇನ್ನೂ ಕಠಿಣವಾಗಲಿದೆ. ■





# ಕುಸಿದು ಬಿತ್ತು ಟ್ರಾವೆಲ್ಸ್ ದಂಧೆ

ಸಿಲಿಕಾನ್ ಸಿಟಿ ಎಂಬ ಹೆಸರೇ ಐಟಿ-ಬಿಟಿಗೂ ಮತ್ತು ಬೆಂಗಳೂರಿನ ಟ್ರಾವೆಲ್ಸ್ ದಂಧೆಗೂ ಇರುವ ನಂಟನ್ನು ಸೂಚಿಸುತ್ತದೆ ತಾನೆ?

ಐಟಿ-ಬಿಟಿಗಳು ಬೆಂಗಳೂರಿನಲ್ಲಿ ಬೇರೂರುತ್ತಿದ್ದಂತೆಯೇ ಬೆಂಗಳೂರಿನ ಗಲ್ಲಿಗಲ್ಲಿಗಳಲ್ಲಿ ತಲೆ ಎತ್ತಿದ್ದು ಟ್ರಾವೆಲ್ಸ್ ದಂಧೆ. ಒಂದಾನೊಂದು ಕಾಲಕ್ಕೆ ಬಸ್ಸುಗಳನ್ನಷ್ಟೇ ಬಿಡುತ್ತಿದ್ದ ಎಸ್‌ಆರ್‌ಎಸ್‌ನಂಥ ರಕ್ಕಸ ಟ್ರಾವೆಲ್ಸ್ ಏಜೆನ್ಸಿಗಳೂ ಐಟಿ ಕಂಪೆನಿಗಳ ಸೇವೆಗೆ ನಿಂತವು. ಓರ್ವ ಸಾಫ್ಟ್‌ವೇರ್ ಇಂಜಿನಿಯರ್‌ನನ್ನೋ ಕಾಲ್‌ಸೆಂಟರ್ ಉದ್ಯೋಗಿಯನ್ನೋ ಪಿಕಪ್ ಮಾಡಿ ಡ್ರಾಪ್ ಮಾಡಲು ಕಂಪೆನಿಯೊಂದು ನಿನ್ನೆಮೊನ್ನೆಯ ತನಕ ಎಂಟು ನೂರು ರೂಪಾಯಿಗಳ ತನಕ ಕೊಡುತ್ತಿತ್ತು.

ಮಹೇಂದ್ರ ಅಂಡ್ ಮಹೇಂದ್ರ ಫೈನಾನ್ಸ್ ಕಂಪೆನಿಯೂ ಟ್ರಾವೆಲ್ಸ್ ದಂಧೆಗೆ ಕೈಹಾಕಿದ್ದು ಇದೇ ಕಾರಣಕ್ಕೆ. ಐಟಿಸಿಯಂಥ ಸಂಸ್ಥೆ ಕೂಡ ಲಾಭದ ಆಕರ್ಷಣೆಗೀಡಾಗಿ ಐಟಿ ಕಂಪೆನಿಗಳ ಸೇವೆಗೆ ನಿಂತಿತು. ಅಡಿಗಾಸ್, ಅಂಬಾಸಿಡರ್, ಇನ್‌ಫ್ಯಾಂಟ್; ಹೀಗೆ ಐಟಿ ಕಂಪೆನಿಗಳು ಮತ್ತು ಕಾಲ್‌ಸೆಂಟರ್ ಉದ್ಯೋಗಿಗಳನ್ನು ಪಿಕಪ್-ಡ್ರಾಪ್ ಮಾಡುವುದಕ್ಕೆಂದೇ ತಲೆ ಎತ್ತಿದ ಟ್ರಾವೆಲ್ಸ್ ಏಜೆನ್ಸಿಗಳೆಲ್ಲ ಈಗ ಬಾಯಿ ಬಡಿದುಕೊಳ್ಳುತ್ತಿವೆ.

ಐಟಿ-ಬಿಟಿ ಕಂಪೆನಿಗಳೆಲ್ಲ ತಮ್ಮ ಶೇ. 40 ರಷ್ಟು ಉದ್ಯೋಗಿಗಳನ್ನು ಕಿತ್ತು ಹಾಕಿದ್ದು ಒಂದೆಡೆಯಾದರೆ ಮತ್ತೊಂದೆಡೆ ಅಳಿದುಳಿದ ಸಿಬ್ಬಂದಿಗಳ ಸಂಬಳವನ್ನೇ ಕಡಿತಗೊಳಿಸಿದ್ದು ಟ್ರಾವೆಲ್ಸ್ ದಂಧೆಯ ಅಧಃಪತನಕ್ಕೆ ಕಾರಣವಾಗಿದೆ.

ಈ ಪೈಕಿ ಎಸ್‌ಎಸ್ ಟ್ರಾವೆಲ್ಸ್‌ನ ಮಾಲೀಕ ರಾಜಶೇಖರ್ ಕಳೆದ ಒಂದೇ ವಾರದಲ್ಲಿ ಐನೂರು ಮಂದಿ ಕಾರುಗಳ ಮಾಲೀಕರ ಹೊಟ್ಟೆಗೆ ಕಲ್ಲು ಹಾಕಿದ್ದಾನೆ. ಮೊದಲೇ ಕಾಂಟ್ರಾಕ್ಟ್ ಮೇರೆಗೆ ಕಾರುಗಳನ್ನು ಪಡೆಯುತ್ತಿದ್ದ ರಾಜಶೇಖರ್ ವ್ಯಾಪಾರ ಚೆನ್ನಾಗಿದ್ದಾಗಲೂ ತನಗೆ ಗಾಡಿ ಬಿಟ್ಟವರನ್ನು ವಂಚಿಸುತ್ತಿದ್ದ. ಈಗ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿದೆ. ತನ್ನ ಟ್ರಾವೆಲ್ಸಿಗೆ ಬಿಟ್ಟಿದ್ದ ಇಂಡಿಕಾ, ಸುಮೋ, ಕ್ವಾಲಿಸ್ ಗಾಡಿಗಳ ಪೈಕಿ ಅರ್ಧಕ್ಕರ್ಧದಷ್ಟು ಕಾರ್ ಮಾಲೀಕರಿಗೆ ಈಗಾಗಲೇ ಲಕ್ಷಾಂತರ ರೂಪಾಯಿಯ ಬಾಕಿ ಕೊಡಬೇಕಿದೆ. ಪ್ರತಿಯೊಬ್ಬರೂ ಬ್ಯಾಂಕ್ ಸಾಲದಲ್ಲೇ ಗಾಡಿ ಹಾಕಿದ್ದಾರೆ.

ಬರುವ ಬಾಕಿಯಿನ್ನೂ ಕೊಟ್ಟೇ ಇಲ್ಲ, ಈಗ ಗಾಡಿಯೇ ಬೇಕಿಲ್ಲ ಎನ್ನುತ್ತಾನೆ. ಬೇರೆ ಕಂಪೆನಿಗಳಿಗೋ ಟ್ರಾವೆಲ್ಲಿಗೋ ಗಾಡಿ ಬಿಡೋಣವೆಂದರೆ ಅವರೀಗಾಗಲೇ ಈ ಥರದ ನೂರಾರು ಕಾರುಗಳನ್ನು ತಿರಸ್ಕರಿಸಿದ್ದಾಗಿದೆ. ಯಾವ ಟ್ರಾವೆಲ್ಸಿಗೂ ಕಾರುಗಳು ಬೇಕಿಲ್ಲ, ಐಟಿ-ಬಿಟಿ ಕಂಪೆನಿಗಳಂತೂ ಇರುವ ಗಾಡಿಗಳಲ್ಲೇ ಉಳಿಕೆ ಸಿಬ್ಬಂದಿಯನ್ನು ಕರೆತನ್ನಿ ಎನ್ನುತ್ತಿದ್ದಾರೆ. ಸರಿಸುಮಾರು ಎರಡು ಸಾವಿರ ಕಾರುಗಳನ್ನು ರಸ್ತೆಗೆ ಬಿಟ್ಟಿದ್ದ ಎಸ್‌ಆರ್‌ಎಸ್ ಟ್ರಾವೆಲ್ಸ್‌ನಂಥವೇ ಅದರ ಅರ್ಧಕ್ಕರ್ಧ ಗಾಡಿಗಳನ್ನು ತಿರಸ್ಕರಿಸಿರುವಾಗ ಇನ್ನು ಸಣ್ಣಪುಟ್ಟ ಟ್ರಾವೆಲ್ಸ್‌ಗಳ ಗತಿಯೇನು? ■



# ಭಾರತ - ಪಾಕ್ ಯುದ್ಧ

■ ಕುಮಾರ್ ಬುರಡಿಕಟ್ಟಿ

ಭಾರತ ಮತ್ತು ಪಾಕಿಸ್ತಾನದ ನಡುವೆ ಮತ್ತೊಂದು ಯುದ್ಧದ ಕಾರ್ಮೋಡ ಕವಿಯುತ್ತಿದೆ. ನಮಗೂ ಯುದ್ಧ ಬೇಡ, ನಮಗೂ ಯುದ್ಧ ಬೇಡ ಎನ್ನುತ್ತಲೇ ಭಾರತ-ಪಾಕ್ ಗಡಿಯುದ್ದಕ್ಕೂ ಎರಡೂ ದೇಶಗಳು ತಮ್ಮ ಸೈನ್ಯಗಳನ್ನು ಭಾರಿ ಸಂಖ್ಯೆಯಲ್ಲಿ ಜಮಾವಣೆ ಮಾಡುತ್ತಿವೆ. ಭೂಸೇನೆ, ವಾಯುಸೇನೆ, ನೌಕಾಪಡೆಗಳು ಅಲರ್ಟ್‌ನಲ್ಲಿರುವಂತೆ ಆದೇಶಿಸಿವೆ. ಎರಡೂ ದೇಶಗಳು ತಮ್ಮ ಸೈನಿಕರಿಗೆ ನೀಡಿದ್ದ ರಜೆಗಳನ್ನು ರದ್ದುಗೊಳಿಸಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿವೆ. ಭಾರತ ಪಾಕಿಸ್ತಾನದಲ್ಲಿರುವ ಉಗ್ರರ ತರಬೇತಿ ಶಿಬಿರಗಳ ಮೇಲೆ ವೈಮಾನಿಕ ದಾಳಿ ನಡೆಸಲು ಯೋಚಿಸುತ್ತಿದ್ದಂತೆಯೇ ಅತ್ತ ಪಾಕಿಸ್ತಾನವೂ ಭಾರತಕ್ಕೆ ತಕ್ಕ ಉತ್ತರ ಕೊಡುವುದಾಗಿ ಎಚ್ಚರಿಸಿದೆ - ಇವೆಲ್ಲಾ ಭಾರತ-ಪಾಕ್ ನಡುವೆ ಮತ್ತೊಂದು ಪೂರ್ಣಪ್ರಮಾಣದ ಯುದ್ಧ ಭುಗಿಲೇಳಬಹುದಾದ ಸೂಚನೆಯನ್ನು ನೀಡುತ್ತಿವೆ.

ಇತ್ತ ಭಾರತದ ಪ್ರಧಾನಿ ಮನಮೋಹನ್ ಸಿಂಗ್ ಅವರು ಭೂಸೇನೆಯ ಮುಖ್ಯಸ್ಥ ಜನರಲ್ ದೀಪಕ್ ಕಪೂರ್, ವಾಯುಸೇನಾ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಫಾಲಿ ಹೋಮಿ ಮೇಜರ್ ಹಾಗೂ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಸುರೇಶ್ ಮೆಹ್ತಾ ಅವರೊಂದಿಗೆ ಯುದ್ಧದ ಸಿದ್ಧತೆಯ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ್ದಾರೆ. ಅತ್ತ ಪಾಕ್ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಮತ್ತು ಪ್ರಧಾನಿ ಯೂಸೂಫ್ ರಾಜಾ ಗಿಲಾನಿ ಪಾಕಿಸ್ತಾನದ ಸಶಸ್ತ್ರ ಪಡೆಗಳ ಮುಖ್ಯಸ್ಥರೊಂದಿಗೆ ಯುದ್ಧ ತಯಾರಿ ಬಗ್ಗೆ ಚರ್ಚೆ ನಡೆಸಿರುವುದರಿಂದ ಮತ್ತೊಂದು ಇಂಡೋ-ಪಾಕ್ ಯುದ್ಧ ಭುಗಿಲೇಳುವ ವಿಚಾರಕ್ಕೆ ರೆಕ್ಕೆಪುಕ್ಕ ಬಂದಿದೆ.

ಇತ್ತೀಚೆಗೆ ಮುಂಬಯಿ ಮೇಲೆ ದಾಳಿ ನಡೆಸಿದ ಭಯೋತ್ಪಾದಕರು ಪಾಕ್ ಪ್ರಜೆಗಳೇ ಆಗಿದ್ದು ಪಾಕಿಸ್ತಾನದಲ್ಲಿಯೇ ತರಬೇತಿ ಪಡೆದಿದ್ದರೆಂಬ ಸತ್ಯವನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲದ ಪಾಕ್ ರಾಜಕೀಯ ನಾಯಕತ್ವದ ಹಠಮಾರಿ ಧೋರಣೆಯೇ ಪರಿಸ್ಥಿತಿ ಬಿಗಡಾಯಿಸುವುದಕ್ಕೆ ಪ್ರಧಾನ ಕಾರಣವಾಗಿದೆ. ಪಾಕಿಸ್ತಾನದ ನೆಲವನ್ನೇ ಲಷ್ಕರ್-ಎ-ತೊಯ್ಬಾದಂತಹ ಅಂತಾರಾಷ್ಟ್ರೀಯ ಭಯೋತ್ಪಾದಕ ಸಂಘಟನೆಗಳು ತಮ್ಮ ಅಡ್ಡೆಯನ್ನಾಗಿ ಮಾಡಿಕೊಂಡಿರುವುದು ಎಲ್ಲಾ ದೇಶಗಳ ಗುಪ್ತಚರ ಇಲಾಖೆಗಳಿಗೂ ಸ್ಪಷ್ಟವಾಗಿ ಗೊತ್ತಿರುವ ವಿಚಾರ. ಆದರೂ, ಅದನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲದ ಪಾಕ್ ನಾಯಕರು ಭಯೋತ್ಪಾದನೆಯನ್ನು ತನ್ನ ನೆಲದಿಂದ ಮೂಲೋತ್ಪಾಟನೆ ಮಾಡುವುದಕ್ಕೆ ಮುಂದಾಗುತ್ತಿಲ್ಲ, ಬದಲಿಗೆ ಮುಂಬಯಿ ದಾಳಿಯಲ್ಲಿ ಬಂಧಿತನಾದ ಕಸಬ್ ಪಾಕ್ ಪ್ರಜೆ ಎಂಬುದಕ್ಕೆ ಪುರಾವೆ ಕೊಡಿ ಎಂಬಂತಹ ಅಸಂಬದ್ಧ ಮಾತುಗಳನ್ನಾಡುತ್ತಾ ಅಂತಾರಾಷ್ಟ್ರೀಯ ಸಮುದಾಯದೆದುರು ಹಾಸ್ಯಾಸ್ಪದವಾಗಿ ವರ್ತಿಸುತ್ತಿದೆ.

ಹೀಗಾಗಿ, ಪಾಕಿಸ್ತಾನ ತನ್ನ ನೆಲದಲ್ಲಿನ ಭಯೋತ್ಪಾದಕ ಶಕ್ತಿಗಳನ್ನು ನಿಗ್ರಹಿಸುವುದಕ್ಕೆ ಮುಂದಾಗದಿರುವುದರಿಂದ ತಾನೇ ಆ ಕೆಲಸವನ್ನು ಮಾಡುವುದಕ್ಕೆ ಭಾರತ ಮುಂದಾಗುತ್ತಿದೆ; ಮಿಲಿಟರಿ ದಾಳಿಗೆ ಪ್ರತಿಯಾಗಿ ಮಿಲಿಟರಿ ದಾಳಿಯ ಮೂಲಕವೇ ಉತ್ತರ ಕೊಡುವುದಾಗಿ ಪಾಕ್ ಗುಟುರು ಹಾಕುತ್ತಿದೆ. ಅಂತರರಾಷ್ಟ್ರೀಯವಾಗಿ ಅಮೆರಿಕದಂತಹ ದೈತ್ಯ ದೇಶ ಭಾರತದ ಪರವಾಗಿ ಮಾತನಾಡುತ್ತಿದ್ದರೆ, ಚೀನಾದಂತಹ ಏಶಿಯಾದ ದೈತ್ಯರು ಪಾಕ್ ಪರ ದನಿ ಎತ್ತುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮತ್ತೊಂದು ಭಾರತ-ಪಾಕ್ ಯುದ್ಧದ ಕರಿಮೋಡ ಗಾಢವಾಗಿ ಆವರಿಸಿಕೊಳ್ಳುತ್ತಿದೆ.

ಭಾರತ-ಪಾಕ್ ಎರಡೂ ದೇಶಗಳ ಸೈನಿಕ ಶಕ್ತಿಯನ್ನು, ಶಸ್ತ್ರಾಸ್ತ್ರಗಳನ್ನು ಹೋಲಿಕೆ ಮಾಡಿ ನೋಡಿದರೆ ಭಾರತದ ಮಿಲಿಟರಿ ಶಕ್ತಿ ಪಾಕಿಸ್ತಾನದ ಮಿಲಿಟರಿ ಶಕ್ತಿಗಿಂತ ಉನ್ನತವಾಗಿಯೇ ಇದೆ. ಮೂವತ್ತೈದು ಲಕ್ಷಕ್ಕಿಂತಲೂ ಹೆಚ್ಚು ಯೋಧರನ್ನು ಒಳಗೊಂಡಿರುವ ಭಾರತದ ಮಿಲಿಟರಿ ಇಡೀ ಪ್ರಪಂಚದಲ್ಲಿಯೇ ಎರಡನೇ ಸ್ಥಾನದಲ್ಲಿದೆ. ಆದರೆ, ಪಾಕಿಸ್ತಾನದ ಮಿಲಿಟರಿಯಲ್ಲಿರುವುದು ಭಾರತದ ಮಿಲಿಟರಿಯ ಕೇವಲ ಅರ್ಧದಷ್ಟು ಸೈನಿಕರು ಮಾತ್ರ. ಶಸ್ತ್ರಾಸ್ತ್ರಗಳ ವಿಚಾರಕ್ಕೆ ಬಂದರೂ ಭಾರತದ್ದೇ ಮೇಲುಗೈ. ಭಾರತದ ಮಿಲಿಟರಿಯಲ್ಲಿರುವ ಟ್ಯಾಂಕರ್‌ಗಳು, ಫಿರಂಗಿಗಳು, ಮದ್ದುಗುಂಡುಗಳು, ಯುದ್ಧ ಹಡಗುಗಳು, ಯುದ್ಧ ವಿಮಾನಗಳು, ಕ್ಷಿಪಣಿಗಳು, ಬಾಂಬುಗಳು ಯಾವುದರಲ್ಲೂ ಭಾರತಕ್ಕೆ ಪಾಕಿಸ್ತಾನ ಸರಿಸಾಟಿಯಾಗಲಾರದು. ಆದರೆ ಭಾರತದ ಈ military superiorityಯನ್ನು ಮಾತ್ರವೇ ಆಧಾರವಾಗಿಟ್ಟುಕೊಂಡು ಯುದ್ಧ ಗೆಲ್ಲಬಹುದೆಂದರೆ ಅದಕ್ಕಿಂತ ಮೂರ್ಖತನ ಇನ್ನೊಂದಿಲ್ಲ. ಏಕೆಂದರೆ, ಹೆಚ್ಚು ಸಂಖ್ಯೆಯ ಯೋಧರನ್ನು, ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನಿಟ್ಟುಕೊಂಡವರೇ ಯುದ್ಧದಲ್ಲಿ ಗೆಲ್ಲುತ್ತಾರೆಂಬುದು ಹುಂಬತನ. ಯುದ್ಧವೊಂದನ್ನು ಗೆಲ್ಲುವುದಕ್ಕೆ ಕರಾರುವಾಕ್ಕಾದ ವ್ಯೂಹತಂತ್ರ ಮತ್ತು ಕಾರ್ಯತಂತ್ರಗಳನ್ನು ಹೆಣೆಯಬೇಕಾಗುತ್ತದೆ. ವ್ಯೂಹತಂತ್ರ ಮತ್ತು ಕಾರ್ಯತಂತ್ರಗಳನ್ನು ಕರಾರುವಾಕ್ಕಾಗಿ ಹೆಣೆದರೆ, ಗೆರಿಲ್ಲಾ ಮಾದರಿಯ ಯುದ್ಧತಂತ್ರವನ್ನು ಅನುಸರಿಸಿದರೆ ಎಂತಹ ದೊಡ್ಡ ಸೈನ್ಯವನ್ನೂ ಚಿಕ್ಕ ಸೈನ್ಯವೇ ಸದೆಬಡಿಯಬಹುದೆಂಬುದನ್ನು ಚರಿತ್ರೆಯಲ್ಲಿ ಅನೇಕ ಯುದ್ಧಗಳು ಸಾರಿ ಹೇಳಿವೆ.

ವಿಯೆಟ್ನಾಂ ಯುದ್ಧವನ್ನೇ ತೆಗೆದುಕೊಳ್ಳಿ, ಅಮೆರಿಕಾದಂತ ದೈತ್ಯ ಅಮೆರಿಕವೇ ಗುಬ್ಬಚ್ಚಿಯಂತಹ ಪುಟ್ಟ ವಿಯೆಟ್ನಾಂ ಮೇಲೆ ಎರಗಿ ವರ್ಷಾನುಗಟ್ಟಲೇ ಯುದ್ಧ ಮಾಡಿದರೂ ಗೆಲ್ಲಲಾಗಲಿಲ್ಲ; ಅಪಾರ ಪ್ರಮಾಣದ ಸೈನ್ಯ, ಶಸ್ತ್ರಾಸ್ತ್ರಗಳನ್ನು ಕಳೆದುಕೊಂಡ ಅಮೆರಿಕ ಕೊನೆಗೆ ಸತ್ತೆನೋ, ಕೆಟ್ಟೆನೋ ಎಂದು ವಿಯೆಟ್ನಾಮ್‌ನಿಂದ ಕಾಲ್ತೆಗೆಯಬೇಕಾಯಿತು. ಅದು ತೀರಾ ದೂರದ ಮಾತು. ಇತ್ತೀಚಿನ ಉದಾಹರಣೆಗಳನ್ನು ನೋಡಿ. ಅಮೆರಿಕ ದೇಶವು ಅಫಘಾನಿಸ್ತಾನ ಮತ್ತು ಇರಾಕ್ ಮೇಲೆ ಎರಡು ಯುದ್ಧಗಳನ್ನು ಮಾಡಿದೆ. ಮಾತ್ರವಲ್ಲ ಆ ಎರಡೂ ಯುದ್ಧಗಳಲ್ಲಿ ತಾನು ಗೆದ್ದಿದ್ದೇನೆಂದು ಅಮೆರಿಕ ಬೆನ್ನು ತಟ್ಟಿಕೊಳ್ಳುತ್ತಿದೆ. ಆದರೆ ವಾಸ್ತವವಾಗಿ ಆ ಎರಡೂ ದೇಶಗಳಿಗೆ ತನ್ನ ಸೈನ್ಯ ನುಗ್ಗಿಸಿದ ಅಮೆರಿಕ ಈಗ ನಿಜಕ್ಕೂ ಅಲ್ಲಿ ಸಿಕ್ಕಿಹಾಕಿಕೊಂಡುಬಿಟ್ಟಿದೆ; ದಿನನಿತ್ಯ ಅಮೆರಿಕ ಸೈನ್ಯದ ಮೇಲೆ ಸ್ಥಳೀಯರು ನಡೆಸುತ್ತಿರುವ ಮಾರಣಾಂತಿಕ ಗೆರಿಲ್ಲಾ ದಾಳಿಗಳಲ್ಲಿ ನೂರಾರು ಸಂಖ್ಯೆಯ ಅಮೆರಿಕನ್ ಯೋಧರು ಸಾವನ್ನಪ್ಪುತ್ತಿದ್ದಾರೆ. ಅಮೆರಿಕ ಎಂತಹ ಪೇಚಿಗೆ ಸಿಕ್ಕಿಹಾಕಿಕೊಂಡಿದೆಯೆಂದರೆ, ದಿಢೀರೆಂದು ತನ್ನ ಸೈನ್ಯವನ್ನು ಅಲ್ಲಿಂದ ವಾಪಸ್ಸು ಕರೆಸಿಕೊಂಡರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನ ವರ್ಚಸ್ಸಿಗೆ ಕುಂದು ಬರುತ್ತದೆ. ಸೈನ್ಯವನ್ನು ಅಲ್ಲಿಯೇ ಬಿಟ್ಟರೆ ದಿನನಿತ್ಯ ನಷ್ಟ ಅನುಭವಿಸಬೇಕಾಗುತ್ತದೆ. ಇಂತಹ ಪೇಚಿನಲ್ಲೀಗ ಅಮೆರಿಕವಿದೆ.

ಪಾಕ್‌ನೊಂದಿಗೆ ಯುದ್ಧಕ್ಕಿಳಿದರೆ ಭಾರತ ಕೂಡ ಅಂತಹ ಒಂದು ಪೇಚಿನಲ್ಲಿ ಸಿಲುಕುವ ಅಪಾಯವಿದೆ. ಭಾರತವೇನಾದರೂ ಪಾಕ್‌ನೊಂದಿಗೆ ಯುದ್ಧಕ್ಕಿಳಿದರೆ ತಮ್ಮ ಆತ್ಮಹತ್ಯಾ ದಳಗಳು ಪಾಕ್ ಸೇನೆಯೊಂದಿಗೆ ಹೆಗಲಿಗೆ ಹೆಗಲು ಕೊಟ್ಟು, ಭಾರತದ ಸೈನ್ಯವನ್ನು ಹಿಮ್ಮೆಟ್ಟಿಸುವುದಾಗಿ ಈಗಾಗಲೇ ಅನೇಕ ಜಿಹಾದಿ ಭಯೋತ್ಪಾದಕ ಸಂಘಟನೆಗಳು ಹೇಳಿವೆ. ಅಂದರೆ, ಭಾರತದ ಸೈನ್ಯ ಕೇವಲ ಪಾಕಿಸ್ತಾನಿ ಸೈನ್ಯವನ್ನು ಮಾತ್ರವಲ್ಲ, ಗೆರಿಲ್ಲಾ ಯುದ್ಧದಲ್ಲಿ ಪಳಗಿರುವ ಇಡೀ ಇಸ್ಲಾಮಿಕ್ ಜಿಹಾದಿ ಭಯೋತ್ಪಾದಕರ ದೊಡ್ಡ ಹಿಂದಿನೊಂದಿಗೆ ಸೆಣಸಬೇಕಾಗುತ್ತದೆ. ಅದು ಅಷ್ಟು ಸುಲಭವಲ್ಲ.


**ಭಾರತದ ಈ military superiorityಯನ್ನು ಮಾತ್ರವೇ ಆಧಾರವಾಗಿಟ್ಟುಕೊಂಡು ಯುದ್ಧ ಗೆಲ್ಲಬಹುದೆಂದರೆ ಅದಕ್ಕಿಂತ ಮೂರ್ಖತನ ಇನ್ನೊಂದಿಲ್ಲ. ವ್ಯೂಹತಂತ್ರ ಮತ್ತು ಕಾರ್ಯತಂತ್ರಗಳನ್ನು ಕರಾರುವಾಕ್ಕಾಗಿ ಹೆಣೆದರೆ, ಗೆರಿಲ್ಲಾ ಮಾದರಿಯ ಯುದ್ಧ ತಂತ್ರವನ್ನು ಅನುಸರಿಸಿದರೆ ಎಂತಹ ದೊಡ್ಡ ಸೈನ್ಯವನ್ನೂ ಚಿಕ್ಕ ಸೈನ್ಯವೇ ಸದೆಬಡಿಯಬಹುದೆಂಬುದನ್ನು ಚರಿತ್ರೆಯಲ್ಲಿ ಅನೇಕ ಯುದ್ಧಗಳು ಸಾರಿ ಹೇಳಿವೆ**

ಅಂತರರಾಷ್ಟ್ರೀಯವಾಗಿಯೂ ಪಾಕಿಸ್ತಾನವೇನು ಒಂಟಿಯಾಗಿಲ್ಲ, ಹತ್ತಾರು ವರ್ಷಗಳಿಂದ ಪಾಕಿಸ್ತಾನಕ್ಕೆ ಅಮೆರಿಕದ ಸೈನಿಕ ಸಹಯೋಗವಿತ್ತು; ಅದರೊಂದಿಗೆ ಉತ್ತಮ ಬಾಂಧವ್ಯವಿತ್ತು; ತಾನು ಮಾಡುವ ಎಲ್ಲಾ ಕಿತಾಪತಿಗೆ ಅದರ ಬೆಂಬಲವಿತ್ತು, ಈಗ ಅಮೆರಿಕದ ಬೆಂಬಲ ಅದಕ್ಕಿಲ್ಲವೆಂಬುದು ನಿಜವಾದರೂ ಏಶಿಯಾದ ದೈತ್ಯ ಶಕ್ತಿಯಾಗಿರುವ ಚೀನಾ ಅದರ ಬೆನ್ನಿಗೆ ನಿಂತಿದೆ. ಇತ್ತೀಚಿನ ದಿನಗಳಲ್ಲಿ ಏಶಿಯಾ ಖಂಡದಲ್ಲಿ ಪ್ರಬಲ ಆರ್ಥಿಕ ಶಕ್ತಿಯಾಗಿ ಚೀನಾ ಆವಿರ್ಭವಿಸುತ್ತಿರುವುದರಿಂದ ಏಶಿಯಾದಲ್ಲಿ ತನ್ನ ಆಟವೇನೂ ನಡೆಯದಂತಹ ಪರಿಸ್ಥಿತಿ ನಿರ್ಮಾಣವಾಗಬಹುದೆಂಬ ಆತಂಕ ಅಮೆರಿಕಕ್ಕೆ ಇದ್ದೇ ಇದೆ. ಆದ್ದರಿಂದಲೇ, ಚೀನಾಕ್ಕೆ counter weight ಆಗಿ ಭಾರತವನ್ನು ನಿಲ್ಲಿಸುವ ತನ್ನ strategic designನ ಭಾಗವಾಗಿ ಅಮೆರಿಕ ಪಾಕಿಸ್ತಾನದಿಂದ ನಿಧಾನವಾಗಿ ದೂರ ಸರಿದು ಭಾರತಕ್ಕೆ ಹತ್ತಿರವಾಗುತ್ತಿದೆ. ಈ ಹಿನ್ನೆಲೆಯಲ್ಲಿಯೇ ಅದು ಭಾರತದೊಂದಿಗೆ 'ಅಣು ಒಪ್ಪಂದ' ಮಾಡಿಕೊಂಡಿದೆ. ಅಂತರರಾಷ್ಟ್ರೀಯವಾಗಿಯೂ ಎಲ್ಲಾ ವಿಚಾರಗಳಲ್ಲೂ ಅಮೆರಿಕ ಭಾರತದ ಪರ ನಿಲುವನ್ನು ತೆಗೆದುಕೊಳ್ಳುತ್ತಿರುವುದು ಇದಕ್ಕೆ ಸ್ಪಷ್ಟ ಉದಾಹರಣೆ.

ಯಾವಾಗ ಅಮೆರಿಕ ತನ್ನಿಂದ ದೂರ ಸರಿಯುತ್ತಾ ತನ್ನ ಪಾರಂಪರಿಕ ಶತ್ರು ಎಂದೇ ನಂಬಿರುವ ಭಾರತದ ಪರ ನಿಲ್ಲಲಾರಂಭಿಸಿತೋ ಪಾಕಿಸ್ತಾನಕ್ಕೆ ಹಿಂದೆಂದಿಗಿಂತಲೂ ಅಭದ್ರತೆ ಹೆಚ್ಚಾಗಿ ಕಾಡಲಾರಂಭಿಸಿತು; ಭಾರತ ಯಾವಾಗ ಬೇಕಾದರೂ ಅಮೆರಿಕದ ಸಹಾಯದಿಂದ ತನ್ನ ಮೇಲೆ ದಾಳಿ ಮಾಡಬಹುದೆಂಬ ಆತಂಕ ಹೆಚ್ಚಾಯಿತು. ಆದ್ದರಿಂದಲೇ ಅದು ತಡ ಮಾಡದೇ ಚೀನಾದೊಂದಿಗೆ ತನ್ನ ಸಹಯೋಗ, ಸ್ನೇಹಗಳನ್ನು ಬೆಳೆಸಿಕೊಳ್ಳಲಾರಂಭಿಸಿದೆ; ಈ ಹಿನ್ನೆಲೆಯಲ್ಲಿಯೇ ಇಂಡೋ-ಅಮೆರಿಕನ್ ಅಣು ಒಪ್ಪಂದದ ಮಾದರಿಯಲ್ಲಿಯೇ ಪಾಕ್-ಚೀನಾ ಅಣು ಒಪ್ಪಂದವನ್ನು ಮಾಡಿಕೊಂಡಿವೆ.


ಇಂತಹ ಸಂದರ್ಭದಲ್ಲಿ ನಿಜವಾದ ಭೀತಿ ಉಂಟಾಗಬೇಕಿದ್ದುದು ಭಾರತಕ್ಕೆ. ಏಕೆಂದರೆ, ಏಶಿಯಾದ ಎರಡು ಪ್ರಮುಖ ರಾಷ್ಟ್ರಗಳಾದ ಚೀನಾ ಮತ್ತು ಪಾಕಿಸ್ತಾನಗಳೇ ಭಾರತದ ಗಡಿಗೆ ಹೊಂದಿಕೊಂಡಿವೆ. ಚೀನಾದ ಮಿಲಿಟರಿಗೆ ಹೋಲಿಸಿದರೆ ಭಾರತದ ಮಿಲಿಟರಿ ಏನೂ ಅಲ್ಲ, ಭಾರತದಲ್ಲಿರುವ ಅಣುಬಾಂಬ್‌ಗಳಿಗಿಂತ ಹಲವಾರು ಪಟ್ಟು ಹೆಚ್ಚು ಅಣುಬಾಂಬ್‌ಗಳು ಚೀನಾದ ಹತ್ತಿರ ಇವೆ. ಈ ಕಡೆಯಿಂದ ಪಾಕ್, ಆ ಕಡೆಯಿಂದ ಚೀನಾ ಭಾರತದ ಮೇಲೆ ಎರಗಿದರೆ ಹತ್ತಾರು ಸಾವಿರ ಮೈಲಿ ದೂರದಲ್ಲಿರುವ ಅಮೆರಿಕ ಏನೂ ಮಾಡಲಾಗುವುದಿಲ್ಲ.

ಭಾರತ-ಪಾಕ್ ಯುದ್ಧದಿಂದ ಎದುರಾಗುವ ಅತಿದೊಡ್ಡ ಅಪಾಯ ಎಂದರೆ ಅಣುಬಾಂಬಿನದು! ಭಾರತ ಸೈನಿಕವಾಗಿ ಪಾಕಿಸ್ತಾನ್‌ಗಿಂತಲೂ ಬಲಿಷ್ಠವಾಗಿರುವುದನ್ನೇ ಆಧಾರವಾಗಿಟ್ಟುಕೊಂಡು ಭಾಳಠಾಕ್ರೆಯಂತಹ ಮೂರ್ಖರು ಪಾಕಿಸ್ತಾನದ ಮೇಲೆ ಯುದ್ಧ ಮಾಡಬೇಕೆಂದು, ಅದರ ಮೇಲೆ ಅಣುಬಾಂಬ್ ಹಾಕಬೇಕೆಂದು ಅರಚಾಡುತ್ತಲೇ





▶▶▶




ಇದ್ದಾರೆ. ಇವರು ಅಣು ಬಾಂಬ್ ಹಾಕಿದರೆ ಅವರು ಪಿಟೀಲು ಕುಯ್ಯುತ್ತಾ ಕುಳಿತಿರುತ್ತಾರೆಯೆ? ಭಾರತದ ಹತ್ತಿರ ಪಾಕಿಸ್ತಾನದ ದುಪ್ಪಟ್ಟು ಯೋಧರಿರಬಹುದು, ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರಗಳಿರಬಹುದು, ಅತ್ಯಾಧುನಿಕ ಯುದ್ಧ ವಿಮಾನಗಳಿರಬಹುದು, ದೈತ್ಯ ಯುದ್ಧ ಹಡಗುಗಳಿರಬಹುದು, ಅಗಾಧ ಪ್ರಮಾಣದ ಫಿರಂಗಿಗಳಿರಬಹುದು, ಪಾಕಿಸ್ತಾನದ ಮೂಲೆಮೂಲೆಗೆ ಬಾಂಬುಗಳನ್ನು ಹೊತ್ತೊಯ್ದು ಹಾಕಬಲ್ಲ ಕ್ಷಿಪಣಿಗಳಿರಬಹುದು. ಆದರೆ, ಅವೆಲ್ಲ ಪಾಕಿಸ್ತಾನದ ಹತ್ತಿರ ಇರುವ ಅಣುಬಾಂಬ್‌ಗೆ ಸಮವಲ್ಲ.


ಭಾರತದಲ್ಲಿರುವಷ್ಟೇ ಅಣುಬಾಂಬ್‌ಗಳು ಪಾಕಿಸ್ತಾನದ ಹತ್ತಿರವೂ ಇವೆ. ಪಾಕಿಸ್ತಾನದ ಇಸ್ಲಾಮಾಬಾದ್, ಕರಾಚಿ, ಫಾಯಿಸ್ಲಾಬಾದ್, ಮುಲ್ತಾನ್, ಲಾಹೋರ್, ರಾವಲ್ಪಿಂಡಿಗಳ ಮೇಲೆ ಒಂದೊಂದು ಅಣುಬಾಂಬ್ ಹಾಕಿದರೆ ಆ ನಗರಗಳೇ ಸರ್ವನಾಶವಾಗಿ ಹೋಗುತ್ತವೆ ಎಂದು ಭಾಳ ಠಾಕ್ರೆ ಲೆಕ್ಕಹಾಕುತ್ತಿರಬಹುದು. ಆದರೆ, ಭಾರತದ ದೆಹಲಿ, ಮುಂಬಯಿ, ಕಲ್ಕತ್ತಾ, ಚೆನ್ನೈ, ಹೈದರಾಬಾದ್, ಬೆಂಗಳೂರುಗಳನ್ನು ಸಂಪೂರ್ಣವಾಗಿ ಸುಟ್ಟು ಭಸ್ಮ ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟು ಅಣುಬಾಂಬ್‌ಗಳು ಪಾಕಿಸ್ತಾನದ ಹತ್ತಿರ ಇವೆ. ತಾನು ಮೊದಲು ಅಣು ಬಾಂಬ್ ಹಾಕುವುದಿಲ್ಲ ಎಂದು ಪಾಕಿಸ್ತಾನದ ಅಧ್ಯಕ್ಷ ಆಸೀಫ್ ಅಲಿ ಜರ್ದಾರಿ ಹೇಳಿದ್ದಾರಾದರೂ ಆ ಮಾತನ್ನು ವಾಪಾಸ್ಸು ಪಡೆಯುವಂತೆ ಪಾಕ್ ಸೇನಾಧಿಕಾರಿಗಳು ಜರ್ದಾರಿಯನ್ನು ಒತ್ತಾಯಿಸುತ್ತಿದ್ದಾರೆ. ಅಂದರೆ, ಯುದ್ಧ ತಮ್ಮ ಕೈಮೀರಿ ಬೆಳೆದರೆ ಅಂತಿಮ ಅಸ್ತ್ರವಾಗಿ ಪಾಕ್ ಅಣುಬಾಂಬನ್ನೂ ಪ್ರಯೋಗಿಸಬಹುದು. ಹಾಗೇನಾದರೂ ಆದರೆ, ಮೊದಲ ಅಣುಬಾಂಬ್ ಬೀಳುವುದೇ ಠಾಕ್ರೆ ನೆಲೆಸಿರುವ ಮುಂಬೈ ಮೇಲೆ!


ಹಾಗಾದರೆ, ಪಾಕ್ ನೆಲದಲ್ಲಿ ಹುಟ್ಟಿ, ತರಬೇತುಗೊಂಡ ಭಯೋತ್ಪಾದಕರು ಭಾರತದಲ್ಲಿ ಕಂಡಕಂಡಲ್ಲಿ ಬಾಂಬ್‌ಗಳನ್ನು ಸಿಡಿಸುತ್ತಾ ಅಮಾಯಕರನ್ನು ಕೊಲ್ಲುತ್ತಿದ್ದರೆ ಭಾರತ ಸುಮ್ಮನೇ ಕೈಕಟ್ಟಿ ಕುಳಿತುಕೊಳ್ಳಬೇಕೆ? ಭಯೋತ್ಪಾದನೆಯನ್ನು ಮೂಲೋತ್ಪಾಟನೆ ಮಾಡುವುದಕ್ಕೆ ಮುಂದಾಗಬೇಡವೆ? ಖಂಡಿತಾ ಕೈಕಟ್ಟಿ ಕುಳಿತುಕೊಳ್ಳಬಾರದು; ಭಯೋತ್ಪಾದನೆಯನ್ನು ಬೇರು ಸಹಿತ ಕಿತ್ತುಹಾಕಲು ಸರ್ವಪ್ರಯತ್ನ ಮಾಡಲೇಬೇಕು. ಆದರೆ, ಅದು ಪಾಕ್‌ನೊಂದಿಗೆ ಯುದ್ಧ ಮಾಡುವುದರಿಂದ ಸಾಧ್ಯವಾಗುವುದಿಲ್ಲ; ಅದಕ್ಕೆ ಯುದ್ಧ ಅನಿವಾರ್ಯವೂ ಅಲ್ಲ. ಜಂಗ್ ಹೀ ಖುದ್ ಏಕ್ ಮಸ್ಲಾ ಹೈ ಓ ಮಸ್ಲೋಂಕೋ ಕ್ಯಾ ಹಲ್ ದೇಗಿ? (ಯುದ್ಧವೇ ಒಂದು ಸಮಸ್ಯೆ ಅದು ಸಮಸ್ಯೆಗಳಿಗೆ ಏನು ಪರಿಹಾರ ಕೊಡುತ್ತೆ?) ಎಂಬ ಮಾತಿನಂತೆ ಯುದ್ಧ ಎಂದೂ ಸಮಸ್ಯೆಗಳಿಗೆ ಪರಿಹಾರವಾಗಲಾರದು. ಹೆಚ್ಚೆಂದರೆ ಇರುವ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಲು ನೆರವಾಗಬಹುದಷ್ಟೆ.

ಒಂದು ವೇಳೆ ಭಾರತ ಮತ್ತು ಪಾಕ್‌ಗಳು ಯುದ್ಧಕ್ಕಿಳಿದರೆ ಅಸಲಿಗೆ ಭಾರತವೂ ಉದ್ಧಾರವಾಗುವುದಿಲ್ಲ, ಪಾಕಿಸ್ತಾನವೂ ಉದ್ಧಾರವಾಗುವುದಿಲ್ಲ; ಎರಡೂ ದೇಶಗಳು ಪರಸ್ಪರ ಕಚ್ಚಾಡಿಕೊಳ್ಳಲು ಹೆಚ್ಚೆಚ್ಚು ಯುದ್ಧ ವಿಮಾನಗಳನ್ನು, ಶಸ್ತ್ರಾಸ್ತ್ರಗಳನ್ನು, ಬಾಂಬುಗಳನ್ನು, ಕ್ಷಿಪಣಿಗಳನ್ನು ಕೊಂಡುಕೊಳ್ಳಲು ಅಪಾರ ಪ್ರಮಾಣದ ಹಣ ಸುರಿಯುತ್ತಾ ಖಜಾನೆಗಳನ್ನು ಖಾಲಿ ಮಾಡಿಕೊಳ್ಳುತ್ತವೆ. ಆ ಹೊಣೆಯನ್ನೇನು ಮನಮೋಹನ್ ಸಿಂಗ್ ಆಗಲೀ, ಭಾಳ ಠಾಕ್ರೆಯಾಗಲೀ, ಜರ್ದಾರಿಯಾಗಲೀ ಹೊತ್ತುಕೊಳ್ಳುವುದಿಲ್ಲ, ಅದೆಲ್ಲ ಎರಡೂ ದೇಶಗಳ ಜನಸಾಮಾನ್ಯನ ಹೆಗಲೇರುತ್ತದೆ. ಈಗಾಗಲೇ ಬಡತನ, ನಿರುದ್ಯೋಗ, ಅನಕ್ಷರತೆ, ಅನಾರೋಗ್ಯದಿಂದ ಬಳಲುತ್ತಿರುವ ಜನ ಯುದ್ಧದಿಂದ ಮತ್ತಷ್ಟು ನಿರ್ಗತಿಕರಾಗುತ್ತಾರೆ; ಎರಡು ಹೊತ್ತಿನ ಅನ್ನಕ್ಕೂ ಗತಿಯಿಲ್ಲದವರು ಎರಡೂ ದೇಶಗಳಲ್ಲಿ ಲೆಕ್ಕವಿಲ್ಲದಷ್ಟು ಜನ ಇದ್ದಾರೆ. ಅವರ ಸಾಲಿಗೆ ಮತ್ತೊಂದಿಷ್ಟು

> ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿರುವ ಎರಡೂ ದೇಶಗಳು ಪ್ರಗತಿಗಾಗಿ ಬಳಸಬಹುದಾದ ದುಡ್ಡನ್ನು ಯುದ್ಧಕ್ಕೆ ಸುರಿದರೆ ಇನ್ನಷ್ಟು ದುರ್ಗತಿಗಿಳಿಯುತ್ತವೆ; ಎರಡೂ ದೇಶಗಳ ಸೈನಿಕರ ಅತ್ಯಮೂಲ್ಯ ಜೀವಗಳು ಬಲಿಯಾಗುತ್ತವೆ. ಭಾರತ-ಪಾಕ್‌ಗಳು ಯುದ್ಧದಿಂದ ಬರ್ಬಾದ್ ಆದಷ್ಟೂ ಅಮೆರಿಕ, ಚೀನಾಗಳು ತಮ್ಮ ಶಸ್ತ್ರಾಸ್ತ್ರಗಳನ್ನು ಮಾರಿಕೊಂಡು ಉದ್ಧಾರವಾಗುತ್ತವೆ.







ಜನ ಸೇರಿಕೊಳ್ಳುತ್ತಾರೆ. ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿರುವ ಎರಡೂ ದೇಶಗಳು ಪ್ರಗತಿಗಾಗಿ ಬಳಸಬಹುದಾದ ದುಡ್ಡನ್ನು ಯುದ್ಧಕ್ಕೆ ಸುರಿದರೆ ಇನ್ನಷ್ಟು ದುರ್ಗತಿಗಿಳಿಯುತ್ತವೆ; ಎರಡೂ ದೇಶಗಳ ಸೈನಿಕರ ಅತ್ಯಮೂಲ್ಯ ಜೀವಗಳು ಬಲಿಯಾಗುತ್ತವೆ. ಭಾರತ-ಪಾಕ್‌ಗಳು ಯುದ್ಧದಿಂದ ಬರ್ಬಾದ್ ಆದಷ್ಟೂ ಅಮೆರಿಕ, ಚೀನಾಗಳು ತಮ್ಮ ಶಸ್ತ್ರಾಸ್ತ್ರಗಳನ್ನು ಮಾರಿಕೊಂಡು ಉದ್ಧಾರವಾಗುತ್ತವೆ.

ಯಾರೇ ಗೆಲ್ಲಲಿ, ಯಾರೇ ಸೋಲಲಿ, ಯುದ್ಧದಲ್ಲಿ ಭಾಗಿಯಾದ ದೇಶಗಳು ಬರ್ಬಾದ್ ಆಗಿಹೋಗುತ್ತವೆ. ಅಮೆರಿಕದೊಂದಿಗಿನ ಯುದ್ಧದಲ್ಲಿ ವಿಯೆಟ್ನಾಂ ಗೆದ್ದುಬಿಟ್ಟಿತು; ವಿಯೆಟ್ನಾಂನಂತಹ ಪುಟ್ಟ ದೇಶವೊಂದು ಅಮೆರಿಕದಂತಹ ದೈತ್ಯ ಮಿಲಿಟರಿ ಶಕ್ತಿಯನ್ನು ಸದೆಬಡೆದದ್ದನ್ನು ವಿಶ್ವದಾದ್ಯಂತ ಜನ ವಿಜಯೋತ್ಸವವನ್ನೇನೋ ಆಚರಿಸಿದರು. ವಾಸ್ತವ ಏನೆಂದರೆ, ಯುದ್ಧದಲ್ಲಿ ನಜ್ಜುಗುಜ್ಜಾಗಿದ್ದ ವಿಯೆಟ್ನಾಂ ಆಂತರಿಕವಾಗಿ ಸೋತು ಸುಣ್ಣವಾಗಿತ್ತು; ಯುದ್ಧದಲ್ಲಾದ ನಷ್ಟಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಅದಕ್ಕೆ ಹತ್ತಾರು ವರ್ಷಗಳೇ ಬೇಕಾಯಿತು. ಎರಡನೇ ಮಹಾಯುದ್ಧದಲ್ಲಿ ಮಿತ್ರರಾಷ್ಟ್ರಗಳು ಗೆದ್ದು ವಿಜಯೋತ್ಸವ ಆಚರಿಸಿದರೂ ಇಂಗ್ಲೆಂಡ್ ಒಳಗೊಂಡಂತೆ ಗೆದ್ದ ರಾಷ್ಟ್ರಗಳೆಲ್ಲವೂ ಯುದ್ಧದಿಂದ ಆರ್ಥಿಕವಾಗಿ ನಿಸ್ತೇಜವಾಗಿ ಹೋಗಿದ್ದವು. ಸೂರ್ಯ ಮುಳುಗದ ಸಾಮ್ರಾಜ್ಯ ಎಂದೇ ಹೆಸರಾಗಿದ್ದ ಇಂಗ್ಲೆಂಡ್ ಆ ಯುದ್ಧದಲ್ಲಿ ಗೆದ್ದರೂ ಯುದ್ಧಾನಂತರ ಭಾರತವನ್ನೂ ಒಳಗೊಂಡಂತೆ ತನ್ನೆಲ್ಲಾ ವಸಾಹತುಗಳನ್ನು ಕಳೆದುಕೊಂಡು ಬರಿಗೈಯಾಯಿತು. ಕೊನೆಯ ತನಕ ಯುದ್ಧದಲ್ಲಿ ಭಾಗವಹಿಸದೇ ಯುದ್ಧ ಮಾಡುತ್ತಿದ್ದ ದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಮಾರಿಕೊಂಡು ಅಮೆರಿಕ ವಿಶ್ವದ **Super Power** ದೇಶವಾಗಿ ಹೊರಹೊಮ್ಮಿತು. ಭಾರತ-ಪಾಕ್ ಯುದ್ಧ ಮಾಡಿಕೊಂಡರೂ ಆಗುವುದು ಇದೆ; ಎರಡೂ ದೇಶಗಳು ಯುದ್ಧಕ್ಕಾಗಿ ದುಡ್ಡು ಸುರಿದು ಬರ್ಬಾದಾಗುತ್ತವೆ; ಎರಡೂ ದೇಶಗಳಿಗೆ ಶಸ್ತ್ರಾಸ್ತ್ರ ಮಾರುತ್ತಾ ಅಮೆರಿಕ ಮತ್ತು ಚೀನಾಗಳು ಉದ್ಧಾರವಾಗುತ್ತವೆ.

ಹಾಗಾಗಿ, ಯಾವ ದೃಷ್ಟಿಯಿಂದ ನೋಡಿದರೂ ಯುದ್ಧ ಭಯೋತ್ಪಾದನೆಗೆ ಉತ್ತರವಾಗಲಾರದು. ಭಯೋತ್ಪಾದನೆ ಎಂಬುದು ಈಗ ಯಾವುದೋ ಒಂದು ದೇಶದ ಚೌಕಟ್ಟಿನಲ್ಲಿ ಉಳಿದುಕೊಂಡಿಲ್ಲ, ಅದು ದೇಶ-ಭಾಷೆಗಳ ಗಡಿದಾಟಿ ಅಂತರರಾಷ್ಟ್ರೀಯ ವಿದ್ಯಮಾನವಾಗಿದೆ. ಭಯೋತ್ಪಾದನೆಯಿಂದ ಯಾವುದೇ ಒಂದು ದೇಶ ಬಳಲುತ್ತಿಲ್ಲ; ಮಾನವವಿರೋಧಿಯಾದ ಅದು ತಾನು ಹುಟ್ಟಿಕೊಂಡ ನೆಲವನ್ನೂ ಬಿಡದೆ ಎಲ್ಲವನ್ನೂ ಸುಟ್ಟು ಹಾಕುತ್ತಿದೆ. ಪಾಕಿಸ್ತಾನ, ಅಫಘಾನಿಸ್ತಾನದ ನೆಲದಲ್ಲಿ ಭಯೋತ್ಪಾದನೆ ಹುಟ್ಟಿ ಬೆಳೆಯುತ್ತಿದೆ ಎನ್ನುತ್ತೇವಲ್ಲ, ಆ ದೇಶಗಳನ್ನಾದರೂ ಅದು ಸುಡದೆ ಬಿಟ್ಟಿದೆಯೆ? ಖಂಡಿತಾ ಇಲ್ಲ, ಭಾರತದಲ್ಲಿ ಇಸ್ಲಾಮಿಕ್ ಭಯೋತ್ಪಾದನೆಯಿಂದ ಸತ್ತವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಆ ಎರಡು ದೇಶಗಳಲ್ಲಿ ಅಮಾಯಕರು ಸತ್ತಿದ್ದಾರೆ. ಈಗ ಯುದ್ಧಕ್ಕೆ ನಿಂತಿರುವ ಭಾರತ-ಪಾಕ್‌ಗಳನ್ನೇ ಹೋಲಿಸಿ ನೋಡಿದರೂ ಭಯೋತ್ಪಾದನೆಯಿಂದ ಭಾರತಕ್ಕಿಂತಲೂ ಹೆಚ್ಚಾಗಿ ಪಾಕಿಸ್ತಾನ ಜರ್ಝರಿತವಾಗಿದೆ. ಪಾಕಿಸ್ತಾನದಲ್ಲಿ ಏನಿಲ್ಲವೆಂದರೂ ದಿನವೊಂದಕ್ಕೆ ಒಂದು ಬಾಂಬ್‌ನಂತೆ ಸಿಡಿಯುತ್ತಲೇ ಇವೆ; ಅಮಾಯಕ ಜನ ಈ **mindless violence**ಗೆ ಬಲಿಯಾಗುತ್ತಲೇ ಇದ್ದಾರೆ. ಪಾಕ್‌ನ ಮಾಜಿ ಪ್ರಧಾನಿ ಬೆನಜಿರ್ ಭುಟ್ಟೋ ಕೂಡ ಬಲಿಪಶುವಾಗುವುದನ್ನು ತಡೆಯಲಾಗಲಿಲ್ಲ ಎಂದರೆ ಪಾಕ್ ಎಷ್ಟರಮಟ್ಟಿಗೆ ಭಯೋತ್ಪಾದನಾ ಹಿಂಸೆಗೆ ತುತ್ತಾಗಿದೆ ಎಂಬುದು ಯಾರಿಗಾದರೂ ಅರ್ಥವಾಗುತ್ತದೆ.


ದುರಂತ ಎಂದರೆ ಭಯೋತ್ಪಾದನೆಯಲ್ಲಿ ತೊಡಗಿರುವ ಅಲ್-ಖೈದಾ, ಜೆಸ್-ಎ-ಮೊಹ್ಮದ್, ಲಷ್ಕರ್-ಎ-ತೊಯ್ಬಾದಂತಹ ಸಂಘಟನೆಗಳು ಯಾವುದೇ ಸರ್ಕಾರಗಳ ನಿಯಂತ್ರಣದಲ್ಲಿಲ್ಲ, ಲಷ್ಕರ್-ಎ-ತೊಯ್ಬಾವನ್ನೇ ಉದಾಹರಣೆಗಾಗಿ ತೆಗೆದುಕೊಳ್ಳಿ. ಪಾಕಿಸ್ತಾನವೇ ಇದರ ಕಾರಸ್ಥಾನ. ಭಯೋತ್ಪಾದಕ ಕೃತ್ಯಗಳನ್ನು ನಡೆಸುವ ತರಬೇತಿಗಾಗಿ ಪಾಕ್ ಆಕ್ರಮಿತ ಕಾಶ್ಮೀರವನ್ನೇ ಅದು ತನ್ನ ಅಡ್ಡೆಯನ್ನಾಗಿ ಮಾಡಿಕೊಂಡಿದೆ. ಇದು ಪಾಕ್ ಸರ್ಕಾರಕ್ಕೆ, ಅದರ ರಾಜಕೀಯ ನಾಯಕತ್ವಕ್ಕೆ ಗೊತ್ತಿಲ್ಲದ ವಿಚಾರವೇನಲ್ಲ, ಆದರೆ, ಆ ಸಂಘಟನೆಯನ್ನು ಸದೆಬಡಿಯುವಷ್ಟು ತಾಕತ್ತು ಪಾಕ್ ಸರ್ಕಾರಕ್ಕಿಲ್ಲ. ಇನ್ನೂ ದುರಂತ ಎಂದರೆ, ಲಷ್ಕರ್-ಎ-ತೊಯ್ಬಾದ ಜಿಹಾದಿ ಉಗ್ರರು ಪಾಕ್ ಸೈನ್ಯದೊಂದಿಗೆ ನಿಕಟ




ಸಂಪರ್ಕದಲ್ಲಿದ್ದು ಜೊತೆಗೂಡಿ ಕೆಲಸ ಮಾಡುತ್ತಾರೆ. ಕಾರ್ಗಿಲ್ ಯುದ್ಧದ ಸಮಯದಲ್ಲಿ ಮುಜಾಹಿದೀನ್ ಮತ್ತು ಪಾಕ್ ಸೇನೆ ಇಬ್ಬರೂ ಜೊತೆಗೂಡಿಯೇ ಭಾರತೀಯ ಸೈನ್ಯದೊಂದಿಗೆ ಸೆಣಸಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಹೀಗಾಗಿ ಪಾಕ್ ಸೈನ್ಯವೂ ಒಂದಷ್ಟು ಮಟ್ಟಿಗೆ ಈ ಭಯೋತ್ಪಾದಕರ ಪ್ರಭಾವದಲ್ಲಿದೆ. ಒಂದು ವೇಳೆ ಪಾಕಿಸ್ತಾನ ಸರ್ಕಾರವೇನಾದರೂ ಭಯೋತ್ಪಾದಕರ ಮೂಲೋತ್ಪಾಟನೆಗೆ ಮುಂದಾದರೆ ಪಾಕ್ ಮಿಲಿಟರಿಯೇ ಸರ್ಕಾರದ ವಿರುದ್ಧ ತಿರುಗಿಬೀಳಬಹುದು. ಇದು ಪಾಕಿಸ್ತಾನದ ರಾಜಕೀಯ ನಾಯಕತ್ವಕ್ಕಿರುವ ಇಕ್ಕಟ್ಟು. ಪಾಕಿಸ್ತಾನ ಸರ್ಕಾರ ಭಯೋತ್ಪಾದಕರಿಗೆ ಎಷ್ಟರ ಮಟ್ಟಿಗೆ ತಲೆಬಾಗಿದೆಯೆಂದರೆ ಲಷ್ಕರ್-ಎ-ತೊಯ್ಬಾ ಭಯೋತ್ಪಾದಕ ಕೃತ್ಯದಲ್ಲಿ ತೊಡಗಿರುವುದು ಸ್ಪಷ್ಟವಿದ್ದರೂ ಅದನ್ನು ನಿಷೇಧಿಸುವ ಸಣ್ಣ ಎದೆಗಾರಿಕೆಯನ್ನೂ ಅದು ತೋರಿಲ್ಲ, ಮುಂಬಯಿ ಭಯೋತ್ಪಾದಕ ದಾಳಿಯ ನಂತರ ಲಷ್ಕರ್-ಎ-ತೊಯ್ಬಾ ಸಂಘಟನೆಯ ನಾಯಕ ಹಫೀಜ್ ಸಯೀದ್‌ನನ್ನು ನೆಪ ಮಾತ್ರಕ್ಕೆ ಗೃಹಬಂಧನದಲ್ಲಿಟ್ಟು ಮೂರೇ ದಿನದಲ್ಲಿ ಬಿಡುಗಡೆ ಮಾಡಿತು.

ಏನೇ ಆದರೂ ಭಾರತ ಮೊದಲು ಯುದ್ಧಕ್ಕಿಳಿಯಬಾರದು. ಹೇಗೆ ಪಾಕಿಸ್ತಾನ ಉಗ್ರಗಾಮಿಗಳ ತರಬೇತಿ ಮತ್ತು ಅಡಗುತಾಣವಾಗಿದೆ ಎಂಬುದನ್ನು ಇಡೀ ಜಗತ್ತಿಗೆ ಎಳೆಎಳೆಯಾಗಿ ಬಿಚ್ಚಿಡಬೇಕು; ಆ ಮೂಲಕ ಪಾಕ್ ಮೇಲೆ ಅಂತರರಾಷ್ಟ್ರೀಯ ಸಮುದಾಯ ಮತ್ತು ವಿಶ್ವಸಂಸ್ಥೆಯ ಒತ್ತಡ ಹೆಚ್ಚಾಗುವಂತೆ ಮಾಡಬೇಕು. ಮಾನವ ವಿರೋಧಿ ಭಯೋತ್ಪಾದನೆಯನ್ನು ಪೋಷಿಸಿ ಬೆಳೆಸುತ್ತಿರುವ ಪಾಕ್ ಇಡೀ ಜಗತ್ತಿನಿಂದ **isolate** ಆಗುವಂತೆ ಮಾಡಬೇಕು. ಪಾಕಿಸ್ತಾನ ಸರ್ಕಾರವೇ ತನ್ನ ನೆಲದಿಂದ ಭಯೋತ್ಪಾದನೆಯನ್ನು ಬೇರು ಸಹಿತ ಕಿತ್ತೆಸೆಯಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಬೇಕು. ಆಗ ಪಾಕ್ ನೆಲದಲ್ಲಿ ಒಂದು **civil war** ನಡೆದರೂ ನಡೆಯಬಹುದು. ಅದರಿಂದ ಜಗತ್ತಿಗೆ ಒಳ್ಳೆಯದೇ ಆಗುತ್ತದೆಯೇ ವಿನಃ ಕೆಟ್ಟದ್ದೇನೂ ಅಲ್ಲ.

> ಈಗ ಅಮೆರಿಕದ ಬೆಂಬಲ ಪಾಕ್‌ಗೆ ಇಲ್ಲವೆಂಬುದು ನಿಜವಾದರೂ ಏಶಿಯಾದ ದೈತ್ಯ ಶಕ್ತಿಯಾಗಿರುವ ಚೀನಾ ಅದರ ಬೆನ್ನಿಗೆ ನಿಂತಿದೆ. ಚೀನಾಕ್ಕೆ **counter weight** ಆಗಿ ಭಾರತವನ್ನು ನಿಲ್ಲಿಸುವ ತನ್ನ **strategic design**ನ ಭಾಗವಾಗಿ ಅಮೆರಿಕ ಪಾಕಿಸ್ತಾನದಿಂದ ನಿಧಾನವಾಗಿ ದೂರ ಸರಿದು ಭಾರತಕ್ಕೆ ಹತ್ತಿರವಾಗುತ್ತಿದೆ.



ಭಾರತ ಮತ್ತು ಪಾಕ್‌ಗಳೆರಡೂ ತಮ್ಮ ತಮ್ಮ ಗಾಜಿನ ಮನೆಯಲ್ಲಿವೆ. ಒಬ್ಬರು ಮತ್ತೊಬ್ಬರಿಗೆ ಕಲ್ಲೆಸೆದರೆ ಮೊದಲು ಹಾನಿಯಾಗುವುದು ತಮ್ಮ ಮನೆಗೇ. ■



# ಹಾವೇರಿ ಉತ್ಸವ ಯಾರದೋ ರೊಕ್ಕ ಉದಾಸಿ ಜಾತ್ರೆ!

ಹಿಂದಿನ ಮುಖ್ಯಮಂತ್ರಿ ಜೆ.ಎಚ್. ಪಟೇಲರ ಕಾಲದಲ್ಲಿ ಉದ್ಭವಗೊಂಡ ಹಾವೇರಿ ಜಿಲ್ಲೆ ಅಖಂಡ ಧಾರವಾಡ ಜಿಲ್ಲೆಯಿಂದ ಹೊರಬಂದು 10 ವಸಂತಗಳು ಕಳೆದರೂ ಉದ್ಧಾರವಾಗುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ಇಡೀ ಜಿಲ್ಲೆಯನ್ನೇ ಹಳ್ಳ ಹಿಡಿಯುವಂತೆ ಮಾಡಿದ ಮಂತ್ರಿ ಸಿ.ಎಂ. ಉದಾಸಿ ಮಾತ್ರ ಕೊಳ್ಳೆ ಹೊಡೆದ ಹಣದಲ್ಲಿ ಹಾಯಾಗಿ ಹಲ್ಲು ಕಿರಿಯುತ್ತಿದ್ದಾನೆ. ಜಿಲ್ಲೆಯ ಯಾವೊಂದು ಸಮಸ್ಯೆಗೂ ಸ್ಪಂದಿಸದ, ಅಭಿವೃದ್ಧಿ ಬಗ್ಗೆ ಆಲೋಚಿಸದ ಇಲ್ಲಿನ ಚೆಡ್ಡಿ ಪಟಾಲಂ ಮೊನ್ನೆ ನಡೆದ ಸರಕಾರಿ ಪ್ರಾಯೋಜಿತ ಹಾವೇರಿ ಉತ್ಸವ ಎಂಬ ಕಾರ್ಯಕ್ರಮವನ್ನು ಉದಾಸಿ ರಿಯಾಲಿಟಿ ಷೋವನ್ನಾಗಿ ಪರಿವರ್ತಿಸಿ ತಮ್ಮ ಹಡಬೆತನವನ್ನು ರಾಜ್ಯದ ಜನತೆಯ ಮುಂದೆ ತೆರೆದಿಟ್ಟದ್ದಾರೆ.



ಸಿ.ಎಂ.ಉದಾಸಿ


ಈ ಉತ್ಸವದ ಹೆಸರಲ್ಲಿ ಪಿ.ಎಸ್. ವಸ್ತ್ರದ ಎಂಬ ಜಿಲ್ಲಾಧಿಕಾರಿಯ ಆಡಂಬರ, ಸಂಸ್ಕೃತಿ ಇಲಾಖೆಯ ಉಪನಿರ್ದೇಶಕ ಬಿ.ಡಿ. ಹಿರೇಗೌಡನ ಜಾತಿ ಲಾಬಿ, ಮಂತ್ರಿ ಉದಾಸಿ ಮತ್ತವನ ಚೆಡ್ಡಿ ಶಾಸಕರುಗಳ ಅಂಧಾದರ್ಬಾರು... ಇವನ್ನೆಲ್ಲಾ ಕಂಡು ರೋಸಿಹೋದ ಜನ ಬೀದಿಗಿಳಿದು ಪ್ರತಿಭಟಿಸಿದರು. ಇನ್ನು ಪತ್ರಕರ್ತರು ಕೂಡ ಈ ಉತ್ಸವವನ್ನು 'ರಿಯಾಲಿಟಿ ಷೋ' ಎಂದು ಕರೆದು ಬಹಿಷ್ಕರಿಸಿದರು.

ಅಖಂಡ ಧಾರವಾಡ ಜಿಲ್ಲೆಯಲ್ಲೇ ಏಕೈಕ ಸಕ್ಕರೆ ಕಾರ್ಖಾನೆಯಾಗಿರುವ ಹಾವೇರಿಯ ಸಂಗೂರು ವರದಾ ಶುಗರ್ಸ್ ದಿವಾಳಿ ಬಿದ್ದಿದೆ; ಅದನ್ನೇ ನಂಬಿ ಬದುಕುತ್ತಿರುವ ಕಬ್ಬು ಬೆಳೆಗಾರರು, ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಇಬ್ಬರು ಕಾರ್ಮಿಕರು ಈಗಾಗಲೇ ನೇಣಿಗೆ ಕೊರಳೊಡ್ಡಿಯಾಗಿದೆ. ಸಾವಿರಾರು ಎಕರೆ ಕೃಷಿ ಭೂಮಿಗೆ ನೀರುಣಿಸಬೇಕಾದ ತುಂಗಾ ಎಡದಂಡೆ, ವರದಾ ಯೋಜನೆಗಳು ಕಾಗದದಲ್ಲಿ ಧೂಳು ತಿನ್ನುತ್ತಿವೆ. ಒಣ ಬೇಸಾಯದ ಕೃಷಿ ಕಾರ್ಮಿಕರು, ರೈತರು ಮಳೆ ಬೆಳೆಯಿಲ್ಲದೆ ಕಾಫಿ ಸೀಮೆಯತ್ತ ಗುಳೇ ಹೊರಟಿದ್ದಾರೆ. ನಿರುದ್ಯೋಗಿ ಯುವಕರ ಕೈಗೊಂದು ಕೆಲಸ ಕೊಡಬಲ್ಲ ಒಂದೇ ಒಂದು ಕೈಗಾರಿಕೆ ಸ್ಥಾಪನೆಯಾಗಿಲ್ಲ. ಸರ್ಕಾರಿ ಆಸ್ಪತ್ರೆಗಳು ಮೃತ್ಯುಕೂಪಗಳಾಗಿವೆ.

ಇಂತಹ ಪರಿಸ್ಥಿತಿಯಲ್ಲಿ ಯಾವ ಪುರುಷಾರ್ಥಕ್ಕಾಗಿ ಈ ಉತ್ಸವ ನಡೆಸಿದ್ದು ಎಂಬ ಪ್ರಶ್ನೆ ಹಾವೇರಿಯ ಗಲ್ಲಿಗಲ್ಲಿಗಳಲ್ಲಿ ಕೇಳಿಬರುತ್ತಿವೆ. ಆದರೆ ಉತ್ತರಿಸಬೇಕಿದ್ದ ಚೆಡ್ಡಿಗಳು ಹಾವೇರಿಯಿಂದ ಮಾಯವಾಗಿ ಉಪಚುನಾವಣೆಯ ಕ್ಷೇತ್ರಗಳಲ್ಲಿ ಭಿಕ್ಷೆ ಎತ್ತಲು ಹೋಗಿದ್ದರು. ಉತ್ಸವದ ಹೆಸರಿನಲ್ಲಿ ತಿಂದು ತೇಗಿದ ಅಧಿಕಾರಿಗಳು ಊರ ಹೊರಗಿನ ದೇವಗಿರಿ ಗುಡ್ಡದ ಜಿಲ್ಲಾ ಭವನದಲ್ಲಿ ಲಲ್ಲೆ ಹೊಡೆದರು.


ಉತ್ಸವಕ್ಕೆಂದು ಸರಕಾರ 10 ಲಕ್ಷ ರೂ. ಅನುದಾನ ಒದಗಿಸಿದೆ. ಆದರೆ ಜಿಲ್ಲಾಧಿಕಾರಿ ವಸ್ತ್ರದ, ಸಂಸ್ಕೃತಿ ಇಲಾಖೆಯ ಕಮಂಗಿ ಹಿರೇಗೌಡ ಸೇರಿಕೊಂಡು ಜಿಲ್ಲಾ ಪಂಚಾಯ್ತಿಯಿಂದ 5 ಲಕ್ಷ, ಹಾವೇರಿ-ರಾಣೆಬೆನ್ನೂರು ನಗರಸಭೆಯಿಂದ 4 ಲಕ್ಷ, ಪುರಸಭೆ-ಪಟ್ಟಣ ಪಂಚಾಯ್ತಿಯಿಂದ ತಲಾ ಒಂದೂವರೆ ಲಕ್ಷದಂತೆ 7 ಲಕ್ಷ ಸಂಗ್ರಹಿಸಿದರಲ್ಲದೆ ಗುತ್ತಿಗೆದಾರರು, ದಾನಿಗಳಿಂದ 15-20ಲಕ್ಷ ವಸೂಲಿ ಮಾಡಿದರು. ಹೀಗೆ ವಸೂಲಿ ಮಾಡಿದ ಹಣದ ಲೆಕ್ಕ ತೆಗೆದರೆ ಸಂಪೂರ್ಣ ಉತ್ಸವದ ಖರ್ಚು 60 ಲಕ್ಷ ದಾಟುತ್ತದೆ. ಆದರೂ ಡಿಸಿ ವಸ್ತ್ರದ ಬಳಗ "ಉತ್ಸವಕ್ಕೆ ಇನ್ನೂ 10 ಲಕ್ಷದಷ್ಟು ದುಡ್ಡು ಕೊರತೆಯಾಗಿದೆ" ಎಂದು ಕೇಳಿದವರ ಮುಂದೆ ಬೊಗಳೆ ಶುರುಹಚ್ಚಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ಬರಬಿದ್ದು ರೈತ ಪ್ರಾಣಬಿಟ್ಟಾಗ, ಸಂಗೂರು ವರದಾ ಶುಗರ್ಸ್ ಕಾರ್ಮಿಕರು ವೇತನಕ್ಕಾಗಿ ತಿಂಗಳಾನುಗಟ್ಟಲೆ ಹೋರಾಟ ಮಾಡಿ ಕೊನೆಗೆ ಆತ್ಮಹತ್ಯೆ ಮಾಡಿಕೊಂಡಾಗ, ಗೊಬ್ಬರ ಸಿಗದೆ ಬೆಳೆಹಾನಿಗೊಳಗಾದಾಗ ರೈತರು ಪರಿಹಾರಕ್ಕಾಗಿ ಪರಿಪರಿಯಾಗಿ ಬೇಡಿದರೂ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಹಿಂದೆಮುಂದೆ ನೋಡಿದ್ದ ಮಂತ್ರಿ ಉದಾಸಿ ಈಗ ಉತ್ಸವದ ಬಾಕಿ ಹಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸುತ್ತಾನಂತೆ. ಈತ ಜಿಲ್ಲೆಗಂಟಿದ ಶನಿ ಎನ್ನದೆ ವಿಧಿಯಿಲ್ಲ.




ವಸ್ತ್ರದ್





ಓಲೇಕಾರ್



ಹಿರೇಗೌಡ

ಹತ್ತಾರು ಗೊಂದಲ ವಿರೋಧಗಳನ್ನು ಸುತ್ತಿಕೊಂಡೇ ಪ್ರಾರಂಭವಾದ ಉತ್ಸವಕ್ಕೆ 16 ಸಮಿತಿ ಮತ್ತದರ ಉಪ ಸಮಿತಿಗಳನ್ನು ರಚನೆ ಮಾಡಿದ್ದು ಸ್ವಯಂಘೋಷಿತ ಸಾಹಿತಿ ಕೊರಗಲ್ ವಿರೂಪಾಕ್ಷಪ್ಪ, ಸಾಕ್ಷರತಾ ಯೋಜನೆಯನ್ನು ಹಳ್ಳ ಹಿಡಿಸಿದ ಐ.ಎಂ. ಲೋಕಾಪುರನಂತೂ ಉದಾಸಿ ಆಣತಿಯಂತೆ ಪ್ರತಿಯೊಂದು ಸಮಿತಿಗಳಲ್ಲಿ ಬಣಜಿಗರು, ಸರಗೆ ಜಂಗಮರುಗಳನ್ನು ತುಂಬಿಕೊಂಡಿದ್ದರು. ಇಂತಹ ಸ್ವಜಾತಿ ಉತ್ಸವಕ್ಕೆ ಮಂತ್ರಿ ಉದಾಸಿಯೇ ಗೌರವಾಧ್ಯ[...] ಹಾವೇರಿ ಶಾಸಕ ನೆಹರು ಓಲೇಕಾರ ಸ್ವಾಗತ ಸಮಿ[...] ಅಧ್ಯಕ್ಷ. ಇವರ ತಾಳಕ್ಕೆ ಕುಣಿಯುವ ಡಿಸಿ ವಸ್ತ್ರ[...] ಕಾರ್ಯಾಧ್ಯಕ್ಷ.


ಜನಪದ, ಜನಪರ ನೆಲೆಗಟ್ಟನ್ನು ಭದ್ರವಾಗಿ ಉಳಿ[...]ಕೊಂಡಿರುವ ಜಿಲ್ಲೆಯ ರಂಗಕರ್ಮಿಗಳು, ಸಾಹಿತಿಗಳು[...] ಪತ್ರಕರ್ತರು, ಅಷ್ಟೇ ಏಕೆ ಹಾವೇರಿಯನ್ನು ಜಿಲ್ಲೆಯ[...]ಗಿಸಲು ಹಗಲುರಾತ್ರಿ ಹೋರಾಟ ಮಾಡಿದ ಸಿದ್ದ[...] ಚಾಕೆಟ್ಟಿಯಂತಹ ಹೋರಾಟಗಾರರನ್ನು ಕಡೆಗಣಿಸಿ ತಮ[...] ಬೇಕಾದ ಬಿಜೆಪಿಯ ಚೆಡ್ಡಿ ಪಟಾಲಂಗಳನ್ನು ಹಾಗೂ[...] ಸ್ವಜಾತಿ ಜನರನ್ನು ಈ ಉತ್ಸವಕ್ಕೆ ಆಹ್ವಾನಿಸಲಾಗಿತ್ತು[...] ಆದ್ದರಿಂದ ಉದಾಸಿ, ಬೊಮ್ಮಾಯಿ, ಶಾಸಕರುಗಳಾ[...] ಓಲೇಕಾರ, ಸಜ್ಜನ, ತಿಳವಳ್ಳಿ ಶಿವಣ್ಣ, ಬ್ಯಾಡಗಿಯ[...] ಸುರೇಶಗೌಡ ಪಾಟೀಲರಂತಹ ಎಡಬಿಡಂಗಿಗಳ ವಿರು[...] ಇಡೀ ಜಿಲ್ಲೆಯ ಬುದ್ಧಿಜೀವಿಗಳು, ಪ್ರಗತಿಪರರು, ಪತ್ರಕರ್ತ[...] ಬೀದಿಗಿಳಿದು ಛೀ.. ಥೂ.. ಅಂತ ಕ್ಯಾಕರಿ[...] ಉಗಿದರು. ಆದರೆ ತಪ್ಪನ್ನು ತಿದ್ದಿಕೊಳ್ಳಲ[...] ಸಿದ್ಧವಿರದ ಚೆಡ್ಡಿಗಳು ಚಳವಳಿಗಾರರ ಮೇ[...] ಖಾಕಿ ಬಲ ಪ್ರಯೋಗ ಮಾಡಿದರು. ಕಾಂಗ್ರೆ[...] ಏಕೈಕ ಶಾಸಕ ಹಿರೇಕೆರೂರಿನ ಬಿ.ಸಿ[...] ಪಾಟೀಲರಂತೂ ಬಿಜೆಪಿಗರ ದುರ್ಬುದ್ಧಿ ಕಂಡು[...] ಉತ್ಸವದಿಂದ ಹೊರಗುಳಿಯುವ ನಿರ್ಧಾ[...] ಮಾಡಿದ್ದು ಔಚಿತ್ಯವೇ ಆಗಿತ್ತು.

ಸಾಂಸ್ಕೃತಿಕವಾಗಿ ಶ್ರೀಮಂತವಾಗಿರು[...] ಹಾವೇರಿ ಜಿಲ್ಲೆ ಭಾವೈಕ್ಯತೆಯ ಹರಿಕಾರ ಸಂ[...] ಶಿಶುನಾಳ ಷರೀಫ, ಕುಲ ಕುಲವೆನ್ನದಿರಿ ಎಂದು[...] ಸಾರಿದ ಕನಕದಾಸ, ಜನಕವಿ ಸರ್ವಜ್ಞ, ವಿ.ಕೃ[...] ಗೋಕಾಕ್, ಹಿರೇಮಲ್ಲೂರು ಈಶ್ವರನ್[...] ಸ್ವತಂತ್ರವೀರ ಮೈಲಾರ ಮಹದೇವ, ಸಂಗೂರು[...] ಕರಿಯಪ್ಪ ಹಳ್ಳಿಕೇರಿ ಗುದ್ಲೆಪ್ಪನಂತವರನ್ನು ನಾಡಿ[...] ಕೊಟ್ಟಿದೆ. ಇವತ್ತಿಗೂ ಈ ಜಿಲ್ಲೆಯಲ್ಲಿ ಕಲ[...] ಸಂಸ್ಕೃತಿ, ನಾಟಕ, ಶಿಲ್ಪಕಲೆಗಾಗಿಯೇ ಜೀವನ[...] ಮುಡುಪಾಗಿಟ್ಟ ಅನೇಕ ಮನಸ್ಸುಗಳ[...] ಉಸಿರಾಡುತ್ತಿವೆ. ಜಿಲ್ಲೆಯವರಾದ ಜನಪದ[...] ತಜ್ಞ ಶ್ರೀಶೈಲ ಹುದ್ದಾರ, ಕವಿ ಸತೀ[...] ಕುಲಕರ್ಣಿ, ಪಕ್ಕಣ ಅರಗೋಳ, 25 ವರ್ಷ[...] ದೊಡ್ಡಾಟ ಕಲೆಗಾಗಿಯೇ ಜೀವತೊಯ[...] ರಾಜ್ಯಪ್ರಶಸ್ತಿ ವಿಜೇತ ಟಿ.ಬಿ. ಸೋಲಬಕ್ಕನವರ[...] ಶಿಗ್ಗಾವಿಯ ಹಿರಿಯ ರಂಗಕರ್ಮಿ ವೀರಯ[...] ಉಜ್ಜಯಿನಿಮಠ, ರೇಣುಕಾ ಯಲ್ಲಮ್ಮದೇವಿಯ[...] ಸಾಂಸ್ಕೃತಿಕ ಮಹತ್ವವನ್ನು ಮೊಟ್ಟಮೊದ[...] ನಾಟಕವನ್ನಾಗಿ ರಚಿಸಿದ ಬಾಳೆಹಳ್ಳಿ ಮಠದ[...] ಒಂದು ಕಾಲದಲ್ಲಿ ತಮ್ಮ ಮಧುರ ಕಂಠದಿಂ[...] ನಾಡಿನ ಸಂಗೀತಾಸಕ್ತರ ಧ್ರುವವಾಗಿದ್ದ ಮರಿಯ[...] ಕಾಳೆ, ಸ್ಥಳದಲ್ಲೇ ಹಾಡುಕಟ್ಟಿ 100ಕ್ಕೂ ಹೆಚ್ಚು[...] ಕ್ರಾಂತಿಕಾರಿಗಳ ಕುರಿತು ಹಾಡುರಚಿಸಿ[...] ಹಿರಿಜೀವವನ್ನು ಗೌರವಿಸಿ ಅವರ ಸೇವೆಯನ್ನು[...] ನೆನೆಯಬೇಕಾದ ಉತ್ಸವ ಅಡ್ನಾಡಿಗಳ ಕೈಯ[...] ಅರ್ಥಹೀನವಾಗಿ ಹೋಯಿತು.

ಬಂದವರೆಲ್ಲ ಬೇವರ್ಸಿಗಳೇ ಎಂಬಂ[...] ಹಾವೇರಿ ಜಿಲ್ಲೆಯಾಗಿ ಹತ್ತು ವರ್ಷಗಳಾದರೂ[...] ಜನಪರ ಅಧಿಕಾರಿ, ಪ್ರತಿನಿಧಿಗಳ್ಯಾರೂ ಬರಲ[...] ಇಲ್ಲ. ಇದ್ದಿದ್ದರೆ ಉತ್ಸವದ ಬದಲಾಗಿ ದಶಮಾನೋತ್ಸವ[...] ಹೆಸರಿನಲ್ಲಿ ಜಿಲ್ಲೆ ನಡೆದುಬಂದ ಹಾದಿ ಕುರಿತು[...] ಅವಲೋಕಿಸುವಂತಾಗುತ್ತಿತ್ತು. ಆದರೆ ಉದಾಸಿ, ಸಜ್ಜನ[...] ಓಲೇಕಾರರಂತಹ ಜನಪೀಡಕರ ಬೆಂಗಾವಲಿಗೆ ನಿಲ್ಲು[...] ಹಸಿದು ಬಾಯಿತೆರೆದ ಅಧಿಕಾರಿಗಳೇ ವಕ್ಕರಿಸಿರುವ [...] ನೆಲದಲ್ಲಿ ಜನಪರ ಚಿಂತೆ ಮಾಡುವುದು ಅಪರಾಧವೆ[...] ಅದಕ್ಕೆ ಹಾವೇರಿ ಉತ್ಸವ ನಡೆದ ಬಗೆಯೇ ಜೀವಂ[...] ಸಾಕ್ಷಿ.

■ ಹುರುಳಿಕುಪ್ಪಿ ವಿನಯ[...]

## ಹಾಲುಂಡಿ ಬೊಮ್ಮಾಯಿ!



ಕಳೆದ ವಿಧಾನಸಭೆ ಚುನಾವಣಾ ಸಮಯದಲ್ಲಿ ಚೆಡ್ಡಿ ತೊಟ್ಟ ಶಿಗ್ಗಾವಿ ಶಾಸಕ ಕಂ ನೀರಿನ ಮಂತ್ರಿ ಬಸವರಾಜ ಬೊಮ್ಮಾಯಿ ಸದ್ಯ ಹಾವೇರಿ ಜಿಲ್ಲೆಯ ಹಾಲುಂಡಿ ಮಂತ್ರಿಯಂತೆ? "ಇಲ್ಲಿ ಎಲ್ಲಾ ಉದಾಸಿ ಅಣ್ಣಾರದೇ ನಡೀತವೆ. ಬ್ಯಾರೆಯವರೆಲ್ಲ ತಮ್ಮಾರೀ. ಹಾಗಾದರೆ ಉದಾಸಿದು ಉದ್ಧಾತು, ಬೊಮ್ಮಾಯಿದು ಗಿಡ್ಡಾದಂತಾಯಿತು" ಎಂದು ಅವರ ಪಕ್ಷದ ಕಾರ್ಯಕರ್ತರೇ ಹೇಳುತ್ತಿದ್ದಾರೆ.

ಅಂದಹಾಗೆ, ಬಿಳಿತಲೆ ಮಂತ್ರಿ ಉದಾಸಿ ಹೊರಡಿಸಿದ ಫರ್ಮಾನುಗಳನ್ನು ಪಾಲಿಸದ ಯಾವೊಬ್ಬ ಶಾಸಕ ಅಥವಾ ಮಂತ್ರಿಯೂ ಏಳಿಗೆಯಾಗಲ್ಲವಂತೆ. ಹಾಗಾದರೆ ಬೊಮ್ಮಾಯಿ ಬಸೂ ಉದಾಸಿಗೆ ಬತ್ತಿ ಇಟ್ಟಿದ್ದಾದರೂ ಎಲ್ಲಿ ಎಂಬ ಪ್ರಶ್ನೆ ಜಿಲ್ಲೆಯ ಜನರಲ್ಲಿದೆ.

ಇತ್ತೀಚೆಗೆ ನಡೆದ ಎಂಎಲ್‌ಸಿ ಚುನಾವಣೆಯಲ್ಲಿ ಬೊಮ್ಮಾಯಿ ತನ್ನ ಹಿಂಬಾಲಕ ಕುಂದಗೋಳದ ಮಾಜಿ ಶಾಸಕ ಎಂ.ಎಸ್. ಅಕ್ಕಿ ಅಥವಾ ಶಿಗ್ಗಾವಿಯ ಬೇವಿನ ಮರದ ಸೋಮಣ್ಣನಿಗೆ ಟಿಕೆಟ್ ತರಲು ಹರಸಾಹಸ ಪಟ್ಟರೂ ಉದಾಸಿ ಕ್ಯಾರೆ ಅನ್ನಲಿಲ್ಲವಂತೆ. ಆದರೆ ಅದೇ ಉದಾಸಿ ತನ್ನ ಜೊತೆ ಸಂಗೂರ ಶುಗರ್ಸ್ ದಿವಾಳಿಯಾಗಲು ಶ್ರಮದಾನ ಸಲ್ಲಿಸಿದ ಶಿವರಾಜ ಸಜ್ಜನನಿಗೆ ಒಂದೇ ದಿನದಲ್ಲಿ ಬಿ ಫಾರ್ಮ್ ತಂದು ಕೊಟ್ಟರಂತೆ. ಅಂದರೆ ದಳ ಬಿಟ್ಟು ಗಳಗಳ ಅಳುತ್ತಾ ಬಿಜೆಪಿಗೆ ಬಂದು ಮಂತ್ರಿಯಾದರೂ ಬಸವರಾಜ ಬೊಮ್ಮಾಯಿ ಈಗ ಹಾವೇರಿ ಜಿಲ್ಲೆಯಲ್ಲಿ ಹಾಲುಂಡಿ ಮಂತ್ರಿನೇ ಅಂದಂಗಾಯ್ತು!

# ದಾವಣಗೆರೆ: ಚೆಡ್ಡಿಗಳ ಬಣ್ಣ ಬಯಲು

ಸದಾ ಕುತಂತ್ರ, ಕುಯುಕ್ತಿಗಳನ್ನೇ ಉಸಿರಾಗಿಸಿಕೊಂಡಿರುವ ಕೋಮುವಾದಿಗಳಿಗೆ ದಾವಣಗೆರೆಯಲ್ಲಿ ಡಿ. 17 ರಂದು ತಾವೇ ಸೃಷ್ಟಿಸಿದ ಕುತಂತ್ರದ ಗೂಟವೊಂದು ರಿವರ್ಸ್ ಹೊಡೆದು ಅವರಿಗೇ ಬಡಿದುಕೊಳ್ಳಬಹುದಾದ ಘಟನೆ ನಡೆದಿದೆ.

ಡಿ. 17 ರಂದು ಜಸ್ಟೀಸ್ ಸೋಮಶೇಖರ್ ಆಯೋಗ ದಾವಣಗೆರೆಗೆ ಬಂದು ಬೀಗಮುದ್ರಿತ ಚರ್ಚುಗಳ ತೆರವಿನ ಕುರಿತು ಯಾರೂ ಈಡೇರಿಸಲಾಗದ 19 ಷರತ್ತುಗಳನ್ನು ಹೇರಿತ್ತು. ಆದರೆ ಈ ಷರತ್ತುಗಳ ಅನುಸಾರವಾಗಿ ಬೀಗಮುದ್ರೆ ತೆರವುಗೊಳಿಸಲು ತಾತ್ಕಾಲಿಕ ಪರಿಹಾರವನ್ನು ಸೂಚಿಸಿದ್ದೇ ಸಂಘ ಪರಿವಾರಿಗಳ ಚೆಡ್ಡಿಯೊಳಗೆ ತೊಣಚಿ ಹೊಕ್ಕಂತಾಗಿ ಅಂದು ಸೋಮಶೇಖರ್‌ರವರನ್ನು ಘೇರಾವ್ ಮಾಡಿದ್ದರು. ಇಷ್ಟಕ್ಕೆ ಸುಮ್ಮನಾಗದ ಚೆಡ್ಡಿಗಳು ಅದೇ ದಿನ ರಾತ್ರಿ ಸುಮಾರು 12 ಗಂಟೆ ಸಮಯದಲ್ಲಿ ಕರುಣಾಕರ್ ಮತ್ತು ರಾಜಶೇಖರ್ ಎಂಬ ಇಬ್ಬರು ಪಾಸ್ಟರುಗಳು ಬಸವರಾಜಯ್ಯ (ಸೆಪ್ಟೆಂಬರ್ 23 ರಂದಿನ ಕೋಮು ಸೌಹಾರ್ದ ವೇದಿಕೆ ಕಾರ್ಯಕ್ರಮಕ್ಕೆ ಅಡುಗೆ ಮಾಡುತ್ತಿದ್ದ ಸ್ಥಳದ ಹತ್ತಿರ ನಡೆದ ಗಲಾಟೆಗೆ ನೇತೃತ್ವ ವಹಿಸಿದವನು) ಎನ್ನುವವನ ಮೇಲೆ ಹಲ್ಲೆ ನಡೆಸಿದ್ದಾರೆಂದು ದಾವಣಗೆರೆಯ KTJ ನಗರ ಪೊಲೀಸ್ ಠಾಣೆಯಲ್ಲಿ ಕೋಮುವಾದಿಗಳು ಸುಳ್ಳುದೂರು ದಾಖಲಿಸಿದ್ದಾರೆ. ನಂತರದ ಎರಡು ದಿನಗಳ ಕಾಲ ಮಾಧ್ಯಮಗಳ ಮೂಲಕ 'ಹಿಂದೂ ಪರ ಸಂಘಟನೆಯ ಕಾರ್ಯಕರ್ತನ ಮೇಲೆ ಹಲ್ಲೆ' ಎಂದು ಮುಂತಾಗಿ ಪ್ರಚಾರ ನಡೆದುಕೊಂಡಿದ್ದಾರೆ. ಈ ಘಟನೆಗೆ ಸಂಬಂಧಿಸಿ ಪ್ರಮೋದ್ ಮುತಾಲಿಕ್ ಎಂಬ ಹರುಕುಬಾಯಿ ಶೂರ 'ಕೋಮು ಸೌಹಾರ್ದ ವೇದಿಕೆ ಸತ್ತು ಹೋಗಿದೆ, ಹಿಂದೂ ಒಬ್ಬನ ಮೇಲಾದ ಹಲ್ಲೆಯನ್ನು ಈ ವೇದಿಕೆ ಖಂಡಿಸುವುದಿಲ್ಲ, ಇವರು ಭಯೋತ್ಪಾದಕ ಅಜ್ಮಲ್ ಕಸಬ್‌ನ ಪ್ರತಿಪಾದಕರು' ಎಂದು ಕಾರಿಕೊಂಡಿದ್ದಾನೆ.

## ನಡೆದದ್ದೇನು?

ಅಂದು ರಾತ್ರಿ 12 ಗಂಟೆಯ ಸಮಯದಲ್ಲಿ ಲೇಬರ್ ಕಾಲೋನಿಯ 5 ನೇ ಕ್ರಾಸಿನಲ್ಲಿ ಬಸವರಾಜಯ್ಯ ಎನ್ನುವವನು ಕಂಠಪೂರ್ತಿ ಕುಡಿದು ಅದೇ ಕಾಲೋನಿಯ ಇತರರೊಂದಿಗೆ ಜಗಳವಾಡುತ್ತಿದ್ದಾಗ ಕೆಟಿಜೆ ನಗರ ಪೊಲೀಸ್ ಠಾಣೆಯ ಪೇದೆಯೊಬ್ಬರು ಸ್ಥಳಕ್ಕೆ ಬಂದು ಮನೆಗೆ ಹೋಗಲು ಬಸವರಾಜಯ್ಯನಿಗೆ ತಿಳಿಹೇಳಿದ್ದಾರೆ. ಪೇದೆಯ ಮಾತಿಗೆ ಯಾವುದೇ ಬೆಲೆ ಕೊಡದ ಬಸವರಾಜಯ್ಯ ಆತನನ್ನೇ ಹೀನಾಯವಾಗಿ ಬೈದಿದ್ದಾನೆ. ಇದರಿಂದ ಅವಮಾನಗೊಂಡ ಪೊಲೀಸ್ ಪೇದೆ ಬಸವರಾಜಯ್ಯನನ್ನು ನೇರ ಕೆ.ಟಿ.ಜೆ. ನಗರದ ಪೊಲೀಸ್ ಠಾಣೆಗೆ ಎತ್ತಾಕಿಕೊಂಡು ಬಂದಿದ್ದಾನೆ. ಆ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಮಂಜುನಾಥ್ ಬಸವರಾಜಯ್ಯನ ಕುರಿತು "ಮದ್ಯಪಾನ ಮಾಡಿ ಪಾನಮತ್ತನಾಗಿ ಇತರೆಯವರೊಂದಿಗೆ ಜಗಳ ಮಾಡಿಕೊಂಡಿದ್ದಾನೆ" ಎಂದು ದಾಖಲಿಸಿದ್ದಾರಲ್ಲದೆ ಇವನಿಗೆ ವೈದ್ಯಕೀಯ ಪರೀಕ್ಷೆ ಮಾಡಿ ವರದಿ ನೀಡಲು ಚಿಗಟೇರಿ ಜನರಲ್ ಆಸ್ಪತ್ರೆಯ ನಿವಾಸಿ ವೈದ್ಯಾಧಿಕಾರಿಯನ್ನು ಕೋರಿ ಲಿಖಿತ ಪತ್ರದೊಂದಿಗೆ ಚಿಗಟೇರಿ ಆಸ್ಪತ್ರೆಗೆ ಬಸವರಾಜಯ್ಯನನ್ನು ಕಳಿಸಿದ್ದಾರೆ. ಇವನನ್ನು ಪರೀಕ್ಷೆ ಮಾಡಿದ ವೈದ್ಯರು "ಬಸವರಾಜಯ್ಯ ಮದ್ಯಪಾನ ಮಾಡಿದ್ದಾನೆ" ಎಂದು ದಾಖಲಿಸಿ ಇವನ ರಕ್ತವನ್ನು ಪರೀಕ್ಷೆಗೆ ಕಳಿಸಿದ್ದಾರೆ. ಇದಿಷ್ಟು ವಾಸ್ತವವಾಗಿ ನಡೆದಿದ್ದ ಘಟನೆ.

## ಸತ್ಯ ತಿರುಚಿದ ಕೋಮುವಾದಿಗಳು

ಮರುದಿನ ಆಗಮಿಸಿದ ಕೋಮುವಾದಿಗಳು ವಾಸ್ತವವಾಗಿ ನಡೆದ ಘಟನೆಯನ್ನು ತಿರುಚಿ ಪೊಲೀಸ್ ಇಲಾಖೆಯ ಮೇಲೆ ಒತ್ತಡ ತಂದು 'ಕರುಣಾಕರ್ ಮತ್ತು ರಾಜಶೇಖರ್' ಚೂಪಾದ ಹುಕ್‌ಗಳಿಂದ ಹಲ್ಲೆ ನಡೆಸಿದ್ದಾರೆಂದು ಸುಳ್ಳು ದೂರನ್ನು ದಾಖಲಿಸಿದ್ದಲ್ಲದೆ ಕುಡಿದಿದ್ದ ಬಸವರಾಜಯ್ಯನನ್ನು ರೋಗಿ ಎಂದು ದಾಖಲಿಸಿಕೊಳ್ಳಲು ನಿರಾಕರಿಸಿದ ವೈದ್ಯರುಗಳನ್ನು ದಬಾಯಿಸಿ 'ಹಿಂದೂ ಸಂಘಟನೆಯ ಕಾರ್ಯಕರ್ತನ ಮೇಲಿನ ಹಲ್ಲೆಗೆ ಧಿಕ್ಕಾರ' ಎಂದು ಆಸ್ಪತ್ರೆಯಲ್ಲಿ ಅರಚಾಡಿ ಮಾಧ್ಯಮದವರನ್ನು ಕರೆಸಿ ಫೋಜುಗಳನ್ನು ನೀಡಿ ಹಸಿ ಸುಳ್ಳನ್ನು ಸತ್ಯವೆಂಬಂತೆ ಪ್ರಚಾರ ನೀಡಿದ್ದಾರೆ. ಇದರ ಫಲವಾಗಿ ಒತ್ತಡಕ್ಕೊಳಗಾದ(?) ಪೊಲೀಸ್ ಇಲಾಖೆಯು ನಿರಪರಾಧಿಗಳಾದ ಇಬ್ಬರು ಕ್ರೈಸ್ತರ ಮೇಲೆ ದೂರು ದಾಖಲಿಸಿದೆ. ಇವರಿಗೆ ನಿರೀಕ್ಷಣಾ ಜಾಮೀನು ತೆಗೆದುಕೊಳ್ಳಲು ಎಫ್.ಐ.ಆರ್. ಮುಂತಾದ ದಾಖಲೆಗಳನ್ನು ತೆಗೆದುಕೊಳ್ಳುವಾಗ ಕೋಮುವಾದಿ ಸಂಘಟನೆಗಳ ವಕೀಲರು ಕ್ಯಾತೆ ತೆಗೆದಿದ್ದಾರೆ. ಸುಳ್ಳು ಕೇಸು ಹಾಕಿರುವ ಬಗ್ಗೆ ದಾಖಲೆಗಳನ್ನು ಕೊಟ್ಟರೂ ಅವುಗಳನ್ನು ಪರಿಶೀಲಿಸದೆ ಡಿ. 22 ರಂದು ನ್ಯಾಯಾಧೀಶರು ಡಿ. 27 ಕ್ಕೆ ಮುಂದೂಡಿ ಈ ಇಬ್ಬರು ಪಾಸ್ಟರುಗಳು ತಮ್ಮ ಕುಟುಂಬದವರೊಂದಿಗೆ ಸೇರಿ ಕ್ರಿಸ್‌ಮಸ್ ಹಬ್ಬವನ್ನು ಆಚರಿಸದಂತೆ ಮಾಡಿದ್ದಾರೆ.

## ಸತ್ಯವನ್ನು ಹೊರಗೆಡಹಿದ 'ಲಂಕೇಶ್'

ಈ ಘಟನೆಯ ಬಗ್ಗೆ ಕೆಲವು ಸೂಕ್ಷ್ಮ ವಿಷಯಗಳು ತಿಳಿದಿದ್ದರಿಂದ 'ಲಂಕೇಶ್' ವಾರ ಪತ್ರಿಕೆ ಚಿಗಟೇರಿ ಜನರಲ್ ಆಸ್ಪತ್ರೆಯ ನಿವಾಸಿ ವೈದ್ಯಾಧಿಕಾರಿಗಳನ್ನು ಸಂಪರ್ಕಿಸಿ ಕೆ.ಟಿ.ಜೆ. ನಗರ ಪೊಲೀಸ್ ಠಾಣೆಯ ಎಸ್.ಐ. ಮಂಜುನಾಥ್ ಬಸವರಾಜಯ್ಯನ ಬಗ್ಗೆ RMO ಗೆ ಬರೆದ ಪತ್ರದ ನಕಲು ಹಾಗೂ ಬಸವಾಜಯ್ಯನನ್ನು ಪರೀಕ್ಷಿಸಿ ಮದ್ಯಪಾನ ಮಾಡಿದ್ದಾರೆನ್ನುವ ವೈದ್ಯಕೀಯ ದಾಖಲೆಗಳನ್ನು ಸಂಗ್ರಹಿಸಿ ಕೋಮು ಸೌಹಾರ್ದ ವೇದಿಕೆಯ ಮೂಲಕ ಮಾಧ್ಯಮಗಳ ಮುಂದೆ ಪ್ರದರ್ಶಿಸಿ ಇದೊಂದು ಅಪ್ಪಟ ಸುಳ್ಳು ಕೇಸು ಎಂದು ಸಾಬೀತುಪಡಿಸಿದಾಗ ಕೋಮುವಾದಿಗಳು ಅಂದು ಸುಟ್ಟ ಬೆಕ್ಕಿನಂತಾಗಿದ್ದಾರೆ. ಜೊತೆಗೆ ಇವರು ಸೃಷ್ಟಿಸಿದ ಸುಳ್ಳಿನ ಗೂಟ ಬರುವ ದಿನಗಳಲ್ಲಿ ಇವರಿಗೇ ಬಡಿದುಕೊಳ್ಳುವಂತಾಗಿದೆ.

ಇಷ್ಟೆಲ್ಲಾ ಸತ್ಯಾಂಶಗಳು ಬಹಿರಂಗಗೊಂಡಿರುವುದರಿಂದ ಜಿಲ್ಲಾ ಎಸ್ಪಿ ಸಂದೀಪ್ ಪಾಟೀಲ್‌ರವರು ಕೋಮುವಾದಿಗಳ ಒತ್ತಡಕ್ಕೆ ಮಣಿಯದೆ ಕರುಣಾಕರ್ ಹಾಗೂ ರಾಜಶೇಖರ್ ಮೇಲೆ ದಾಖಲಿಸಿರುವ ಸುಳ್ಳು ದೂರುಗಳಿಗೆ 'ಬಿ' ರಿಪೋರ್ಟ್ ಹಾಕಲು ಕೆಳಗಿನವರಿಗೆ ಸೂಚಿಸಬೇಕಾಗಿದೆ. ಇಲ್ಲದಿದ್ದರೆ ಪೊಲೀಸ್ ಇಲಾಖೆಯ ಬಗ್ಗೆ ಜನರಲ್ಲಿರುವ ಸಣ್ಣ ನಂಬಿಕೆಯೂ ಕಳೆದುಹೋಗುತ್ತದೆ.

■ ಚಂದ್ರಶೇಖರ ತೋರಣಘಟ್ಟ

---

ಕನ್ನಡನಾಡಿನಲ್ಲಿ ತೆಲುಗು ಬಿದ್ದಗಳು ಪ್ರಾರಂಭಿಸಿದ ಆಪರೇಷನ್ ಕ'ಮಲ' ಗಮಲು ರಾಜ್ಯಾದ್ಯಂತ ಹರಡಿ ಗಬ್ಬು ನಾರುತ್ತಿದೆ. ರಾಜಕೀಯಾಧಿಕಾರ ಹಿಡಿಯಲು, ಕುರ್ಚಿ ಕೆಡವಲು, ಕುರ್ಚಿ ಏರಲು – ಎಲ್ಲದಕ್ಕೂ ಇದೇ ಆಪರೇಷನ್ ಮಾದರಿಯಾಗಿಬಿಟ್ಟಿದೆ. ಮೊನ್ನೆ ಕೊಳ್ಳೆಗಾಲದಲ್ಲಿ ನಡೆದ ಒಂದು ಘಟನೆಯನ್ನೇ ನೋಡಿ. ಕೊಳ್ಳೇಗಾಲ ನಗರಸಭೆಯ ಆಯುಕ್ತ ಎನ್.ಪ್ರಕಾಶ್‌ನ ಸೇಡಿನ ರಾಜಕಾರಣಕ್ಕೆ ನಿಷ್ಕಳಂಕ ನಗರಸಭಾಧ್ಯಕ್ಷ ಸುರೇಶ್ ನಾಯಕ್ ಬಲಿಯಾಗಿದ್ದಾರೆ.

ಈ ಹಿಂದೆ ಎಂ.ವಿ.ಪರಮೇಶ್ವರಯ್ಯ ಎಂಬ ಅಧ್ಯಕ್ಷ ಕಾಂಗ್ರೆಸ್‌ನವರ ಷಡ್ಯಂತ್ರದಿಂದಾಗಿಯೇ ಕುರ್ಚಿ ಕಳೆದುಕೊಂಡಿದ್ದರು. ಈಗ ಸುರೇಶ್ ನಾಯಕ್ ಬಲಿಪಶುವಾಗಿದ್ದಾರೆ. ಆದರೆ ಈ ಬಾರಿಯ ವಿಶೇಷ ಎಂದರೆ, ಸುರೇಶ್ ನಾಯಕ್ ಕುರ್ಚಿ ಖಾಲಿ ಮಾಡಿಸಿದ್ದು ಯಾವುದೇ ರಾಜಕೀಯ ಪಕ್ಷವಲ್ಲ, ಯಾವುದೇ ಎಮ್ಮೆಲ್ಲೆ-ಎಂಪಿಯಲ್ಲ, ರಾಜಕಾರಣಿಗಳಿಗಿಂತಲೂ ಜೋರಾಗಿ ರಾಜಕಾರಣ ಮಾಡುವ ನಗರಾಯುಕ್ತ ಎನ್.ಪ್ರಕಾಶ್.



ಸುರೇಶ್‌ನಾಯಕ್

### ಯಾಕಿಷ್ಟು ಜಿದ್ದು?

ಕುಮಾರ್ ಅದಕ್ಕೆ ಜಗ್ಗಲಿಲ್ಲ, ಈ ಅಕ್ರಮ ಒತ್ತುವರಿಯ ವಿರುದ್ಧ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿಕೊಂಡರು. ಎಲ್ಲಿಯ ತನಕ ಸುರೇಶ್ ಕುಮಾರ್ ಅಧ್ಯಕ್ಷಗಾದಿಯಲ್ಲಿ ಕೂತಿರುತ್ತಾರೋ ಅಲ್ಲಿಯತನಕ ತಮ್ಮ ಆಟ ನಡೆಯದೆಂಬುದು ಪ್ರಕಾಶ್ ಮತ್ತು ಸುದರ್ಶನ ಗೌಡರಿಗೆ ಅರ್ಥವಾಯಿತು. ಆದ್ದರಿಂದ, ಸುರೇಶ್ ಕುಮಾರ್‌ನನ್ನೇ ಖೆಡ್ಡಕ್ಕೆ ಕೆಡವಲು ಷಡ್ಯಂತ್ರ ರೂಪಿಸಿದರು. ಆಪರೇಷನ್ ಕ'ಮಲ'ದ ಮಾದರಿಯಲ್ಲಿ ಯಾವ್ಯಾವ ಸದಸ್ಯನಿಗೆ ಎಷ್ಟೆಷ್ಟು ಹಡಬೆ ದುಡ್ಡು ಕೊಟ್ಟು ಖರೀದಿಸಿದರೋ ಗೊತ್ತಿಲ್ಲ, ಅಂತೂ ಅವಿಶ್ವಾಸ ಗೊತ್ತುವಳಿ ಪಾಸು ಮಾಡಿಸಿ ಸುರೇಶ್‌ಕುಮಾರ್‌ನನ್ನು ಕುರ್ಚಿಯಿಂದ ಕೆಳಗೆ ಕೆಡವಿದರು.

### ರಾಜಕಾರಣಿಯೋ, ಅಧಿಕಾರಿಯೋ?

ನಗರಸಭಾ ಆಯುಕ್ತ ಪ್ರಕಾಶನ ಸೇಡಿನ ಮತ್ತು ಮೇಯುವ ಪರಿಯನ್ನು ಕಂಡು ಈ ಹಿಂದೆ ಇವನೇನಾದರೂ ರಾಜಕಾರಣಿಯಾಗಿದ್ದನಾ ಎಂದು ಅನುಮಾನ ಬರುತ್ತದೆ. ಈ ಹಿಂದೆ ಈತ ಗುಂಡ್ಲುಪೇಟೆಯಲ್ಲಿ ಪುರಸಭೆಯ ಮುಖ್ಯಾಧಿಕಾರಿಯಾಗಿದ್ದಾಗ ಮಾಡಬಾರದ ಕೆಲಸಗಳನ್ನೆಲ್ಲಾ ಮಾಡಿ ಅರ್ಧ ಗುಂಡ್ಲುಪೇಟೆಯನ್ನೇ ನುಂಗಿದ್ದ. ಪುರಸಭೆಯ ಸದಸ್ಯರೇ ಒಬ್ಬರಿಗೊಬ್ಬರು ಕಿತ್ತಾಡಿಕೊಳ್ಳುವಂತೆ ಮಾಡಿ ತನ್ನ ಲೂಟಿಯನ್ನು ನಿರಾತಂಕವಾಗಿ ಮುಂದುವರೆಸಿಕೊಂಡು ಬಂದಿದ್ದ. ಗುಂಡ್ಲುಪೇಟೆಯಲ್ಲಿ ಮೇಯಲು ಇನ್ನೇನು ಬಾಕಿ ಉಳಿದಿಲ್ಲ ಎಂಬುದು ಅರ್ಥವಾದ ಮೇಲೆ ಈಗ ಒಂದು ವರ್ಷದಿಂದೀಚೆಗೆ ಕೊಳ್ಳೆಗಾಲದಲ್ಲಿ ವಕ್ಕರಿಸಿಕೊಂಡಿದ್ದಾನೆ.


ಪ್ರಕಾಶ್

# ಚಾಮರಾಜನಗರ: ಪ್ರಕಾಶನ ಸೇಡಿಗೆ ಸುರೇಶ್ ನಾಯಕ್ ಬಲಿ!

ಅಸಲಿಗೆ ನಗರಸಭಾಧ್ಯಕ್ಷ ಸುರೇಶ್ ಕುಮಾರ್ ಮೇಲೆ ಈ ಪಾಟ ಸೇಡು ತೀರಿಸಿಕೊಳ್ಳಲು ಆಯುಕ್ತ ಪ್ರಕಾಶ್‌ಗೆ ಕಾರಣ ಇಲ್ಲದಿಲ್ಲ. ಮುಢಾರಿ ಪ್ರಕಾಶ್ ಎಂದೇ ಹೆಸರಾಗಿರುವ ಈತ ಸರ್ಕಾರಿ ಆಸ್ತಿಯನ್ನು ನುಂಗಿ ನೀರು ಕುಡಿಯುವಲ್ಲಿ ಎಕ್ಸ್‌ಪರ್ಟ್. ಈತ ನಗರಸಭಾ ವ್ಯಾಪ್ತಿಯಲ್ಲಿ ಬರುವ ಅಕ್ರಮ ಕಟ್ಟಡಗಳಿಗೆ ಪರವಾನಗಿ ನೀಡುವುದನ್ನೇ ದಂಧೆ ಮಾಡಿಕೊಂಡು ಕರೋಡ್‌ಪತಿಯಾಗಿದ್ದಾನೆ. ನಗರಸಭೆಗೆ ಆರಿಸಿ ಬಂದಿರುವ ಜನಪ್ರತಿನಿಧಿಗಳಿಗೂ ಒಂದಿಷ್ಟು ತಿನ್ನಿಸಿ ಅವರನ್ನು ತನ್ನ 'ಸರ್ಕಾರಿ ಆಸ್ತಿ ಸ್ವಾಹಾ' ಕಾರ್ಯಕ್ರಮದಲ್ಲಿ ಭಾಗಿಗಳನ್ನಾಗಿ ಮಾಡಿಟ್ಟುಕೊಂಡಿದ್ದಾನೆ. ಅದರಲ್ಲೂ ನಗರಸಭಾ ಸದಸ್ಯ ಸುದರ್ಶನ ಗೌಡನಂಥ ಕಮಂಗಿಗಳನ್ನು ಬಗಲಲ್ಲಿಟ್ಟುಕೊಂಡು ಕೊಳ್ಳೇಗಾಲಕ್ಕೆ ಒಂದು ಗತಿ ಕಾಣಿಸುವುದಕ್ಕೇ ನಿಂತಂತಿದೆ.


ಪುಟ್ಟರಂಗಶೆಟ್ಟಿ


ಸುದರ್ಶನ್‌ಗೌಡ

ಇಂತಹ ಕೊಳ್ಳೆಗೆ ಅಪಸ್ವರವೆತ್ತಿದ್ದೇ ಅಧ್ಯಕ್ಷ ಸುರೇಶ್ ಕುಮಾರ್ ಮಾಡಿದ ಮೊದಲ ತಪ್ಪು. ಅಸಲಿಗೆ ನಡೆದದ್ದೇನೆಂದರೆ, ಪ್ರಕಾಶ್ ಮತ್ತು ಸುದರ್ಶನ ಗೌಡ ಎಂಬ ಹಗಲುಗಳ್ಳರ ಜೋಡಿ ಹಳೆಯ ನಗರಸಭಾ ಬಸ್ ನಿಲ್ದಾಣದ ಹತ್ತಿರವಿದ್ದ ನಗರಸಭೆಯ ಆಸ್ತಿಯನ್ನು ಒತ್ತುವರಿ ಮಾಡಿಕೊಂಡು, ಅಲ್ಲಿ ಕಟ್ಟಡ ನಿರ್ಮಿಸಿ ಅದನ್ನು ಹನ್ನೊಂದು ಲಕ್ಷ ರೂಪಾಯಿಗೆ ಮಾರಿಕೊಂಡು ತಿಂದಿದ್ದರು. ಇದು ಅಧ್ಯಕ್ಷರಾಗಿದ್ದ ಸುರೇಶ್ ಕುಮಾರ್ ಗಮನಕ್ಕೆ ಬಂದಿತು. ತಮ್ಮ ಅಕ್ರಮವನ್ನು ಮುಚ್ಚಿಟ್ಟು ಒಪ್ಪಿಗೆ ನೀಡುವಂತೆ ಅವರ ಮೇಲೆ ಪ್ರಕಾಶ್ ಮತ್ತು ಸುದರ್ಶನ ಗೌಡರ ಜೋಡಿ ಒತ್ತಡ ಹೇರಿತು. ಬರುವ ಹಡಬೆ ದುಡ್ಡಿನಲ್ಲಿ ಪಾಲು ಕೊಡುವುದಾಗಿ ಆಮಿಷ ಒಡ್ಡಿತು. ಆದರೆ, ಸುರೇಶ್

ಪ್ರಕಾಶನ ನಿಜವಾದ ಹೆಸರು ಪೊನ್ನ. ತನ್ನ ಹೆಸರನ್ನು ಪ್ರಕಾಶ್ ಎಂದು ಬದಲಿಸಿಕೊಂಡು ಯಾರ್ಯಾರದ್ದೋ ಕೈಕಾಲು ಹಿಡಿದು ಕೆಎಎಸ್ ಪಾಸು ಮಾಡಿಸಿಕೊಂಡು ನಗರಸಭೆಯ ಆಯುಕ್ತ ಸ್ಥಾನಕ್ಕೆ ಬಂದು ಕುಳಿತಿದ್ದಾನೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಒಂದು ದುರಂತ ಎಂದರೆ, ಈತ ಎಂಥ ನುಂಗಣ್ಣ ಎಂಬುದು ಗೊತ್ತಿದ್ದರೂ ಕೊಳ್ಳೇಗಾಲದ ಎಮ್ಮೆಲ್ಲೆ ಸಿ.ಪುಟ್ಟರಂಗಶೆಟ್ಟಿ ಕಿಮಿಕ್ಕೆನ್ನುತ್ತಿಲ್ಲ. ಪ್ರಕಾಶನ ಹಡಬೆ ದುಡ್ಡಿನಲ್ಲಿ ಎಮ್ಮೆಲ್ಲೆಗೂ ಪಾಲಿದೆಯಾ ಅಥವ ಎಮ್ಮೆಲ್ಲೆಗೂ ಮೀರಿ ಪ್ರಕಾಶ ಬೆಳೆದಿದ್ದಾನಾ ಎಂಬುದು ಗೊತ್ತಾಗುತ್ತಿಲ್ಲ.

ಒಂದಂತೂ ಸ್ಪಷ್ಟ. ಇನ್ನೊಂದಿಷ್ಟು ವರ್ಷ ಈತ ಇಲ್ಲೇ ಇದ್ದರೆ, ಕೊಳ್ಳೇಗಾಲ ನಗರಸಭಾ ವ್ಯಾಪ್ತಿಯಲ್ಲಿರುವ ಎಲ್ಲಾ ಸರ್ಕಾರಿ ಜಮೀನು ಮಾಯವಾಗಿಬಿಡುತ್ತದೆ. ಅಂತೆಯೇ ಪ್ರಕಾಶ್ ಕೋಟ್ಯಾಧಿಪತಿಯಾಗಿ ತೆಲುಗು ಗಣಿ ಬಿದ್ದರಂತೆ ರಾಜ್ಯ ರಾಜಕಾರಣ ಪ್ರವೇಶಿಸುತ್ತಾನೆ.

■ ಕೊಳ್ಳೆಗಾಲ ಚಿಕ್ಕಮಾಳಿಗೆ


---

▶▶▶ ತ

ಕಣ್ಣೀರಿನ ಕೋಡಿಯಲ್ಲಿ ಬದುಕುವಂತೆ ಮಾಡು. ...ದಕ್ಕಾಗಿ ನಾವು ಪ್ರೀತಿಯಿಂದ ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದೇವೆ.

ಇದೆಲ್ಲವನ್ನಲ್ಲವೇ ನೀವು ಆಶಿಸಿದ್ದು, ಅದಕ್ಕೆಂದು ಪ್ರಾರ್ಥಿಸಿದ್ದು? ಈಗ ಹೇಳಿ, ಈ ಪ್ರಾರ್ಥನೆಯನ್ನು ...ಈಡೇರಿಸಬೇಕೆ? ಭಗವಂತನ ದೂತನಾದ ನಾನು ನಿಮ್ಮ ...ದೇಶಕ್ಕಾಗಿ ಕಾಯುತ್ತಿದ್ದೇನೆ!"

ಆದರೆ ಆತ ಹೇಳಿದ್ದು ಯಾರಿಗೂ ಅರ್ಥವಾಗ...ದ್ದರಿಂದ ಆ ಅಪರಿಚಿತ ಹುಚ್ಚನೆಂದು ಅಲ್ಲಿದ್ದ ಜನರೆಲ್ಲ ...ಭಾವಿಸಿದರು.



* * * * * *

ಅಮೆರಿಕದ ಖ್ಯಾತ ಲೇಖಕ ಮಾರ್ಕ್ ಟ್ವೈನ್ ಅವರು ಬರೆದಿದ್ದ ಸಣ್ಣ ಕತೆಯೊಂದರ ಅನುವಾದ ಇದು. 1899 ರಲ್ಲಿ ಫಿಲಿಫೈನ್ಸ್ ಮೇಲೆ ಅಮೆರಿಕ ಯುದ್ಧ ಸಾರಿದ ಸಂದರ್ಭದಲ್ಲಿ ಆ ಯುದ್ಧವನ್ನು ವಿರೋಧಿಸಿ ಟ್ವೈನ್ ಈ ಕತೆಯನ್ನು ಬರೆದಿದ್ದರು. ಆದರೆ ಅದನ್ನು ಪ್ರಕಟಿಸಲು ಪ್ರಕಾಶಕರು ನಿರಾಕರಿಸಿದ್ದರಿಂದ ಟ್ವೈನ್ ತಾವು ಸತ್ತ ನಂತರ ಅದನ್ನು ಪ್ರಕಟಿಸಬೇಕೆಂದು ಉಯಿಲು ಬರೆದಿದ್ದರು. ಅದಕ್ಕೆ ಟ್ವೈನ್ ನೀಡಿದ್ದ ಕಾರಣ "ನಾನು ಸತ್ಯವನ್ನು ನುಡಿದಿದ್ದೇನೆ. ಸತ್ತ ಮನುಷ್ಯರು ಮಾತ್ರ ಈ ಜಗತ್ತಿನಲ್ಲಿ ಸತ್ಯವನ್ನು ನುಡಿಯುತ್ತಾರೆ."


ಈಗ ನಮ್ಮ ದೇಶದ ಹಲವರು ಪಾಕಿಸ್ತಾನದ ವಿರುದ್ಧ ಯುದ್ಧ ಸಾರಬೇಕೆಂದು ಹಪಹಪಿಸುತ್ತಿದ್ದಾರೆ. ಆದರೆ ಯುದ್ಧದಿಂದಾಗುವ ಪರಿಣಾಮಗಳು ಅವರಿಗೆ ಗೊತ್ತಿರುವಂತಿಲ್ಲ.....

ಖ್ಯಾತ ನಾಟಕಕಾರ ವಿಲಿಯಮ್ ಶೇಕ್ಸ್‌ಪಿಯರ್ ಕೂಡ ದೇಶಭಕ್ತಿ ಮತ್ತು ಯುದ್ಧದ ಬಗ್ಗೆ ಹೇಳಿದ್ದನ್ನು ಇಲ್ಲಿ ನೀಡಿದರೆ ಸೂಕ್ತ ಎನಿಸುತ್ತಿದೆ.

"ಜನರಲ್ಲಿ ದೇಶಭಕ್ತಿ ಕೆರಳುವಂತೆ ಯುದ್ಧದ ರಣಕಹಳೆಯನ್ನು ಊದುವ ನಾಯಕನ ಬಗ್ಗೆ ಎಚ್ಚರ ವಹಿಸಿ. ಏಕೆಂದರೆ. ದೇಶಭಕ್ತಿ ಎಂಬುದು ಎರಡಲಗಿನ ಕತ್ತಿಯಂತೆ. ಅದು ರಕ್ತವನ್ನು ಉತ್ತೇಜಿಸಿದರೆ, ಬುದ್ಧಿಶಕ್ತಿಯನ್ನು ಕಡಿಮೆ ಮಾಡುತ್ತದೆ. ಯುದ್ಧದ ರಣಕಹಳೆ ಹೆಚ್ಚಾದಾಗ ದ್ವೇಷದಿಂದ ರಕ್ತ ಕುದಿಯುತ್ತದಲ್ಲದೆ, ಚಿಂತಿಸುವ ಶಕ್ತಿ ಕುಂದುತ್ತದೆ. ಆಗ ಜನರ ಹಕ್ಕುಗಳನ್ನು ನಿಯಂತ್ರಿಸುವುದು ನಾಯಕನಿಗೆ ಸುಲಭವಾಗುತ್ತದೆ. ಭೀತಿಯಿಂದ ತುಂಬಿರುವ, ದೇಶಭಕ್ತಿಯಿಂದ ಕುರುಡಾಗಿರುವ ಜನ ಸಂತೋಷದಿಂದಲೇ ತಮ್ಮ ಎಲ್ಲಾ ಹಕ್ಕುಗಳನ್ನು ನಾಯಕನಿಗೆ ಒಪ್ಪಿಸುತ್ತಾರೆ. ಇದೆಲ್ಲ ನನಗೆ ಹೇಗೆ ಗೊತ್ತು? ಯಾಕೆಂದರೆ ನಾನೂ ಅದನ್ನೇ ಮಾಡಿದ್ದೇನೆ. ನಾನು ಜೂಲಿಯಸ್ ಸೀಸರ್."

■ ಗೌರಿ ಲಂಕೇಶ್

# ಡಾ. ಎಲ್.ಬಿ ಆಯ್ಕೆಯ ಖುಷಿ ನಮ್ಮೆಲ್ಲರದ್ದು



ಡಾ. ಎಲ್. ಬಸವರಾಜು ವಚನ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಕೆಲಸ ಮಾಡಿದವರು. ತಮ್ಮ ಸಾಹಿತ್ಯ ಸಂಪಾದನೆ, ಸಂಶೋಧನಾ ಮಾರ್ಗದಲ್ಲಿ ಅವರಿಗೆ ಸರಿ ಎನ್ನಿಸಿದ ಸತ್ಯಗಳನ್ನು ನಿರ್ಭೀಡೆಯಿಂದ ಬರೆದವರು. ಅಲ್ಲಮ ವಚನ ಚಂದ್ರಿಕೆಯನ್ನು ಸಂಪಾದಿಸಿದಾಗ ಅದಕ್ಕೆ ಅವರು ಬರೆದ ಪ್ರಸ್ತಾವನೆಯ ಬಗ್ಗೆ ಹಲವಾರು ಮಠ ಮಾನ್ಯಗಳು ಆಕ್ಷೇಪ ವ್ಯಕ್ತಪಡಿಸಿದವು. ಅಲ್ಲಮ ಪ್ರಭು ತನ್ನ ಮೂಲದಲ್ಲಿ ನಟುವಾಂಗ ಜಾತಿಗೆ ಸೇರಿದ ವ್ಯಕ್ತಿ ಎಂಬ ಅಂಶವನ್ನು ಯಾವುದೇ ಜಾತಿ ಶ್ರೇಷ್ಠತೆಯ ಮುಲಾಜಿಲ್ಲದೆ ಪ್ರಕಟಪಡಿಸಿದವರು ಅವರು. ಈಚೆಗೆ ಅವರು ಶರಣ ಸಿದ್ಧರಾಮನ ಬದುಕಿನ ಅಂಶಗಳ ಬಗ್ಗೆ ಪ್ರಕಟಿಸಿರುವ ಮಾಹಿತಿಯೂ ಕೂಡ ಪಟ್ಟಭದ್ರರಿಗೆ ಅಪ್ರಿಯವಾದುದೇ ಆಗಿದೆ.

■ ಡಾ. ಬಂಜಗೆರೆ ಜಯಪ್ರಕಾಶ

ಚಿತ್ರದುರ್ಗದಲ್ಲಿ ಈ ಸಲದ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧತೆಗಳು ಆರಂಭವಾಗಿವೆ. ಸಮ್ಮೇಳನಾಧ್ಯಕ್ಷತೆಗೆ ಚಿದಾನಂದಮೂರ್ತಿಯವರ ಹೆಸರನ್ನು ಚಿತ್ರದುರ್ಗ ಜಿಲ್ಲಾ ಸಾಹಿತ್ಯ ಪರಿಷತ್ ಶಿಫಾರಸ್ಸು ಮಾಡಿತು. ಎಂ. ಚಿದಾನಂದಮೂರ್ತಿಯವರು ಈ ಹಿಂದೆ ಒಂದು ಸಲ ಸಮ್ಮೇಳನಾಧ್ಯಕ್ಷತೆಗೆ ಸೂಚಿತರಾಗಿದ್ದರು. ನಂತರ ಕಾರಣಾಂತರಗಳಿಂದ ಅದಕ್ಕೆ ಬೇರೆಯವರು ಆಯ್ಕೆಯಾದರು. ಇದರಿಂದ ನೊಂದುಕೊಂಡ ಚಿಮೂ ಇನ್ನು ಮುಂದೆ ನಾನು ಸಮ್ಮೇಳನಾಧ್ಯಕ್ಷತೆಯನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಘೋಷಿಸಿದ್ದರು.

ಈ ಸಲದ ಸಮ್ಮೇಳನಾಧ್ಯಕ್ಷತೆಗೆ ಅವರ ಹೆಸರು ಸೂಚಿಸಿ ನಿರ್ಣಯ ಕೈಗೊಳ್ಳುವ ಮುನ್ನ ಚಿಮೂ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳಲಾಗಿತ್ತೋ ಇಲ್ಲವೋ ಗೊತ್ತಿಲ್ಲ. ಅವರ ಹೆಸರಂತೂ ಪತ್ರಿಕೆಗಳಲ್ಲಿ ಬಂತು. ಆ ಸಂದರ್ಭದಲ್ಲಿ ಚಿಮೂ ತಮ್ಮ ಪ್ರತಿಕ್ರಿಯೆಯನ್ನೇನೂ ನೀಡಿದಂತಿಲ್ಲ. ಚಿಮೂ ಹೆಸರನ್ನು ಸಮ್ಮೇಳನಾಧ್ಯಕ್ಷತೆಗೆ ಶಿಫಾರಸ್ಸು ಮಾಡಿದ ಚಿತ್ರದುರ್ಗ ಜಿಲ್ಲಾ ಸಾಹಿತ್ಯ ಪರಿಷತ್ತಿನ ನಿಲುವಿನ ಬಗ್ಗೆ ಹಲವು ಕಡೆಯಿಂದ ವಿರೋಧ ವ್ಯಕ್ತವಾಯಿತು.

ಚಿಮೂ ಅವರಿಗೆ ಸಮ್ಮೇಳನಾಧ್ಯಕ್ಷರಾಗಲು ಬೇಕಾದ ಹಲವು ಅರ್ಹತೆಗಳಿವೆ. ಹಿರಿಯ ವಿದ್ವಾಂಸರು, ಸಂಶೋಧಕರು, ಸಜ್ಜನರು, ಕನ್ನಡ ನಾಡು ನುಡಿಯ ಬಗ್ಗೆ ಕಾಳಜಿಯಿಂದ ಸೇವೆ ಮಾಡಿರುವವರು, ಕನ್ನಡದ ರಕ್ಷಣೆಗಾಗಿ ಬೀದಿಗಿಳಿದು ಹೋರಾಟ ಮಾಡಿರುವವರು. ಹಾಗೆ ನೋಡಿದರೆ ಚಿಮೂ ಅವರಿಗೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಈ ಹೊತ್ತಿಗಾಗಲೇ ಸಿಕ್ಕಿರಬೇಕಿತ್ತು. ಅವರ ಹಿರಿತನ ಮತ್ತು ಸಾಹಿತ್ಯ ಸಾಮರ್ಥ್ಯದ ದೃಷ್ಟಿಯಿಂದ ನೋಡಿದರೆ ಅವರಿಗಿಂತ ಕಡಿಮೆ ಸಾಮರ್ಥ್ಯದ ಕೆಲವರು ಸಮ್ಮೇಳನಾಧ್ಯಕ್ಷತೆ ವಹಿಸಿರುವುದೂ ಉಂಟು. ಈ ದೃಷ್ಟಿಯಿಂದ ನೋಡಿದರೆ ಚಿಮೂ ಅವರ ಹೆಸರು ಶಿಫಾರಸ್ಸಾಗಿದ್ದು ನ್ಯಾಯಯುತವಾಗಿತ್ತು.

ಆದರೆ ಸಮಸ್ಯೆ ಬೇರೆಯೇ ಇದೆ. ಚಿಮೂ ಅವರ ರಾಜಕೀಯ ಧೋರಣೆಗಳು ಮತ್ತು ಅವರು ಕರ್ನಾಟಕ ಇತಿಹಾಸದ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿರುವ ನಿಲುವುಗಳು ಏಕಪಕ್ಷೀಯವಾಗಿದ್ದು ಅವರು ಗತಕಾಲದ ವಾಸ್ತವಾಂಶಗಳನ್ನು, ವರ್ತಮಾನ ಸಮಾಜದ ಸಮಸ್ಯೆಗಳನ್ನು ಸಂಪೂರ್ಣವಾಗಿ ಕೋಮುವಾದಿ ದೃಷ್ಟಿಕೋನದಿಂದ ಅರ್ಥೈಸತೊಡಗಿದ್ದಾರೆ. ನಾವಿರುವ ಸಂದರ್ಭಕ್ಕೆ ಇದು ಅನರ್ಥಕಾರಿಯಾಗಿದೆ. ಇದು ಕರ್ನಾಟಕದ ಪಂಪನಿಂದ ಹಿಡಿದು ಕುವೆಂಪುವರೆಗೆ ಪ್ರತಿಪಾದಿತವಾದ, ಈಗ ದಲಿತ ಬಂಡಾಯ ಸಾಹಿತ್ಯಗಳು ಪ್ರತಿಪಾದಿಸುತ್ತಿರುವ ಸಾಂಸ್ಕೃತಿಕ ಪರಂಪರೆಗೆ ವಿರುದ್ಧವಾದುದಾಗಿದೆ.

ಆದ್ದರಿಂದಲೇ ಚಿಮೂ ಹೆಸರಿನ ಶಿಫಾರಸ್ಸಿಗೆ ಕನ್ನಡದ ಪ್ರಗತಿಪರ ವಲಯದಿಂದ ವಿರೋಧ ವ್ಯಕ್ತವಾಯಿತು. ಚಿತ್ರದುರ್ಗದಲ್ಲಿ ಅಹಿಂದ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ ಸಭೆ ನಡೆಸಿತು. ಹಿಂದುಳಿದವರು ಮತ್ತು ದಲಿತ ಸಮುದಾಯದವರು ಬಹುಸಂಖ್ಯೆಯಲ್ಲಿರುವ ಚಿತ್ರದುರ್ಗದಲ್ಲಿ ನಡೆಯುತ್ತಿರುವ ಈ ಅಮೃತ ಮಹೋತ್ಸವ ಸಮ್ಮೇಳನಕ್ಕೆ ಹಿಂದುಳಿದ ಅಥವಾ ದಲಿತ ಸಮುದಾಯದಿಂದ ಬಂದ ಸಾಹಿತಿಯೊಬ್ಬರು ಅಧ್ಯಕ್ಷರಾಗಬೇಕು ಎಂಬುದು ಆ ಸಭೆಯ ನಿರ್ಣಯವಾಗಿತ್ತು. ಈವರೆಗೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಏರಿರುವವರು ಹೆಚ್ಚು ಸಲ ಮುಂದುವರಿದ ಸಮುದಾಯದವರೇ ಆಗಿರುವುದರಿಂದ ಈ ಬಾರಿ ಹಿಂದುಳಿದ ಅಥವಾ ದಲಿತ ಸಮುದಾಯದವರಾಗಿರಬೇಕೆಂಬ ಬೇಡಿಕೆಯನ್ನು ಆ ಸಭೆ ಮುಂದಿಟ್ಟಿತು.

ಸಭೆ ನಡೆಯುವಾಗ ಶಿವು ಯಾದವ್ ಮತ್ತು ಮುರುಘರಾಜೇಂದ್ರ ಒಡೆಯರ್ ನನಗೆ ಫೋನ್ ಮಾಡಿದ್ದರು. ಈ ಬೇಡಿಕೆಗೆ ನಿಮ್ಮ ಬೆಂಬಲ ಇದೆಯೇ ಎಂದು ಕೇಳಿದ್ದರು. ನಾನು ಬೆಂಬಲ ಸೂಚಿಸಿದ್ದೆ. ಅವರು ಕೇಳಿದ್ದಕ್ಕೆ ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪ, ಸಾರಾ ಅಬೂಬಕ್ಕರ್ ಮುಂತಾದ ಕೆಲವು ಹೆಸರುಗಳನ್ನು ಹೇಳಿ ಇವರಲ್ಲಿ ಯಾರಾದರೂ ಆಗಬಹುದು ಎಂದು ಅಭಿಪ್ರಾಯವನ್ನೂ ಸೂಚಿಸಿದ್ದೆ.

ಹಿಂದುಳಿದ ಅಥವಾ ದಲಿತ ಸಮುದಾಯದವರೇ ಅಧ್ಯಕ್ಷರಾಗಬೇಕೆಂಬ ಹೋರಾಟ ಮಾಡಲು ಮುಂದಾದ ಶಿವು ಯಾದವ್, ಮುರುಘರಾಜೇಂದ್ರ ಒಡೆಯರ್ ಹಾಗೂ ಅವರ ಸ್ನೇಹಿತರ ನಿಲುವು ಸಾಹಿತ್ಯ ಪರಿಷತ್‌ನ ಕೇಂದ್ರ ಸಮಿತಿಯ ನಿರ್ಧಾರದ ಮೇಲೆ ಯಾವ ರೀತಿಯ ಪರಿಣಾಮ ಉಂಟು ಮಾಡಬಹುದು ಅಥವಾ ಮಾಡದಿರಬಹುದು ಎಂಬ ಆತಂಕದಲ್ಲಿ ದಿನ ಕಳೆಯುತ್ತಿರುವಾಗ ಮೈಸೂರಿನಿಂದ ಸುದ್ದಿ ಬಂತು.

ಮೈಸೂರಿನ ಪ್ರಗತಿಪರ ಸಾಹಿತಿಗಳು ಡಾ. ಎಲ್. ಬಸವರಾಜು ಅವರ ಹೆಸರನ್ನು ಸೂಚಿಸಿ ಪತ್ರಿಕಾ ಹೇಳಿಕೆ ನೀಡಿರುವುದನ್ನು ಸುಧೀಂದ್ರ ಕುಮಾರ್ ತಿಳಿಸಿ ಇತರೆ ಪ್ರಗತಿಪರ ಸಾಹಿತಿಗಳು ಈ ಸೂಚನೆಗೆ ಬೆಂಬಲ ಕೊಡಬೇಕೆಂದು ವಿನಂತಿಸಿದರು. ಡಾ. ಎಲ್. ಬಸವರಾಜು ಹೆಸರನ್ನು ಸೂಚಿಸಿದವರಲ್ಲಿ ದೇವನೂರು ಮಹಾದೇವ ಒಬ್ಬರಾಗಿದ್ದರು. ಅಂತಿಮವಾಗಿ ಕೇಂದ್ರ ಸಮಿತಿಯ ಸಭೆ ಡಾ. ಎಲ್. ಬಸವರಾಜು ಅವರನ್ನು ಅಮೃತ ಮಹೋತ್ಸವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಆಯ್ಕೆ ಮಾಡಿತು. ಅದು ಸುದ್ದಿ ಮಾಧ್ಯಮಗಳಲ್ಲಿ ಬರುವುದಕ್ಕಿಂತ ಮೊದಲೇ ಎಸ್‌ಎಂಎಸ್‌ಗಳ ಮೂಲಕ ಪ್ರಗತಿಪರರ ನಡುವೆ ವಿಷಯ ಹರಡಿತು. ಹೊಸಪೇಟೆಯಿಂದ ಅರುಣ್ ಜೋಳದಕೂಡ್ಲಿಗಿ ಕಳುಹಿಸಿದ 'ಇದು ಸಮಾಜಮುಖಿ ಕಾಳಜಿಗಳಿಗೆ ದೊರೆತ ಜಯ' ಎಂಬ ಎಸ್‌ಎಮ್‌ಎಸ್ ಹೆಚ್ಚು ಕಮ್ಮಿ ಎಲ್ಲ ಪ್ರಗತಿಪರರ ಹಾಗೂ ಪ್ರಜಾತಂತ್ರವಾದಿಗಳ ಅಭಿಪ್ರಾಯವನ್ನು ಬಿಂಬಿಸುತ್ತಿತ್ತು.

ಕರ್ನಾಟಕದ ಬೇರೆ ಬೇರೆ ಭಾಗಗಳ ಸಾಹಿತ್ಯಾಸಕ್ತರು ಹೆಚ್ಚುಕಮ್ಮಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದು ಎಲ್. ಬಸವರಾಜು ಅವರಿಗೆ ಸಂದ ಗೌರವ ಮಾತ್ರವಲ್ಲ. ಅವರು ಪ್ರತಿನಿಧಿಸುತ್ತಾ ಬಂದ ಸತ್ಯನಿಷ್ಠ ಧೋರಣೆಗಳು, ಅನ್ವೇಷಕ ಪ್ರವೃತ್ತಿ, ನಿಷ್ಠುರವಾದಿ ನಿಲುವು ಹಾಗೂ ಜಾತಿ-ಮತಗಳ ಸೀಮಿತತೆಯಾಚೆ ಪ್ರತಿಪಾದಿಸುತ್ತಾ ಬಂದ ಕಾಳಜಿಗಳು ಇವುಗಳಿಗೆ ಸಂದ ಮನ್ನಣೆ ಎಂಬುದು ಬಹುಪಾಲು ಸಾಹಿತಿಗಳ ಅನಿಸಿಕೆಯಾಗಿದೆ.

ಡಾ. ಎಲ್. ಬಸವರಾಜು ಅವರು ಆಯ್ಕೆಯಾಗಿರುವುದರಿಂದ, ಕೋಮುವಾದಿ ಎಂಬ ಬ್ರ್ಯಾಂಡ್‌ನ ಚಿಮೂ ಅವರ ಆಯ್ಕೆ ಆಗದಿರುವುದರಿಂದ ಶೋಷಿತರ ಪರ ಕಾಳಜಿ ಹೊಂದಿದವರಿಗೇ ಗೆಲುವು ಸಿಕ್ಕಂತಾಗಿದೆ ಎಂಬ ಅಭಿಪ್ರಾಯವನ್ನು ಚಿತ್ರದುರ್ಗದ ಅಹಿಂದ ಮತ್ತು ಪ್ರಗತಿಪರ ಒಕ್ಕೂಟದ ಗೆಳೆಯರಿಗೆ ನಾನು ವಿವರಿಸಿದೆ. ಡಾ. ಎಲ್. ಬಸವರಾಜು ಅವರಂತಹ ಹಿರಿಯ ವಿದ್ವಾಂಸರು, ಜನಪರ ಕಾಳಜಿಗಳಿಂದ ಸಂಶೋಧನೆ ನಡೆಸಿದ ವ್ಯಕ್ತಿ ಅಧ್ಯಕ್ಷತೆಗೆ ಆಯ್ಕೆಯಾಗಿರುವ ಈ ಸಂದರ್ಭದಲ್ಲಿ ನಾವೆಲ್ಲ ಸಂತೋಷವಾಗಿ ಸಮ್ಮೇಳನದ ಯಶಸ್ಸಿಗೆ ಸಹಕರಿಸಬೇಕು ಎಂಬ ಅಭಿಪ್ರಾಯವನ್ನು ಶಿವು ಯಾದವ್, ಜಗದೀಶ್ ಮತ್ತು ಇತರ ಸ್ನೇಹಿತರಿಗೆ ತಿಳಿಸಿದೆ. ಅವರೂ ಸಮ್ಮತಿಸಿದರು.

ಆದರೆ ಈಗ ಗೊತ್ತಾಗಿರುವಂತೆ ಅವರು ಡಾ. ಎಲ್. ಬಸವರಾಜು ಅವರ ಆಯ್ಕೆಯನ್ನು ಸ್ವಾಗತಿಸಿದರೂ ಸಹ ಅವರು ಹಿಂದುಳಿದ ಜಾತಿಗೆ ಸೇರಿದವರಲ್ಲವಾದ ಕಾರಣ ಪರ್ಯಾಯ ಸಮ್ಮೇಳನ ನಡೆಸಲು ನಿರ್ಧರಿಸಿದ್ದಾರೆ. ಈ ಬಗ್ಗೆ ದೇವನೂರು ಹಾಗೂ ಇತರರು ನನಗೆ ಫೋನ್ ಮಾಡಿ ತೀವ್ರ ಆತಂಕ ವ್ಯಕ್ತಪಡಿಸಿದರು. ಡಾ. ಎಲ್. ಬಿ ಅಧ್ಯಕ್ಷತೆಗೆ ಆಯ್ಕೆಯಾಗಿರುವ ಈ ಸಂದರ್ಭದಲ್ಲಿ ಚಿತ್ರದುರ್ಗದ ಪ್ರಗತಿಪರ ಗೆಳೆಯರು ಇಂತಹ ನಿಲುವು ತಳೆಯುವುದು ಸೂಕ್ತವಾದುದಲ್ಲ ಎಂಬುದು ಅವರೆಲ್ಲರ ಅಭಿಪ್ರಾಯ.

ನಮ್ಮಂತಹ ಹಲವರಿಗೆ ಈ ಅಭಿಪ್ರಾಯವಿದೆ. ಇದಕ್ಕೆ ಕಾರಣವೇನೆಂದರೆ ಡಾ. ಎಲ್. ಬಸವರಾಜು ಅವರ ವ್ಯಕ್ತಿತ್ವ. ವಚನ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಕೆಲಸ ಮಾಡಿದವರು ಅವರು. ತಮ್ಮ ಸಾಹಿತ್ಯ ಸಂಪಾದನೆ, ಸಂಶೋಧನಾ ಮಾರ್ಗದಲ್ಲಿ ಅವರಿಗೆ ಸರಿ ಎನ್ನಿಸಿದ ಸತ್ಯಗಳನ್ನು ನಿರ್ಭೀಡೆಯಿಂದ ಬರೆದವರು. ಅಲ್ಲಮ ವಚನ ಚಂದ್ರಿಕೆಯನ್ನು ಸಂಪಾದಿಸಿದಾಗ ಅದಕ್ಕೆ ಅವರು ಬರೆದ ಪ್ರಸ್ತಾವನೆಯ ಬಗ್ಗೆ ಹಲವಾರು ಮಠ ಮಾನ್ಯಗಳು ಆಕ್ಷೇಪ ವ್ಯಕ್ತಪಡಿಸಿದವು. ಅಲ್ಲಮ ಪ್ರಭು ತನ್ನ ಮೂಲದಲ್ಲಿ ನಟುವಾಂಗ ಜಾತಿಗೆ ಸೇರಿದ ವ್ಯಕ್ತಿ ಎಂಬ ಅಂಶವನ್ನು ಯಾವುದೇ ಜಾತಿ ಶ್ರೇಷ್ಠತೆಯ ಮುಲಾಜಿಲ್ಲದೆ ಪ್ರಕಟಪಡಿಸಿದವರು ಅವರು. ಈಚೆಗೆ ಅವರು ಶರಣ ಸಿದ್ಧರಾಮನ ಬದುಕಿನ ಅಂಶಗಳ ಬಗ್ಗೆ ಪ್ರಕಟಿಸಿರುವ ಮಾಹಿತಿಯೂ ಕೂಡ ಪಟ್ಟಭದ್ರರಿಗೆ ಅಪ್ರಿಯವಾದುದೇ ಆಗಿದೆ.

ಅವರ ಪ್ರಕಾರ ಶರಣ ಸಿದ್ಧರಾಮ ಶೂನ್ಯ ಸಂಪಾದನೆಗಳಲ್ಲಿ ಲಿಖಿತವಾಗಿರುವಂತೆ ಬಸವಣ್ಣನ ಸಮಕಾಲೀನನಲ್ಲ. ಆತನಿಗೆ ಲಿಂಗ ಧಾರಣೆ ಮಾಡಿಸಲಿಕ್ಕಾಗಿ ಅಲ್ಲಮಪ್ರಭು ಕಲ್ಯಾಣಕ್ಕೆ ಕರೆತಂದರೆಂಬುದು ಐತಿಹಾಸಿಕವಾಗಿ ಸತ್ಯವಲ್ಲ. ವಚನಕಾರರ ಕಾಲಘಟ್ಟದ ಹಿಂದೆ ಮುಂದೆ ಬದುಕಿದ್ದವರನ್ನೆಲ್ಲ ಒಂದೇ ಕಾಲಘಟ್ಟದವರೆಂಬಂತೆ ಚಿತ್ರಿಸಿ ವೀರಶೈವಕ್ಕೆ ಮಹತ್ ಪ್ರಭಾವಳಿಯನ್ನು ಕಟ್ಟಿಕೊಡುವ ಉದ್ದೇಶದಿಂದ ಶೂನ್ಯ ಸಂಪಾದನೆಯಲ್ಲಿ ಹೀಗೆ ಮಾಡಲಾಗಿದೆ ಎಂಬ ಬಗ್ಗೆ ಆಧಾರಸಹಿತ ಮಾಹಿತಿಯನ್ನು ಅವರು ಬರೆದಿದ್ದಾರೆ.

ವಚನಕಾರರ ಹಿನ್ನೆಲೆಯ ಬಗ್ಗೆ, ಹಲವು ವಚನಗಳನ್ನು ಅರ್ಥೈಸುವ ವಿಧಾನದ ಬಗ್ಗೆ, ಒಂದು ಜಾತಿಯಾಗಿ ವೀರಶೈವವು ಕಾರ್ಯನಿರ್ವಹಿಸುತ್ತಿರುವ ರೀತಿಯ ಬಗ್ಗೆ ಸಕಾರಣವಾಗಿ ವಿಮರ್ಶಾತ್ಮಕ ನಿಲುವುಗಳನ್ನು ತಳೆಯುತ್ತಾ ಬಂದ ಎಲ್. ಬಸವರಾಜು ಅವರು ಯಾವುದೇ ಜಾತಿಯ ಪ್ರತಿಷ್ಠೆ ನಿರ್ಮಾಣ ಮಾಡಲಿಕ್ಕಾಗಿ ಸಾಹಿತ್ಯ ಕೃಷಿ ನಡೆಸಿದವರಲ್ಲ. ಅವರನ್ನು ಹಲವಾರು ವೀರಶೈವ ಮಠ ಮಾನ್ಯಗಳು ಹೊರಗಿನವರಂತೆಯೇ ಕಂಡಿವೆ. ಜಾತಿ ಶಿಫಾರಸ್ಸಿನಿಂದ ಅವರು ಯಾವುದೇ ಪದವಿ, ಪ್ರಶಸ್ತಿ ಪಡೆಯಲಿಲ್ಲ.

ತಮ್ಮ ಈ ಇಳಿವಯಸ್ಸಿನಲ್ಲಿ ಅವರು ಪಂಪ ಭಾರತದ ಗದ್ಯಾನುವಾದವನ್ನು ಪರಿಷ್ಕರಿಸಲು ಕೂರುತ್ತಾರೆ. ಕುಸುಮಬಾಲೆಯನ್ನು ಕಾವ್ಯ ಕುಸುಮಬಾಲೆಯಾಗಿ ಪುನರ್‌ಮಂಡನೆ ಮಾಡುತ್ತಾರೆ. ಕನ್ನಡ ಸಾಹಿತ್ಯ ಸಾಂಸ್ಕೃತಿಕ ಪರಂಪರೆ ಮೊದಲಿನಿಂದಲೂ ಪ್ರತಿಪಾದಿಸುತ್ತಾ ಬಂದಿರುವ 'ಮಾನವಜಾತಿ ತಾನೊಂದೇ ಕುಲಂ' ಎಂಬ ಆಶಯವನ್ನು ಮನಸಾ ಆಚರಿಸುವ ಉತ್ಸಾಹವನ್ನು ಇಂತಹ ಅವರ ಹಲವಾರು ಸಾಹಿತ್ಯ ಪ್ರಯೋಗಗಳಲ್ಲಿ ಸದಾ ಗುರುತಿಸಬಹುದಾಗಿದೆ. ಅಲ್ಲಮ ಎಂಬ ಹೆಸರಿನ ಮೂಲ ಯಾವುದಿರಬಹುದು ಎಂಬ ಅವರ ಜಿಜ್ಞಾಸೆಯ ಹರಹನ್ನು ನೋಡಿದರೆ ಅವರ ಸತ್ಯಾನ್ವೇಷಕ ಪ್ರವೃತ್ತಿಯ ದಾಹ ಅರ್ಥವಾಗುತ್ತದೆ. ಅವರ ಚಿಂತನೆಗಳ ಜಾಡಿನಿಂದ, ಒಳನೋಟಗಳ ಬೆಳಕಿನಿಂದ ನಮ್ಮಂತಹ ತರುಣ ತಲೆಮಾರಿನ ಬಹಳ ಮಂದಿ ವಿಶ್ಲೇಷಕರು, ಸಂಶೋಧಕರು ಪ್ರಭಾವಿತರಾಗಿದ್ದೇವೆ. ಉಪಕೃತರಾಗಿದ್ದೇವೆ.

ಡಾ. ಎಲ್. ಬಸವರಾಜು ಪ್ರತಿಷ್ಠಾನವೊಂದಿದೆ. ಅದನ್ನು ಮುನ್ನಡೆಸುತ್ತಿರುವವರು ಕೋಲಾರ ಜಿಲ್ಲೆಯ ಪ್ರಗತಿಪರ ಆಶಯಗಳ ಸಾಹಿತಿಗಳು. ಮೊದಲಿಂದಲೂ ದಲಿತ ಸಂಘರ್ಷ ಸಮಿತಿ, ಅಹಿಂದ ಮುಂತಾದ ಹೋರಾಟಗಳಲ್ಲಿ ಬೆಳೆದು ಬಂದ ಕೋಟಿಗಾನಹಳ್ಳಿ ರಾಮಯ್ಯ, ಲಕ್ಷ್ಮೀಪತಿ ಕೋಲಾರ ಮುಂತಾದವರ ತಂಡವೇ ಮುಂದೆ ನಿಂತು ಎಲ್. ಬಿ ಪ್ರತಿಷ್ಠಾನದ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ತಮ್ಮ ಬದುಕಿನ ಅವಧಿಯಲ್ಲಿ ಸಾಮಾನ್ಯವಾಗಿ ಯಾವುದೇ ಪ್ರಶಸ್ತಿ ಸನ್ಮಾನಗಳನ್ನು ಸ್ವೀಕರಿಸದಿದ್ದ ಮೇಷ್ಟ್ರ ಕೆ. ರಾಮದಾಸ್ ಎಲ್. ಬಿ ಪ್ರತಿಷ್ಠಾನ ನೀಡಿದ ಸನ್ಮಾನವನ್ನು ಕೋಲಾರದಲ್ಲಿ ಸ್ವೀಕರಿಸಿದಾಗ ಆಡಿದ ಮಾತುಗಳು ಡಾ. ಎಲ್. ಬಸವರಾಜು ಅವರ ಜೀವನೋದ್ದೇಶಗಳಿಗೆ ಅರ್ಪಿಸಿದ ಕೃತಜ್ಞತಾ ಫಲಕದಂತಿದ್ದುದು ಈಗಲೂ ನನ್ನ ನೆನಪಿನಲ್ಲಿದೆ.

ಅಷ್ಟಿಲ್ಲದೆ ರಾಮದಾಸ್ ರೀತಿಯ ನಿಷ್ಠುರವಾದಿಗಳು ತಮ್ಮನ್ನು ಹೆಮ್ಮೆಯಿಂದ ಡಾ. ಎಲ್. ಬಸವರಾಜು ಅವರ ಶಿಷ್ಯ ಎಂದು ಹೇಳಿಕೊಳ್ಳುತ್ತಿರಲಿಲ್ಲ. ಒಬ್ಬ ಅಧ್ಯಾಪಕರಾಗಿ ತಮ್ಮ ನಡೆ ಹಾಗೂ ನುಡಿಗಳಿಂದ, ವ್ಯಕ್ತಿತ್ವದ ವೈಶಿಷ್ಟ್ಯದಿಂದ ಕೆ. ರಾಮದಾಸ್ ಅವರಂತಹ ಅನೇಕ ಶಿಷ್ಯರು ರೂಪುಗೊಳ್ಳಲು ಡಾ. ಎಲ್. ಬಿ ಕೊಡುಗೆ ನೀಡಿದ್ದಾರೆ.

ಚಿತ್ರದುರ್ಗದಲ್ಲಿ ಪರ್ಯಾಯ ಸಮ್ಮೇಳನ ಮಾಡುತ್ತೇವೆ ಎಂದು ನಿರ್ಣಯ ಕೈಗೊಂಡಿರುವ ಗೆಳೆಯರಿಗೆ ಡಾ. ಎಲ್. ಬಿ ಯವರ ಆಯ್ಕೆಯ ಬಗ್ಗೆ ಅವರಿಗೆ ಭಿನ್ನಮತವಿಲ್ಲದಿದ್ದ ಮೇಲೆ ಪರ್ಯಾಯ ಸಮ್ಮೇಳನದ ಮಾಡುವ ಅಗತ್ಯವೇನಿದೆ ಎಂಬ ಪ್ರಶ್ನೆಯನ್ನು ಮುಂದಿಡಬೇಕಾಗುತ್ತದೆ. ಉಡುಪಿಯಲ್ಲಿ ಪರ್ಯಾಯ ಸಮ್ಮೇಳನ ನಡೆಸಿದವರಿಗೆ ಎಲ್. ಎಸ್ ಶೇಷಗಿರಿರಾವ್ ಅವರ ಆಯ್ಕೆಯ ಬಗ್ಗೆ ಭಿನ್ನಮತವಿತ್ತು. ಅವರ ಬದಲು ವ್ಯಾಸರಾಯ ಬಲ್ಲಾಳರಂತಹ ಪ್ರಗತಿಪರರು ಅಧ್ಯಕ್ಷರಾಗಬೇಕು ಎಂಬುದರ ಜೊತೆಗೆ

ೕಮುವಾದಿಗಳ ಬೆಂಬಲದ ಕೋಟೆಯಂತಾಗಿರುವ ಡುಪಿಯಲ್ಲಿ ಸೌಹಾರ್ದತೆಯ ನಿಲುವು ಬಿಂಬಿಸುವ ರ್ಯಕ್ರಮವನ್ನು ನಡೆಸಬೇಕು ಎಂಬ ಆಶಯವಿತ್ತು.

ಚಿತ್ರದುರ್ಗದ ಸಾಹಿತ್ಯ ಸಮ್ಮೇಳನದ ಪರಿಸ್ಥಿತಿ ದಕ್ಕೆ ಹೋಲಿಸಿದರೆ ಭಿನ್ನವಾಗಿದೆ. ಇಲ್ಲಿ ಪ್ರಗತಿಪರರಿಗೆ ಷ್ಟವಾಗುವ ವ್ಯಕ್ತಿತ್ವದ ಶ್ರೇಷ್ಠ ವಿದ್ವಾಂಸರಾದ ಎಲ್. ಸವರಾಜು ಅವರ ಆಯ್ಕೆಯಾಗಿದೆ. ಚಿಮೂ ಅವರ ದಲಿಗೆ ಸಾಹಿತ್ಯ ಪರಿಷತ್‌ನ ಕೇಂದ್ರ ಸಮಿತಿ ಎಲ್. ಅವರನ್ನು ಆಯ್ಕೆ ಮಾಡುವಲ್ಲಿ ಇತರರ ಲುದಾರಿಕೆ ಮಾತ್ರವಲ್ಲದೆ ಜಿಲ್ಲೆಯೊಳಗೆ ಅಹಿಂದ ತ್ತು ಪ್ರಗತಿಪರ ಸಂಘಟನೆಗಳ ಸಭೆ ವ್ಯಕ್ತಪಡಿಸಿದ ರೋಧದ ಪಾತ್ರ ಮಹತ್ತರವಾಗಿದೆ. ಈ ವಿಷಯದಲ್ಲಿ ಿಂದ ಮತ್ತು ಪ್ರಗತಿಪರ ಸಂಘಟನೆಗಳ ಸ್ನೇಹಿತರು ುವು ಸಾಧಿಸಿದಂತಾಗಿದೆ. ಈ ಗೆಲವು ಅವರಿಗೆ ಾತ್ರವಲ್ಲ ರಾಜ್ಯದ ಎಲ್ಲ ಕೋಮುವಾದ ವಿರೋಧಿ ೋರಣೆಯುಳ್ಳವರಿಗೂ ಸಂತಸ ತಂದಿದೆ. ೋಮುವಾದಿ ಬಿಜೆಪಿ ಅಧಿಕಾರದಲ್ಲಿರುವಾಗ ಹೆಚ್ಚೂ ್ಮ ಆದರ ನಿಲುವುಗಳ ಸಾಹಿತ್ಯಕ ವಕ್ತಾರರಂತಿರುವ ಮೂ ಆಯ್ಕೆ ಆಗಲಿಲ್ಲವೆಂದರೆ ಇದನ್ನು ನಾವು ಾರಾತ್ಮಕವಾಗಿ ಪರಿಗಣಿಸಬೇಕು.

ಎಲ್. ಬಸವರಾಜು ಅವರು ಹುಟ್ಟನಿಂದ ದುಳಿದ ಅಥವಾ ದಲಿತ ಜಾತಿಗೆ ಸೇರಿದವರಲ್ಲವಾದ ರಣ ನಾವು ಪರ್ಯಾಯ ಸಮ್ಮೇಳನ ಮಾಡುತ್ತೇವೆ ಬ ನಿಲುವು ಸೂಕ್ತವಾದುದಲ್ಲ. ನಮ್ಮ ಸಮಾಜದಲ್ಲಿ ತಿ ತುಂಬಾ ಮುಖ್ಯ ನಿಜ. ಆದರೆ ಜಾತಿಯೊಂದೇ ರ್ಣಾಯಕ ಎಂಬ ನಿಲುವಿನಿಂದ ಯೋಚಿಸುವುದು ತಿಮವಾಗಿ ನಾವು ಯಾವ ಜಾತಿವಾದವನ್ನು, ೋಮುವಾದವನ್ನು ವಿರೋಧಿಸುತ್ತೇವೋ ಅಲ್ಲಿಗೇ ್ಮನ್ನು ಕೊಂಡೊಯ್ಯುತ್ತದೆ. ಡಾ. ಎಲ್. ಬಸವರಾಜು ರಂತಹ ವ್ಯಕ್ತಿಗಳ ವಿಷಯದಲ್ಲಿ ಜಾತಿ ಅಳತೆಗೋಲಿ ದ ಅವರನ್ನು ಹಿಂದುಳಿದವರು ಅಥವಾ ದಲಿತರಲ್ಲ ದು ಪರಿಗಣಿಸುವ ವಾದ ಹುಟ್ಟನ್ನೇ ಅಂತಿಮ ಾರವಾಗಿ ನಿರ್ಣಯ ಕೈಗೊಳ್ಳುವ ಫಾಸಿಸ್ಟ್ ವಾದಿಗಳ ುವಿಗಿಂತ ಭಿನ್ನವಾಗಿರುವುದಿಲ್ಲ.


ಪ್ರಗತಿಪರರು ಎಂಬ ಹೆಸರಿನಲ್ಲಿ ಯಾವಾಗಲೂ ುಂದುವರಿದ ಜಾತಿಯವರೇ ಎಲ್ಲ ಅವಕಾಶಗಳನ್ನು ಡೆಯಲು ಬಿಡುವಷ್ಟು ಉದಾರವಾದ ುಸರಿಸಬೇಕಿಲ್ಲವಾದರೂ, ಎಲ್ಲಾ ಸಂದರ್ಭಗಳಲ್ಲಿ ತಿಯನ್ನು ಮಾತ್ರ ಪರಿಗಣಿಸಿ ನಿರ್ಣಯ ೊಳ್ಳುವುದು ಅಹಿಂದ ಅಥವಾ ಪ್ರಗತಿಪರ ಚಳವಳಿಗೆ ಭೆ ತರುವುದಿಲ್ಲ.

ಜ್ಯೋತಿಬಾಫುಲೆ ದಲಿತರಲ್ಲ, ಆದರೆ ದಲಿತ ೋಚನೆಗಾಗಿ ಹೋರಾಡುತ್ತಿದ್ದ ಡಾ. ಅಂಬೇಡ್ಕರ್ ರು ಫುಲೆಯನ್ನು ಗುರು ಸ್ಥಾನದಲ್ಲಿ ಸ್ಮರಿಸಿಕೊಳ್ಳಲು ಗೆ ಸಾಧ್ಯವಾಯಿತು. ನಾಲ್ಮಡಿ ಕೃಷ್ಣರಾಜೇಂದ್ರ ೆಯರ್ ದಲಿತರಲ್ಲ, ಆದರೆ ಬಿಎಸ್‌ಪಿಯವರು ್ಮ ಸಭೆಗಳಲ್ಲಿ ಕೃಷ್ಣರಾಜೇಂದ್ರ ಒಡೆಯರ್ ಅವರನ್ನು ೂ ಮಹಾರಾಜರನ್ನು ಸ್ಮರಿಸಿ ಗೌರವಿಸುವುದು ಗೆ ಸಾಧ್ಯವಾಗಿದೆ. ಯಾಕೆಂದರೆ ಅವರೆಲ್ಲ ದಲಿತರಾಗಿ ್ಟರದಿದ್ದರೂ ಕೆಳ ಜಾತಿಗಳಿಗೆ ಸಮಾನ ಅವಕಾಶ ಬೇಕೆಂದು ಪ್ರತಿಪಾದಿಸಿದ್ದರಿಂದಾಗಿ. ಹುಟ್ಟನಿಂದ ದುಳಿದವರಲ್ಲದಿದ್ದರೂ ಅವರ ನೀತಿ ನಿಲುವುಗಳಿಂದ ವರನ್ನು ನಮ್ಮವರೇ ಎಂದು ಪರಿಭಾವಿಸುವ ಯವಂತಿಕೆ, ಅದೇ ರೀತಿ ಹಿಂದುಳಿದ ಜಾತಿಯಲ್ಲಿ ್ಟಿದ್ದರೂ ಕೋಮುವಾದಿ ಅಥವಾ ಜಾತಿವಾದಿ ಗಿರುವವರು ನಮ್ಮವರಲ್ಲ ಎಂದು ಪರಿಭಾವಿಸುವ ರ್ಮಕಾರವೂ ಕೆಳ ಜಾತಿಗಳ ಹಕ್ಕಿನ ಪ್ರತಿಪಾದನೆಯ ದರ್ಭದಲ್ಲಿ ಅವಶ್ಯಕ. ಇದಿಲ್ಲವಾದರೆ ಪಟ್ಟಭದ್ರ ತಿಗಳನ್ನು ಕವಿದುಕೊಂಡಿರುವ ಜಾತಿವಾದಿ ುಡುತನವೇ ನಮ್ಮನ್ನೂ ಹೊಲಬುಗೆಡಿಸುತ್ತದೆ.

ಇದು ವಿವೇಚನೆಯ ಪ್ರಶ್ನೆ: ಚಿತ್ರದುರ್ಗದ ಅಹಿಂದ ತ್ತು ಪ್ರಗತಿಪರ ಸಂಘಟನೆಗಳ ಗೆಳೆಯರಿಗೆ ಇದು ತ್ತು. ಅವರು ನಡೆಸಿದ ಸಂದರ್ಭೋಚಿತ ಪ್ರತಿಭಟನೆ ದುರ್ಗದ ಸಾಹಿತ್ಯ ಸಮ್ಮೇಳನಕ್ಕೆ 'ಚಿತ್ರದ ಮಹಿಮೆ ್ನು ಮಸಿ ನುಂಗಿತು' ಎಂಬಂತಿರುವ ಚಿಮೂ ಲಿಗೆ ಡಾ. ಎಲ್. ಬಿ ಯವರಂತಹ ಜನಪರ ್ವಾಂಸರು ಆಯ್ಕೆಯಾಗಲು ಒಂದು ಕಾರಣವಾಯಿತು. ಿಂದಲೇ ಅವರು ತಮ್ಮ ನಿರ್ಣಯ ಬದಲಾಯಿಸಿ ಎಲ್.ಬಿ ಯವರ ಆಯ್ಕೆ ಸಾಧ್ಯವಾದುದಕ್ಕೆ ್ರಮಿಸುತ್ತಿರುವ ಎಲ್ಲರ ಜೊತೆ ಅರ್ಥಪೂರ್ಣವಾಗಿ ೋಡಿಸಲಿ ಎಂಬ ಬಯಕೆ ನನ್ನದು, ನನ್ನಂತಹ ು. ■

## ಕಡಿದಾಳು ಶಾಮಣ್ಣ

## ಕಾಡ ತೊರೆಯ ಜಾಡು




ಅಕ್ಷರ ರೂಪ: ಅಕ್ಷತಾ ಕೆ.


# ನಾಯಿ ಎಂಬ ಜೊತೆಗಾರ

ಉಲೂಪಿ, ಲಾಜವಂತಿ ಚಿಕ್ಕವರಿರುವಾಗ ನಮ್ಮನೆಯಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ನಾಯಿಗಳನ್ನು ಸಾಕಿದ್ವಿ. ಶಿಕಾರಿಗಷ್ಟೆ ಅಲ್ಲ, ಮಕ್ಕಳ ಜೊತೆ ಆಟವಾಡೊಕ್ಕೂ ನಾಯಿಗಳೇ ಜೊತೆಯಾಗ್ತಿದ್ವು. ಒಳ್ಳೆಯ ಜಾತಿ ನಾಯಿಗಳು ಎಲ್ಲೆ ಸಿಗಲಿ ಅವನ್ನ ತಂದು ಸಾಕ್ತಿದ್ದೆ. ಘಟ್ಟಾನಿ ಸತ್ತ ಮೇಲೆ ತೇಜಸ್ವಿ ಒಂದು ಕಾಕರ್ ಸ್ಪಾನಿಯಲ್ ಜಾತಿಯ ನಾಯಿಯನ್ನು ಕೊಟ್ಟಿದ್ದರು, ಅದರ ಹೆಸರು ಮಿಯಾ. ಸ್ಕೂಟರ್ ಸ್ಟಾರ್ಟ್ ಮಾಡಿದರೆ ಸಾಕು, ಅದು ಓಡಿಬಂದು ನಾವು ಕಾಲಿಡ್ತಿವಲ್ಲ ಅಲ್ಲಿ ಕೂತು ಇನ್ನು ಹೊರಡು ಅನ್ನೋ ಹಾಗೆ ಮುಖ ಮಾಡೋದು. ಮಲ್ಲಾಪುರದ ಕೆರೆಯಲ್ಲಿ ಆಗ ಬಹಳಷ್ಟು ಬಾತುಕೋಳಿಗಳಿರ್ತಿದ್ವು. ಕೋವಿಗೆ ಚರ್ರೆತೋಟ ಹಾಕ್ಕಂಡು, ಕೆರೆ ಏರಿ ಮೇಲೆ ನಿಂತು ಯಾರಿಗಾದರೂ ಬಾತುಕೋಳಿಗಳಿಗೆ ಗುರಿಯಿಟ್ಟು ಕಲ್ಲು ಹೊಡೆಯಲು ಹೇಳ್ತಿದ್ದೆ. ಅವರು ಕಲ್ಲು ಹೊಡೆದ ಕೂಡಲೆ ತಪ್ಪಿಸಿಕೊಳ್ಳಲಿಕ್ಕೆ ಹಕ್ಕಿಗಳು ಹಾರಿಹೋಗವು. ಆಗ ನಾನು ಕೆರೆಗೂ ಗದ್ದೆಗೂ ನಡುವೆ ನಿತ್ಕಂಡು ಗದ್ದೆ ಕಡೆ ಹಾರಿಬಂದ ಬಾತುಗಳನ್ನು ಚರ್ರೆತೋಟದಿಂದ ಹೊಡೆದುರುಳಿಸ್ತಿದ್ದೆ. ಈ ಮಿಯಾ ಕೋವಿ ತುದಿನೇ ನೋಡ್ತಾ ಇದ್ದು ಬಾತುಗಳನ್ನು ಹೊಡೆದುರುಳಿಸಿದ ಕೂಡಲೇ ಓಡಿ ಹೋಗಿ ಅವು ಎಲ್ಲಿ ಪಟಪಟನೆ ರೆಕ್ಕೆ ಚೆಲ್ಲುತ್ತಾ ಬಿದ್ದಿರ್ತಿದ್ದೊ ಅಲ್ಲಿಂದ ಎತ್ತಿ ಹಿಡ್ಕಂಡು ಬಂದು ನನ್ನ ಕಾಲು ಬುಡದಲ್ಲಿ ಇಡೋದು. ಯಾವತ್ತಿಗೂ ತಾನು ಮೊದಲು ತಿಂತಾ ಇರ್ಲಿಲ್ಲ. ಶಿಕಾರಿ ಮುಗಿಸಿ ಮನೆಗೆ ಹೋದ ಕೂಡಲೇ ಅದರ ಪಾಲಿಂದು ಅದಕ್ಕೆ ಕೊಟ್ಟೇ ಒಳಗೆ ಹೋಗ್ಬೇಕಿತ್ತು ಇಲ್ಲಾಂದರೆ ಒಳಗೆ ಹೋಗಕ್ಕೆ ಬಿಡ್ತಾ ಇರ್ಲಿಲ್ಲ. ಈ ಮಿಯಾ ಹೀಗೆ ನನ್ನ ಬೇಟೆಗೆ ಉಪಕಾರ ಮಾಡುತ್ತಾ ಬಹಳಷ್ಟು ವರ್ಷ ಬದುಕಿತ್ತು.

ಮನೆ ಎದುರಿನ ಗದ್ದೆಯಲ್ಲಿ ಕಬ್ಬು ಹಾಕ್ತಿದ್ವಿ. ಒಂದಿನ ಸಂಜೆ ಮನೆ ಕಟ್ಟೆ ಮೇಲೆ ಹರಟುತ್ತಾ ಕೂತಿದ್ದೆ. ಕಬ್ಬಿನ ಗದ್ದೆಯ ನಡುವೆ ಹಳದಿ ಬಣ್ಣದ ಕಪ್ಪು ಪಟ್ಟೆಯ ದೊಡ್ಡ ನಾಯಿ ತರದ್ದು ಎಂಥದೋ ಕಂಡಂಗಾಯಿತು, ನೋಡಿದ್ರೆ ಅದು ಚಿರತೆ. ನನ್ನ ಜೊತೆ ಆಗ ಮಾತಾಡ್ತಾ ಕೂತಿದ್ದ ಕಲಿಗೆ ಕೇಶವಂಗೂ ಅದನ್ನು ತೋರಿಸಿದೆ. ಅವರೂ ಅದು ಚಿರತೆಯೇ ಎಂದು ಖಾತ್ರಿಪಡಿಸಿದರು. ಅದಾಗಲೇ ನಮ್ಮನೆಯಲ್ಲಿ ಒಂದೆರಡು ಒಳ್ಳೆ ನಾಯಿಗಳು ಕಾಣೆಯಾಗಿದ್ದವು. ನಾನು ಯಾರೋ ಕದ್ದುಕೊಂಡು ಹೋಗಿದ್ದಾರೆ ಅಂತ ತಿಳಿದಿದ್ದೆ, ಚಿರತೆ ನೋಡಿದ ಮೇಲೆ ಇದರದ್ದೆ ಕೆಲಸ ಅಂತ ತಿಳಿಯಿತು. ಮಲ್ಲಾಪುರ, ಶ್ರೀನಿವಾಸ ಪುರಗಳಿಂದಲೂ ನಾಯಿಗಳು ಕಾಣೆಯಾಗ್ತಿರೋ ವಿಷಯ ತಿಳಿದ ಮೇಲೆ ಊರಿಗೆ ಚಿರತೆ ಬಂದಿರೋ ವಿಷಯ ನಿಚ್ಚಳವಾಯಿತು. ಮರಿ ಹೆಸರಿನ ಒಂದು ಪಾಮರೇನಿಯನ್ ನಾಯಿ ಇತ್ತು, ಅದನ್ನು ಚಿರತೆ ಹಿಡಿದ್ರೆ ಕಷ್ಟ ಅಂತ್ಹೇಳಿ ರಾತ್ರಿ ಸಮಯದಲ್ಲಿ ಮನೆ ಕಟ್ಟೆ ಮೇಲೆ ಬೆಂಚ್ ಅಡ್ಡ ಇಟ್ಟು ಅದನ್ನ ಕಟ್ಟಿ ಹಾಕ್ತಿದ್ವಿ. ಒಂದು ಮಧ್ಯರಾತ್ರಿಯ ಹೊತ್ತಲ್ಲಿ ಕಯಂಕ್ ಅನ್ನೋ ಶಬ್ದ ಕೇಳಿತು ಅಷ್ಟೆ, ನಾನು ಶ್ರೀಗೆ ಚಿರತೆ ಹಿಡಿತು ಅಂತ ಕಾಣತ್ತೆ ಅಂದು ಬ್ಯಾಟರಿ ಹಿಡ್ಕಂಡು ಬಂದು ನೋಡಿದ್ರೆ ಒಂಚೂರು ರಕ್ತ ಬಿದ್ದಿತ್ತು, ಅದು ಬಿಟ್ಟರೆ ಅಲ್ಲಿ ನಾಯಿ ಇತ್ತು ಅನ್ನೋ ಯಾವ ಸುಳಿವೂ ಇರ್ಲಿಲ್ಲ.

ಯಾವಾಗ ಮನೆಯ ಛಡಿಯ ಮೇಲೆ ಕಟ್ಟಿದ್ದ ನಾಯಿಯನ್ನ ಚಿರತೆ ಹಿಡಿದುಕೊಂಡು ಹೋಯ್ತೋ ಭಯ ಆಗಕ್ಕೆ ಶುರು ಆಯಿತು. ಒಂದೆರಡು ದಿನ ಬಿಟ್ಟು ಪಕ್ಕದ ಸುಬ್ಬಯ್ಯನವರ ಮನೆಯ ನಾಯಿಯನ್ನು ಚಿರತೆ ಹಿಡಿತು. ತೇಜಸ್ವಿಗೆ ವಿಷಯ ತಿಳಿಸಿ ಕಾಗದ ಬರೆದೆ. ಅವರಿದ್ದೋರು ಬಹಳ ಅಪಾಯ ಕಣ್ರಿ, ಜಾಗ್ರತೆಯಿಂದಿರಿ, ಚಿರತೆಯ ಹೆಜ್ಜೆ ಮೆಟ್ಟು ಎಲ್ಲಿವರೆಗಿದೆ ಎಂದು ನೋಡ್ಕಳಿ, ಅಲ್ಲಿಗೆ ಮಕ್ಕಳನ್ನ ಕಳಿಸಬೇಡಿ, ಅವು ಮಕ್ಕಳು, ವಯಸ್ಸಾದವರು ಇವರ ಮೇಲೆ ದಾಳಿ ಮಾಡದು ಜಾಸ್ತಿ ಅಂತ ಬರೆದ್ರು. ಅಷ್ಟಕ್ಕೆ ಅವರಿಗೆ ಸಮಾಧಾನ ಆಗ್ಲಿಲ್ಲ, ಒಂದೆರಡು ದಿನ ಬಿಟ್ಟು ಅವರೇ ಬಂದ್ರು. ಬಂದವರೇ ಫಾರೆಸ್ಟ್ ಇಲಾಖೆಗೆ ವಿಷಯ ತಿಳಿಸಿ ಚಿರತೆ ಹಿಡಿಯೋ ಬೋನು ಇಡಕ್ಕೆ ಹೇಳಣಾ ನಡೀರಿ ಅಂತ ಶಿವಮೊಗ್ಗಕ್ಕೆ ಕರೆದುಕೊಂಡು ಹೋದ್ರು. ಅಲ್ಲಿ ಹೋದ್ರೆ ಇಲಾಖೆಯಲ್ಲಿದ್ದ ಯಾರಿಗೂ ಬೋನಿನ ಬಗ್ಗೆ ಮಾಹಿತಿನೇ ಇರ್ಲಿಲ್ಲ, ತೇಜಸ್ವಿನೇ ಯಾರ್‍ಯಾರನ್ನೋ ಸಂಪರ್ಕಿಸಿ ಬೋನು ತಂದಿಡೋ ಹಾಗೆ ವ್ಯವಸ್ಥೆ ಮಾಡಿದ್ರು. ಲಾರಿಯಲ್ಲಿ ಬೋನು ಬಂತು, ಮನೆ ಎದುರಿಗೆ ನಿಂತರೆ ಕಾಣೋ ಹಾಗೆ ಸ್ವಲ್ಪ ದೂರದಲ್ಲಿ ಬೋನು ಇಡಿಸಿ ಅದರ ಒಳಗೆ ಒಂದು ಕಂತ್ರಿ ನಾಯಿಯನ್ನು ಪಕ್ಕದ ಕ್ಯಾಂಪ್‌ನಿಂದ ತಂದು ಕಟ್ಟಿದೆ. ನಾಯಿ ತಿನ್ನಕ್ಕೆ ಚಿರತೆ ಒಳಗ್ಹೋದ ಕೂಡಲೆ ಬೋನಿನ ಗೇಟ್ ಮುಚ್ಕೊಳ್ಳೋದು. ಇಲಿಬೋನಿನ ತರ. ಒಂದೆರಡು ದಿನ ಏನೂ ಆಗ್ಲಿಲ್ಲ, ಆದರೆ ಬೋನಿನಲ್ಲಿ ಕಟ್ಟಿದ್ನಲ್ಲ ನಾಯಿ ಅದಕ್ಕೆ ಕಟ್ಟಿ ಹಾಕಿ ಅಭ್ಯಾಸ ಇಲ್ಲದ್ದರಿಂದ ಅದು ಬೊಗಳ್ತಾನೆ ಇರೋದು. ಮೂರ್‍ನಾಲ್ಕು ದಿನದ ಮೇಲೆ ನಮ್ಮನೆಯ ಒಂದು ಜಾತಿ ನಾಯಿ ಕಾಣೆಸ್ಲಿಲ್ಲ, ಏನು ಅಂತ ನೋಡಿದ್ರೆ ನಮ್ಮನೆ ನಾಯಿ ಬೋನಿನೊಳಗಿನ ನಾಯಿ ಜೊತೆ ಸ್ನೇಹ ಬೆಳೆಸಿ ರಾತ್ರಿ ಅದರ ಪಕ್ಕ ಬೋನಿನ ಹೊರಗೆ ಮಲಗಿದೆ. ಬೋನಿನ ನಾಯಿಯ ಸುದ್ದಿಗೇ ಹೋಗದ ಚಿರತೆ ಹೊರಗಿದ್ದ ನಮ್ಮನೆ ನಾಯಿಯನ್ನೆ ಹೊತ್ಕಂಡು ಹೋಗಿದೆ. ನಮ್ಮನೆ ನಾಯಿ ಒಳ್ಳೆ ದಷ್ಟಪುಷ್ಟವಾಗಿತ್ತು, ದಷ್ಟಪುಷ್ಟವಾದ ನಾಯಿಯನ್ನೆ ಚಿರತೆ ಹಿಡಿಯೋದಂತೆ.





ಮುದೋಳ ನಾಯಿ ಶಂಭು ಜೊತೆ ಲಾಜವಂತಿ

ಇದಾಗದಲ್ಲ ಅಂತ್ಹೇಳಿ. ನಾವು ನಾಯಿಗಳನ್ನ ಕಟ್ಟಿ ಹಾಕಲು ಶುರು ಮಾಡಿದ್ವಿ. ಸುತ್ತಮುತ್ತಲಿಂದ ನಾಯಿಗಳು ಖಾಲಿಯಾಗುತ್ತಿರುವ ಸುದ್ದಿ ಬರುತ್ತಲೇ ಇದ್ದವು. ತೋಟಕ್ಕೆ ನೀರು ಕಟ್ತಾ ಇದ್ದವನೊಬ್ಬನ ಮೇಲೆ ಚಿರತೆ ದಾಳಿ ಮಾಡಿತು. ಆದರೆ ಎಷ್ಟೆ ದಿನ ಆದರೂ ಬೋನಿನೊಳಗಿನ ನಾಯಿ ಸುದ್ದಿಗೆ ಚಿರತೆ ಹೋಗಲಿಲ್ಲ, ಆ ನಾಯಿ ಸುರಕ್ಷಿತವಾಗಿತ್ತು, ಕಬ್ಬಿನ ಗದ್ದೆಗಳು ಕಟಾವಾದ ಮೇಲೆ ಎಲ್ಲೂ ಚಿರತೆ ಕಾಣಿಸಿಕೊಳ್ಳಲಿಲ್ಲ, ಬೋನಿನಲ್ಲಿದ್ದೂ ಪ್ರಾಣ ಉಳಿಸಿಕೊಂಡ ಆ ನಾಯಿಯನ್ನು ಬಂಧ ಮುಕ್ತ ಮಾಡಿ ಬೋನನ್ನು ಫಾರೆಸ್ಟ್ ಇಲಾಖೆಗೆ ವಾಪಸ್ ಕಳಿಸಿದೆ.

ನಾಯಿ ಎಂದಕೂಡಲೇ ನನಗೆ ಹಾ.ಮಾ. ನಾಯಕರು ನಾಯಿ ಸಾಕಿದ್ದು ನೆನಪಾಗ್ತದೆ. ಅವರಿಗೆ ನಾಯಿ ಅಂದ್ರೆ ಆಗ್ತಿರಲಿಲ್ಲ, ಅಂತದ್ರಲ್ಲಿ ಅವರ ಮಗ ರವಿ ಆಗಿನ್ನೂ ಚಿಕ್ಕ ಹುಡುಗ, ಒಂದು ಬೀದಿ ನಾಯಿ ತಂದು ಇದನ್ನ ಸಾಕದೇ ಸೈ ಅಂತ ಕೂತ. ಮಗನ ಹಠಕ್ಕೆ ಬಗ್ಗಿ ಅದನ್ನ ಮನೆಯಲ್ಲಿಟ್ಟುಕೊಳ್ಳಲು ಒಪ್ಪಿದವರು, ನಂತರದಲ್ಲಿ ಮನೆಯ ಮನುಷ್ಯರ ತರಾನೇ ಅದನ್ನು ನೋಡಿಕೊಳ್ಳಲು ತೊಡಗಿದ್ರು. ರಾಮು ಅಂತ ಅದರ ಹೆಸರು. ವಾರಕ್ಕೆ ಎರಡು ಸರ್ತಿ ಸೋಪ್ ಹಾಕಿ ಸ್ನಾನ ಮಾಡಿಸೋರು. ಅದು ಹೊರಗೆ ಓಡಾಡಿ ಬಂದರೆ ಅದಕ್ಕೆ ಕಾಲು ತೊಳೆಸಿ ಒಳಗೆ ಕರ್ಕಂಬೇಕಿತ್ತು, ಬೆಡ್ ಮೇಲೆ ಸೊಳ್ಳೆ ಪರದೆ ಕಟ್ಟಿ ರಗ್ ಹೊದೆಸಿ ಮಲಗಿಸ್ತಿದ್ದರು. ಈ ರೀತಿ ನಾಯಿ ಸಾಕಿದ ಇನ್ನೊಬ್ಬರನ್ನು ನಾನು ಇದುವರೆಗೆ ನೋಡಿಲ್ಲ.

ನಾಯಿಗೆ ಸಂಬಂಧಪಟ್ಟಂತೆ ತೇಜಸ್ವಿ ಹೇಳಿದ ಒಂದು ಘಟನೆ ಇನ್ನೂ ನೆನಪಿನಲ್ಲಿದೆ. ಒಂದಿನ ತೇಜಸ್ವಿ ಅವರ ಮನೆ ಗೇಟ್ ಹತ್ತಿರ ನಿಂತು ಎದುರಿಗೆ ಎಡಬಿಡದೇ ಧೂಳೆಬ್ಬಿಸುತ್ತಾ ಓಡಾಡ್ತಿದ್ದ ಲಾರಿಗಳನ್ನ ನೋಡಿ ತಮ್ಮಷ್ಟಕ್ಕೆ ತಾವೇ "ಏನು ಲಾರಿಗಳೋ ಏನೋ, ದರಿದ್ರದವು ಮೂರು ಹೊತ್ತು ಕಿವಿ ಹೊಡ್ಡೋಗೊವಷ್ಟು ಶಬ್ದ ಮಾಡ್ತಿರ್ತಾವೆ" ಅಂತ ಬಯ್ತಾ ಇದ್ರಂತೆ. ಅಲ್ಲೆ ಇದ್ದ ಅವರ ನಾಯಿಗೆ ಇವರ ಮಾತು ಹೇಗೆ ನಾಟಿತೋ? ಕೂಡಲೇ ಎದುರಿಗೆ ಹೋಗುತ್ತಿದ್ದ ಲಾರಿಯ ಬೆನ್ನು ಹತ್ತಿ ಓಡುತ್ತಾ ಹೋಯ್ತಂತೆ. ನೋಡಿದ್ರೆ ಆ ನಾಯಿ ಮುಂದಿನ ಟರ್ನಿಂಗ್‌ನಲ್ಲಿ ಲಾರಿಯನ್ನೆ ಅಡ್ಡ ಹಾಕಿ ನಿಂತು, ಲಾರಿ ಅದರ ಮೇಲೆ ಹರಿದು ಕ್ಷಣಾರ್ಧದಲ್ಲಿ ನಾಯಿ ಕಲಾಸ್. "ಈ ಪ್ರಾಣಿಗಳ ಎದುರಿಗೆ ಏನೂ ಹೇಳಬಾರದು ಕಣ್ರಿ. ಅವು ಗ್ರಹಿಸಿಬಿಡುತ್ತವೆ. ನಾವೇನೋ ಸಿಟ್ಟಿಗೆ ಯಾರ್‍ಯಾರನ್ನೋ ಬಯ್ತಾ ಇರ್ತೀವಿ. ಅವಕ್ಕೆ ಇಂಥದು ನಮ್ಮ ಶತ್ರು ಅಂಥ ಅರ್ಥ ಆದರೆ ಅವು ಏನೋ ಮಾಡ್ತವೆ. ಎಷ್ಟು ವಿಚಿತ್ರ ಪ್ರಾಣಿಗಳ ಮನಸ್ಸು, ನಮಗೆ ಅರ್ಥವೆ ಆಗಲ್ಲ ಅಂತಿದ್ರು" ತೇಜಸ್ವಿ.

ವಿವಿಧ ಜಾತಿನಾಯಿಗೆಳನ್ನು ಸಾಕುವ ನನ್ನ ಹುಮ್ಮಸ್ಸು ಕಡಿಮೆಯೇನಾಗಿರಲಿಲ್ಲ, ಆದರೆ ಒಮ್ಮೆ ಹೊಳೆಹೊನ್ನೂರಿಗೆ ಒಬ್ಬ ಕೆಟ್ಟ ಪಶು ಡಾಕ್ಟರ್ ಬಂದ. ಅವನ ಕಾಲದಲ್ಲಿ ನಾನು ಸಾಕಿದ ಹಲವಾರು ನಾಯಿಗಳು ಯಾವುದೋ ಕಾಯಿಲೆಗೆ ಯಾವುದೋ ಔಷಧಿ, ಇಂಜೆಕ್ಷನ್ ಹಿಂಗೆಲ್ಲ ಮಾಡಿ ಸತ್ತೆ ಹೋದ್ವು. ಆಗ ಬೇಜಾರಾಗಿ ನಾಯಿ ಸಾಕೋ ಹುಮ್ಮಸ್ಸೆ ಹೊರಟು ಹೋಯ್ತು, ಜೊತೆಗೆ ವಯಸ್ಸೂ ಆಯಿತಲ್ಲ. ಈಗ ನಮ್ಮ ಮನೆಯಲ್ಲಿ ಮರಿಯಣ್ಣ ಅನ್ನೋ ಮೌಂಟ್ ಟೆರ್‍ರಿಯರ್ ಜಾತಿಯ ಒಂದೆ ಒಂದು ನಾಯಿಯಿದೆ.

(ಮುಂದುವರೆಯುವುದು)

# ಪಾಕೀಸ್ತಾನಕ್ಕೆ ಬೋದ್ರೆ ನಮಿಗೇ ಬೋದ್ರು ಅನ್ನಕತ್ತವಲ್ಲ ಇವ

ಉಗ್ಗಿ ಬರುವುದನ್ನೇ ಕಾಯುತ್ತಿದ್ದಂತೆ ಕಂಡ ಜುಮ್ಮಿ, "ಯಾರ್‍ಯಾರು ಗೆಲ್ತರೆ ಹೇಳ್ ಉಗ್ಗಿ?" ಎಂದಳು.

"ಯರಡೆ ಪಾರ್ಟಿ ಇದ್ದಾಗ ಹೇಳಬವುದಿತ್ತು. ಈಗ ಮೂರು ಪಾರ್ಟಿ ಆಗಿರದ್ರಿಂದ ಹೇಳದು ಕಷ್ಟ ಕಣೆ" ಎಂದ.

"ಮದ್ದೂರಲ್ಲಿ ಯಾರು ಗೆದ್ದರ್ಲ?"

"ಅಂಗೇ ಹಿಂತಿರಿಕಂಡು ನೋಡಿದ್ರೆ ಗಂಡ ಸತ್ತೋರ್‍ಯಲ್ಲ ಗೆಲ್ತ ಬಂದವುರವ್ವ. ನಾಗೇಗೌಡ ಸತ್ತ ಅವುನೆದ್ದಿ ಗೆದ್ಲು, ನಾಗಪ್ಪ ಸತ್ತ ಅವುನೆದ್ದಿ ಗೆದ್ಲು. ಇನ್ನ ಶ್ರೀರಂಗಪಟ್ಟಣ ದಲ್ಲಂತೂ ಮೂರು ಜನ ಗೆದ್ಲು ಬಂದವುರೆ."

**ಹಳ್ಳಿ ಸೀಮೆಯ ಕಟ್ಟೆಪುರಾಣ**

**ಬಿ. ಚಂದ್ರೇಗೌಡ**

"ಅಂಗರೆ ಮದ್ದೂರಲ್ಲಿ ಕಲುಪನ ಗೆಲ್ತಳೆ ಅನ್ನು?"

"ಅಂಗೆ ಕಾಣ್ತದವ್ವ ಇವುರಬ್ಬರ ನೋಡಿದ್ರೆ."

"ಯಸ್ಸೆಂ ಕಿಸ್ನ ಬಂದು ಮನಮನೆ ಗಲ್ಲಿ ತಿರುಗ್ತಯಿದ್ದನಂತೆ?" ಎಂದ ಸೀರ.

"ಅವುನ್ಯಲ್ಲಕ್ಷನ್ನಲೂ ಅಂಗೋಡಾಡ್ತಿಲ್ಲ ಅಂಗೆ ತಿರುಗ್ತ ಅವುನೆ ಕಣೊ."

"ಅವುನ್ಯಾಕ್ ತಿರುಗ್ತಯಿದ್ದನೂ?"

"ತಮ್ಮನ ಮಗನ್ನ ನಿಲ್ಲಿಸಿಗಂಡವುನೆ ಕಣ ಮಾವ. ಅವುನೇನಾರ ಸೋತ್ರೆ ತನ್ನ ಮರಿಯಾದಿ ಹೋದತೂ ಅಂತ ವಳ್ಳೆ ವಿಗ್ಗಾಯ್ಕಂಡು ತಿರುಗಿದ್ದು ತಿರುಗಿದ್ದೆಯಾ. ಆದ್ರು ಆ ಹುಡುಗ ಗೆಲ್ಲದು ಕಷ್ಟ. ಮುಂದೆ ಗೆದ್ದು ಮದ್ದೂರ ಲೀಡ್ರು ಆಗಬವುದು."

"ಹಿಂದುಳದೋರು, ಸಾಬರು ಇವುರ್‍ಯಲ್ಲ ಕಾಂಗ್ರೆಸ್ಸಿಗೆ ಓಟು ಮಾಡಿದ್ರೆ ಗೆಲ್ಲಬವುದು" ಎಂದ ಸೀರ.

"ಸಾಬ್ರು ಸಾರಾಸಗಟು ಕಾಂಗ್ರೆಸ್ಸಿಗೆ ಓಟು ಮಾಡದ ಬುಟ್ಟವುರೆ ಕಣಮಾವ. ದ್ಯಾವೇಗೌಡ ಜಮೀರಮದ್ದನ್ನ ಕೈಗಾಯ್ಕಂಡು ಮೀರಾಜುದ್ದೀನ್ ಪಟೇಲನ್ನು ಅಧ್ಯಕ್ಷನ್ನ ಮಾಡಿದಾಗಿಂದ ವಸಿ ಜನ ಅತ್ರಗವುರೆ."

"ಆ ನಾಗಮಂಗಲದಲ್ಯಾಕ್ಲ ಸಾಬ ಸಾಬರೆ ವಡದಾಡಿದವಂತೆ?"

"ಈ ಬಿಜೆಪಿ ಆರೆಸ್ಸೆಸ್‌ನವು ಸುಮ್ಮನಿದ್ರೆ ಸಾಬಸಾಬರೇ ವಡದಾಡಿಕತ್ತರೆ ಕಣಮಾವ. ಈ ನನಮಕ್ಳು ಬದ್ದಿ ಕೊಡದಂಗೆ ಮ್ಯಾಲುಬದ್ರೆ ಅವು ವಗ್ಗಟ್ಟಾಗಿರತವೆ. ಆ ಪಾಕೀಸ್ತಾನದಲ್ಲೂ ಅಂಗೆಯಾ."

"ಪಾಕೀಸ್ತಾನದವೇನು?"

"ಅದು ಪಾಲು ತಗಂಡಾಗಿಂದ ಕಡದಾಡಿ ಸಾಯ್ತಾಯಿರೊ ದೇಸ ಕಣಮಾವ. ಇಂಡಿಯಾ ದೇಸದೋರು ಸುಮ್ಮನಿದ್ರೆ ಅವುರಿಗವುರೆ ಹ್ವಡದಾಡಿಕಂಡು ಸಾಯ್ತವಂತೆ. ಇವುರೇನಾರ ಮ್ಯಾಲೆ ಬದ್ರೆ ಅವುರ್‍ಯಲ್ಲ ಒಟ್ಟಾಗಿ ನಮ್ಮ ಮ್ಯಾಲೆ ಬತ್ತವೆ."


"ಓ ತಮ್ಮೇಗೌಡನ ಮನಿಯೋರಂಗೆ ಅನ್ನೂ" ಎಂದ ಸೀರ.


"ತಮ್ಮೇಗೌಡನ ಮನೆ ಜಗಳ ತಗಂಡೋಗಿ ಆ ಪಾಕೀಸ್ತಾನಕ್ಕೆ ಓಲಕೆ ಮಾಡ್ತಿಯಲ್ಲೊ ಮಾವ?"

"ಅಂಗೆ ಅಲವೇನ್ಲ ಇವುರು. ತಮ್ಮೇಗೌಡನಿಗೆ ಆರು ಜನ ಗಂಡು ಮಕ್ಕಳು. ತಮ್ಮತಮ್ಮಲ್ಲೆ ಮರದು ಬೀಳ್ತಿದ್ರೊ. ವಬ್ಬ ಮುದ್ದೆ ಕೋಲು ತಗಂಡ್ರೆ ಇನ್ನವಬ್ಬ ಕುಡ್ಕು ತಗತನೆ. ಕಡುದಾಡಿ ಬೀಳ್ತವೆ. ಅದೇ ವರಗಿನೋರು ಜಗಳಕ್ಕೊದ್ರೆ ಯಲ್ಲ ಯಂಗೆ ಬತ್ತವೆ ಅಂತೀ? ಅಂಗೆ ಮರಿನಾಯಿ ಹೇಲ್ಗಿಗೆ ಬಂದಂಗೆ ಬತ್ತಪೆ" ಎಂದು ಸೀರ ನಕ್ಕ.

"ಕರಟ್ ಕಣೊ ಮಾವ ನೀನೇಳಿದ್ದು. ಪಾಕೀಸ್ತಾನದ ಕತೆನೂ ಈ ತಮ್ಮೇಗೌಡನ ಮನೆ ಕತೆನೂ ಒಂದೆ ನೋಡು. ಇಂಡಿಯಾ ದೇಸ ಈಗೇನಾರ ಯುದ್ದ ಮಾಡಿದ್ರೆ ಪಾಕೀಸ್ತಾನದ ಕ್ವಲಿಗುಡುಕ್ರು, ಡಕಾತಿಗಳು, ಕೂನಿ ಮಾಡೋರ್‍ಯಲ್ಲ ಒಂದಾಗಿ ಇಂಡಿಯಾದೇಸದ ಮ್ಯಾಲೆ ಬೀಳಕ್ಕೆ ತಯಾರಾಗಿದ್ದವಂತೆ. ಇವುರೇನಾರ ಸುಮ್ಮನಾದ್ರೆ ಅವುಕವೇ ಕಡದಾಡಿಕಂಡು ಸತ್ತೋದವಂತೆ."

"ಸಾಯಿಲಿಬುಡವುನವುನ್ ಸಾಬರನ್ನಾಡ. ಬಂಬಾಯಿಗೆ ಬಂದು ಜನ ಸಾಯಿಸಿ ನಾವಲ್ಲ ಅಂತ ಕುಂತಿದ್ದವಂತಲ್ಲಾ,






ಇನ್ನಂತ ಕಳ್ಳುಂಗುಟ್ಟದವುಲ ಅವು?" ಎಂದು ಕಾಳಮಾವ ಸಿಟ್ಟಾದ.

"ಅ ದೇಸನೆ ಅಂಗೆ ಕಣಮಾವ. ನಮ್ಮ ದೇಸದಲ್ಲು ವಸಿ ಜನವುರೆ, ಅಂಥೋರ ಏನಾರ ಮಾಡಿ ಅಲ್ಲಿಗೇ ಕಳುಸಬೇಕು."

"ಅಂಥ್ಯೋರಾರಿದ್ದರ್ಲ?" ಎಂದಳು ಜುಮ್ಮಿ.

"ಬಂಬಾಯಿಲಿ ಪೊಲೀಸಾಪೀಸರ್‍ರ ಕೊಂದಿರೋರು ಇಂಡಿಯಾ ದೇಸದೊರೆಯ ಅಂತ ಹೇಳತ ಕುಂತವುರೆ, ಇದಕೇನೇಳ್ತೀ?"

"ಅದ್ಯಾರಂಗಂದೋರು?"

"ಯಾವನೊ ತಲಿಕೆಟ್ಟ ಸಾಬ ಅಂದಿಲ್ಲ, ಇಂದ್ರಾಗಾಂಧಿ ಕಾಲದಲ್ಲಿ ಮಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಅಂಟುಲೆ ಅಂತ. ನಂಜಣ್ಣುಂತ ವಯಸ್ಸಾದ ಕ್ವಾಣೆತ್ತು ನೋಡು, ಅಂಗವುನೆ ಮುಂದೆ ಮಗ. ಅವುನು ಅಂಗಂದ ಅಂ... ಅವುನ್ನೆಲ್ಲಿಗೆ ಕಳುಸಬೇಕೇಳು?" ಎಂದ ಉಗ್ರಿ.

"ಎಲ್ಲಿಗೆ ಕಳಿಸೀ? ಬಂಬಾಯಿ ಜನ ಕೊಲ್ಲಕ್ಕೆ ಅಂ... ಬಂದೋನೆ ಕಿಸಗಂಡು ಬಿದ್ದವುನೆ. ಅವುನೆ ಪಾಕೀಸ್ತಾನಕ... ಬ್ಯಾಡವಾದೋನಾಗಿ ಅಳತ ಕುಂತವುನೆ ಅಸ್ನದಾದ್ರೆ ... ಸೂಳೆಮಗನ್ನ ಯಾರು ಸೇರುಸ್ತರ್ಲ?"

"ಅದ ಈ ಸಾಬ್ರು ತಿಳಕಬೇಕಲ್ಲ ಹೇಳು."

"ಕೆಲವು ಸಾಬ್ರು ನಾವು ಪಾಕೀಸ್ತಾನಕ್ಕೆ ಬೋ... ನಮಿಗೇ ಬೊದ್ರು ಅಂತ ತಿಳಕತ್ತವಲ್ಲ, ಇದಕೇನೇಳ್ತಿಯ... ಉಗ್ರಿ?" ಎಂದು ವಾಟಿಸ್ಸೆ ಬಂದ.

"ಜಾತಿ ಬೋದ್ರೆ ಜಾತ್ಯಸ್ತರ್‍ಯಲ್ಲ ತಿರುಗಿಬೀಳ್ತರೆ. ಜಾ... ಬುಟ್ಟೊನು ಎಲ್ಲಿ ತಿರುಗಿಬದ್ದನೂ? ಆದ್ರೆ ಈ ಸಾಬ... ಮಾತ್ರ ಸಾಯಗಂಟ ಸಾಬ್ರೆ ಕಣೊ" ಎಂದ ಉಗ್ರಿ.

"ಡ್ಯಪನೆಟ್ಟ. ಪಾಪ ಅಲ್ಲೂ ಕೆಲವು ಜಾತಿಪಾ... ನಂಬದವು ಅವೆ ಕಣೊ. ನಾನು ಸಾಬಿಯಲ್ಲ ಅಂದೇಟಿಗೆ... ಮುಲ್ಲಾಸಾಬ್ರು ಮ್ಯಾಲೆ ಬೀಳ್ತರಲ್ಲ, ಅದ್ಕೆ ಅವ... ಬಾಯಿಮುಚಗಂಡು ಸುಮ್ಮನವೆ."

"ಏನೇ ಆಗ್ಲಿ ನಮ್ಮ ಗೌಸಣ್ಣನಿಗೆ ಸರಿಗಟ್ಟೊ ಸಾಬ... ಇಲ್ಲ ಕಂಡ್ಯ, ಸಾಬರ್‍ಯಲ್ಲ ಅಂಗಿದ್ರೆ ಎಷ್ಟು ಚನ್ನಾಗಿರದು..." ಎಂದ ಕಾಳಮಾವ.

"ಸಾಬರ್‍ಯಲ್ಲ ಅಂಗೆಯಿದ್ರು ದ್ವಡಪ್ಪ ಯಾವತ್ತು ಅದ್ವಾಣಿ... ಟೀಮು ಹೋಗಿ ಬಾಬರಿ ಮಸೀದಿ ಕೆಡಗಿದ್ರೊ ಅವತ್ತಿಂದ... ಸಾಬರ ತಲಿಯಲ್ಲ ಕೆಟ್ಟೋಯ್ತು."

"ಅದ್ವಾಣಿ ಅಂತ ಕ್ಯಲಸಕ್ಕೆ ಕೈ ಹಾಕಬಾರದಿತ್ತು ಕಂಡ್ಯ..."

"ನೀನಂಗಂತಿ, ಅವುನಿಗೆ ಪ್ರಧಾನಿಯಾಗಬೇಕು ಅಂತ... ಅನ್ನಿಸಿದಾಗ ಕಂಡ ದಾರಿ ಅದೆಯಪ್ಪ"

"ಮುಂದೆ ಪ್ರಧಾನಿಯಾಗಕ್ಕೆ ಮಾಯಾವತಿ... ವಂಟದ್ದಳಂತಲ್ಲೊ?"

"ಅವುಳ ಕತೆ ಮುಗಿತು ಕಣೊ ಉಗ್ರಿ."

"ಅದೆಲ್ಲಿ ಮುಗುದೆತೊ? ಇಲ್ಲಿ ಬಂದು ನೋಟಿನ... ಹಾರ ಹಾಕಿಸಿಗಂಡೋಗ್ಯವುಳೆ?"

"ನೋಟಿನ ಹಾರ ಹಾಕೋರು ಯಂತ ಕ್ಯಲಸ... ಮಾಡ್ಯವುರೆ ಗೊತ್ತೆ? ಅವುಳು ಹುಟ್ಟಿದಬ್ಬಕೆ ದುಡ್ಡುಬೇಕ...

# ಮಾನ ಇಲ್ಲ ಅಂದದ್ದೇ ಮಾನ ನಷ್ಟ!

ಸಣ್ಣಮಕ್ಕಳಾಗಿದ್ದಾಗ ನಮಗೆ ಮೈಮೇಲೆ ಬಟ್ಟೆ ಇರಲೇಬೇಕು ಅಂತ ಕಡ್ಡಾಯ ಇರಲಿಲ್ಲ. ಹುಟ್ಟಿದ ವೇಷದಲ್ಲೇ ಮನೆಯ ಒಳಗೆ ಓಡ್ತಾಡ್ತಿದ್ದೊ. ಅಪರಿಚಿತರೋ, ನೆಂಟರೋ ಬಂದಾಗ ಅದಕ್ಕೆ ಆಗಾಗ್ಗೆ ಅಡ್ಡಿಯಾಗುತ್ತಿತ್ತು. ಮನೇಲಿದ್ದ ಅಜ್ಜಿ "ಬಡ್ಡಿ ಐದ್ನೋವು ಮಾನಮರ್ಯಾದೆ ಇಲ್ದಂಗೆ 'ಬಲ್ಲ ಮರಿ' ಬಿಟ್ಟ್ಕೊಂಡೇ ಓಡಾಡ್ತಿದಾವಲ್ಲಪ್ಪಾ" ಅಂತ ಕೈಯ್ಯಲ್ಲಿ ಚಡ್ಡಿ ಹಿಡ್ಕಂಡು ಹುಸಿಕೋಪ ನಟಿಸುತ್ತಾ ಹಿಡಿಯಕ್ಕೆ ಬರ್ತಿತ್ತು. ನಾವು ಪುಟ್ಟ ಹೆಜ್ಜೆ ಇಡ್ತಾ ನಗ್ತಾ ಓಡ್ತಿದ್ದೊ. ನಮ್ಮನ್ನ ಹಿಡಿದದ್ದೇ ತಡ ಬೊಚ್ಚು ಬಾಯಲ್ಲಿ ನಗ್ತಾ 'ಬಲ್ಲ ಮರಿ'ಗೆ ಮುತ್ತು ಕೊಟ್ಟು ಬಲವಂತವಾಗಿ ಚಡ್ಡಿ ಹಾಕ್ತಿತ್ತು. ನೆರೀಕರ ಮುಂದೆ ಮಾನ ಕಾಪಾಡಿದೆ ಅಂತ ಖುಷಿ ಪಡ್ತಿತ್ತು. ಓಹೋ 'ಮಾನ' ಅಂದರೆ 'ಅದು' ಅಂತ ತಿಳ್ಕೊಂಡೊ.

ಸನ್ಮಾನ್ಯ ಯಡ್ಯೂರಪ್ಪನವರು ನನ್ನ ಮಾನನಷ್ಟ ಆಗಿದೆಯೋ ಅಂತ ಮಾಧ್ಯಮದವರ ಮುಂದೆ ಗೋಳಾಡಿದ್ದು ಕಂಡು ಬಾಲ್ಯದ ಸನ್ನಿವೇಶ ನೆನಪಾಯಿತು. ನಮ್ಮ ತರಹ ಮಾನ ಬಯಲಾಗಿದ್ದರೆ ನಮ್ಮಜ್ಜಿ ತರಹ ಪ್ರಯೋಗ ನಡೆಸಿ ಅದನ್ನು ತುಂಬಬಹುದಾಗಿತ್ತು. ಇದು ಬೇರೆ ರೀತಿಯ ಮಾನ ಅಂತೆ. ಮೇವರಿಕ್ ಹಗರಣದಲ್ಲೂ ಅವರ ಮಾನ ನಷ್ಟ ಆಗಿತ್ತು. ಅದರ ಪರಿಹಾರಕ್ಕೆ ನ್ಯಾಯಾಲಯಕ್ಕೆ ಹೋಗ್ತೀವಿ ಅಂದಿದ್ದರು. ಆದರೆ ಇನ್ನೂ ಹೋಗಿಲ್ಲ. ಅಮ್ಮಮ್ಮ ಅಂದರೆ ಅಲ್ಲಿ ಆರೋಪಿಗಳಿಗೆ ಒಂದಷ್ಟು ದಂಡ ಹಾಕಬಹುದು. ಮಾನನಷ್ಟಕ್ಕೆ ಇಂತಿಷ್ಟು ಪರಿಹಾರ ನೀಡಬೇಕು ಅಂತ ಆದೇಶ ಬರಬಹುದು ಅಂದರೇನಾಯಿತು, ಒಂದಷ್ಟು ಹಣ ನೀಡಿದರೆ ಅವರ ಹೋದ ಮಾನ ಹಿಂತಿರುಗುತ್ತೆ!

ಈಗ ಮಾನ ಹೋಗಿರುವುದು ನೈಸ್ ಕಂಪನೀಯಲ್ಲಂತೆ. ಹೇಳಿಕೇಳಿ ಆ ಕಂಪನಿ ಸ್ಥಾಪಿಸಿರೋದೆ ಹಣಗಳಿಸೋಕೆ. ನಷ್ಟ ಆಗಲಿ ಅಂತ ಯಾರೂ ಯಾವ ಉದ್ಯಮವ್ನೂ ಸ್ಥಾಪಿಸೋಲ್ಲ ಅಲ್ಲವಾ. ನ್ಯಾಯಾಲಯದ ತೀರ್ಪು ಪುರಾವೆಗಳ ಆಧಾರದ ಮೇಲೆ ಇರುವುದರಿಂದ ನೈಸ್ ಪರವಾಗಿಯೇ ಬಂತಂತೆ!


ಪಾಪ ಮುಖ್ಯಮಂತ್ರಿಗಳು ನ್ಯಾಯಾಲಯದ ವಿರುದ್ಧ ಹೋಗುವುದು ತರವಲ್ಲ ಅಂತ ಆದೇಶವನ್ನು ಜಾರಿಗೆ ತಂದರು. ನ್ಯಾಯಾಲಯದ ಆದೇಶವನ್ನು ಜಾರಿಗೆ ತರುವುದೂ ಅಪರಾಧವೆ ಎಂಬುದು ಈ ಮುಗ್ಧರ ಪ್ರಶ್ನೆ. ಆದರೆ ದುರಂತ ನೋಡಿ. ಮಾಜಿ ಪ್ರಧಾನಿಗಳಾದ ಎಚ್.ಡಿ. ದೇವೇಗೌಡರು ಇದನ್ನು ಒಪ್ಪಲು ಸಿದ್ಧರಿಲ್ಲ! ನೈಸ್ ಕಂಪನಿಯ ಜೊತೆ ಯಡ್ಯೂರಪ್ಪ ಶಾಮೀಲಾಗಿದಾರೆ ಎನ್ನುವುದು ಅವರ ಆರೋಪ!

ಮಾನಧನರಾದ ಯಡ್ಯೂರಪ್ಪ ಇಂತಹ ಆರೋಪ ಬಂದರೆ ಏನು ಮಾಡಬೇಕು?

ಕಾನೂನು ತಜ್ಞರೊಂದಿಗೆ ಸಮಾಲೋಚಿಸಿದರು. ಅವರ ಹಿತೈಷಿಗಳೂ ಹೇಳಿದರು–ಇದು ಮಾನನಷ್ಟ ಮೊಕದ್ದಮೆ ಹೂಡಲು ಫಿಟ್ ಕೇಸು!

ಸರಿ ಇಷ್ಟಾದ ಮೇಲೆ ಇನ್ನೇನು?

ಹಣಕ್ಕೆ ಹೆದರುವಂತಿಲ್ಲ, ಸರ್ಕಾರದ ಬೊಕ್ಕಸ ಇದೆ!




ಸಾರಿದರು–ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ!

ಇಲ್ಲಿಗೆ ಒಂದು ಅಂಕ ಮುಗಿಯಿತು.

ಎಚ್.ಡಿ. ಕುಮಾರಸ್ವಾಮಿ ಎಂಟ್ರಿ ತೆಗೆದುಕೊಂಡರು.

ಯಡ್ಯೂರಪ್ಪನವರಿಗೆ ಮಾನ ಇದೆಯೆ?

ಮೂಲಭೂತ ಪ್ರಶ್ನೆ.

ಇದು ತಿಳಿದುಬಂದಿಲ್ಲ, ಅವರನ್ನು ಭ್ರಷ್ಟಾಚಾರಿ ಅಂದವರ ಬಾಯಿಗೆ ಹುಳ ಬೀಳಲಿ!

ಯಾರು ಹೇಳಿದರು ಇದನ್ನು?

ಸ್ವತಃ ಯಡ್ಯೂರಪ್ಪನವರ ಬಾಯಿಂದ ಹೊರಬಿದ್ದ ಅಮೃತ ವಾಕ್ಯ!

ಇತರೆಡೆ ಹೇಗೋ ತಿಳಿದಿಲ್ಲ, ನೈಸ್ ವ್ಯವಹಾರ ದಲ್ಲಂತೂ ಅವರ ಮಾನ ಹಾನಿ ಆಗಿದೆ ಅಂದಾಯಿತು!

ಇಲ್ಲವಂತೆ. ಯಡ್ಯೂರಪ್ಪಗೆ ಮಾನವೇ ಇಲ್ಲ ಎನ್ನುವುದು ಕುಮಾರಣ್ಣನ ಅಧಿಕೃತ ನಿಲುವು! ಮಾನ ಇದ್ದರೆ ಅಲ್ಲವೆ ಮಾನನಷ್ಟ ಆಗುವುದು ಎಂಬುದು ಅವರ ಪ್ರಶ್ನೆ.

ಇಂತಹ ಉದ್ಧಟನಿಗೆ ತಕ್ಕ ಪಾಠ ಕಲಿಸಬೇಕು.

ಏನು ಮಾಡಬಹುದು ಮಾನ್ಯರು?

ಮಾನನಷ್ಟ ಮೊಕದ್ದಮೆ ಹೂಡಬಹುದು!

ಯಾವುದಕ್ಕೆ ಈ ಮೊಕದ್ದಮೆ?

ಮಾನ ಇಲ್ಲ ಅಂದದ್ದಕ್ಕಾಗಿ ಮಾನನಷ್ಟ!

## ಸತ್ಯ ಶೋಧನೆ!

ಯಡ್ಯೂರಪ್ಪಗೆ ಡಾಕ್ಟರೇಟ್!

ಯಾವ ಸಾಧನೆಗಾಗಿ ಸಂದಿದೆ ಈ ಗೌರವ?

'ಆಪರೇಷನ್ ಕಮಲಕ್ಕೆ' ಅಂತ ಕೆಲವರು 'ಪ್ರಜಾಪ್ರಭುತ್ವ ಮೌಲ್ಯಗಳನ್ನು ಅಳಿಸಿದ್ದಕ್ಕೆ' ಅಂತ ಕೆಲವರು 'ಸುಳ್ಳು ಭರವಸೆಗಳನ್ನು ನೀಡುತ್ತಿರುವುದಕ್ಕೆ' ಅಂತ ಕೆಲವರು. ಹೀಗೆ ಒಬ್ಬೊಬ್ಬರೂ ಒಂದೊಂದು ರೀತಿ ಹೇಳಬಹುದು. ಆದರೆ ನಿಜವಾದ ಕಾರಣ ಬಯಲು ನಾಟಕದ ಬೃಹನ್ನಳೆ ಸ್ವರೂಪಿಗೆ ಗೊತ್ತು! ಏನು ಕಾರಣ ಅಂದರೆ- ಸತ್ಯ ಶೋಧನೆಗಾಗಿ!

ಯಡ್ಯೂರಪ್ಪಗೆ ಗೋಚರಿಸಿದ ಸತ್ಯವಾವುದು?

ಅವರು ರೈತನ ಮಗ ಅಲ್ಲವಾ. ಅದಕ್ಕೆ ಅವನ ವಿಚಾರದಲ್ಲೇ ಸತ್ಯ ಶೋಧನೆ ಮಾಡಿದ್ದಾರೆ! ಅದೇನೆಂದರೆ–ರೈತ ತಾನು ಪಡೆದ ಸಾಲವನ್ನು ಒಮ್ಮೆ ಮಾತ್ರ ಬಳಸಿಕೊಳ್ಳುತ್ತಾನೆ ಎಂಬುದು!

ಈ ವಿಷಯ ಸ್ಯಾಗಿನಾವ್ರೋ ವಿಶ್ವವಿದ್ಯಾಲಯದ ಆಡಳಿತ ವರ್ಗವನ್ನು ಪುಳಕಿತರನ್ನಾಗಿಸಿತಂತೆ. ಅದಕ್ಕೇ ಗೌರವ ಡಾಕ್ಟರೇಟ್ ನೀಡಿದರಂತೆ!

ಕೈಗಾರಿಕೋದ್ಯಮಿ ಸಾಲ ಪಡೆದರೆ ಏನು ಮಾಡ್ತಾನೆ?

ಹಲವಾರು ಬಾರಿ ತನ್ನ ವ್ಯವಹಾರಕ್ಕೆ ಬಳಸುತ್ತಾನೆ!

ಬೀಡಾ ಅಂಗಡಿಯವನೇನು ಮಾಡುತ್ತಾನೆ?

ಪ್ರತಿನಿತ್ಯ ಬಳಕೆ ಮಾಡುತ್ತಾನೆ!

ಆದರೆ ರೈತ ಒಮ್ಮೆ ಮಾತ್ರ ಬಳಸುತ್ತಾನೆ!

ಪ್ರಪಂಚದ ಯಾವ ಆರ್ಥಿಕ ತಜ್ಞನಿಗೂ ಇದು ಹೊಳೆದಿರಲಿಲ್ಲ, ಯಡ್ಯೂರಪ್ಪನವರಿಗೆ ಹೊಳೆಯಿತು!

ಸಿದ್ಧರಾಮಯ್ಯನವರೂ ರೈತರ ಸಾಲದ ಮೇಲಿನ... ಬಡ್ಡಿದರ ಇಳಿಸಿದ್ದರಲ್ಲ? ಅವರಿಗೂ ಡಾಕ್ಟರೇಟ್... ನೀಡಬಹುದಲ್ಲ ಎನ್ನುವ ಮೂರ್ಖರಿಗೆ ಈ ಆಧುನಿಕ... ಶಿಖಂಡಿ ಸೂಕ್ತ ಉತ್ತರ ನೀಡಿದ್ದಾರೆ. ಅದು ಏನಪ್ಪ... ಎಂದರೆ: 'ಹಣ್ಣು ಮರದಿಂದ ಬೀಳುತ್ತೆ ಎನ್ನುವುದು... ಎಲ್ಲರಿಗೂ ಗೊತ್ತು, ಆದರೆ ಯಾಕೆ ಬೀಳುತ್ತೆ ಎಂದು... ತಿಳಿಸಿದವರಿಗೆ ಬಹುಮಾನ!'

ಆಹಾ ಎಂತಹ ಅರ್ಥತಜ್ಞ ಈ ಯಡ್ಯೂರಪ್ಪ!

**ಅಣಕ**

**ಎಚ್.ಎಲ್. ಕೇಶವಮೂರ್ತಿ**

ಡಾಕ್ಟರ್ ಯಡ್ಯೂರಪ್ಪನವರು ತಮ್ಮ ಅಪೂರ್ವ... ಸಂಶೋಧನೆಗಾಗಿ ದೊರೆತಿರುವ ಗೌರವ ಪ್ರಶಸ್ತಿಯನ್ನು... ಕನ್ನಡದ ಐದೂವರೆ ಕೋಟಿ ಜನತೆಗೆ ಅರ್ಪಿಸಿದ್ದಾರೆ... ಅಂದರೆ ಇನ್ನು ಮುಂದೆ ಕನ್ನಡ ಕುವರ ಕುವರಿಯರೆಲ್ಲ... ಡಾಕ್ಟರ್‌ಗಳೇ! ಅದೇಗ್ರಿ ಸಾಧ್ಯ ಅಂದರೆ ಈ ಗೌರವ... ಡಾಕ್ಟರೇಟನ್ನು ಹೆಸರಿನ ಮುಂದೆ ಬಳಸುವಂತಿಲ್ಲ ಆದರೂ... ಬಳಸುತ್ತಾ ಇಲ್ವಾ ಮಹಾಮಹಿಮರು. ಹಾಗೇ... ನಾವೂನೂ....

## ಹದ್ದಿನ ಕಣ್ಣು

ಚುನಾವಣೆಯಲ್ಲಿ ಅವ್ಯವಹಾರ ನಡೆಯುವಂತಿಲ್ಲ...

ಆಯೋಗ ಹದ್ದಿನ ಕಣ್ಣು ಇಟ್ಟಿದೆ.

ಮದ್ಯದ ಅಂಗಡಿಗಳನ್ನು ಮುಚ್ಚಿಸಿದೆ.

ಆದರೂ ಬೀದಿಯಲ್ಲಿ ಅಮಾಲು ದುಮಾಲು... ಮತದಾರ! ಕೈಯ್ಯಲ್ಲಿ ಗರಿಗರಿ ನೋಟು!

ಚುನಾವಣಾ ಆಯೋಗದ ಹದ್ದಿನ ಕಣ್ಣಿಗೆ ಎಲ್ಲೋ... ಪೊರೆ ಬಂದಿರಬೇಕು. ಆಪರೇಷನ್ ಮಾಡಿಸಿಕೊಂಡರೆ... ಉತ್ತಮ!

## ಮಾಯ ಕೊಲೆ!

ಬಹುಜನ ಸಮಾಜ ಪಕ್ಷದ ಮುಖ್ಯಸ್ಥೆ ದಲಿತ ... ಬೇಟಿ ಮಾಯಾವತಿ ಪ್ರಧಾನಿಯಾಗಿ ಬಿಟ್ಟಾರು ಅಂ... ಇಲ್ಲದ ಅಡಚಣೆಗಳನ್ನು ಒಡ್ಡುವುದರಲ್ಲಿ ಸವರ್ಣೀಯರು... ನಿರತರಾಗಿರುವಂತಿದೆ. ಪಾಪ ಮುಂದಿನ ತಿಂಗಳ... ಹದಿನೈದನೇ ತಾರೀಖು ಆಕೆ ಹುಟ್ಟಿದ ದಿನ. ಅದ... ಒಂದು ಸಾವಿರ ರೂಪಾಯಿ ದೇಣಿಗೆ ಸಂಗ್ರಹಿಸಬೇಕು... ಪ್ರಧಾನಿ ಆಗಬೇಕಾದರೆ ಹಣ ಮುಖ್ಯ ಅನ್ನೋದು ಅವರ...

ಮು ಅಂತ ಇಂಜಿನಿಯರ್ ಮನಿಗೋಗಿ ಕೇಳ್ಯವುರೆ. ಅವುನ್ಯಾರೊ ಬಜಾತಿಯೋನು, ಕೊಡದಿಲ್ಲ ಆದೇನು ಮಾಡಿಕತ್ತಿರೊ ಮಾಡಿಕಳಿ ಅಂದವುನೆ. ಇವುರು ಸಿಕ್ಕಸಿಕ್ಕಿತ್ನಕ್ಕೆ ತಿವುದು ಸಾಯಿಸಿಬುಟ್ಕೊಗ್ಯವುರೆ."

"ಸಾಯಿಸೆ ಬುಟ್ರೆ?"

"ಊ ದ್ವಡಪ್ಪ ಅವುಳ ಹುಟ್ಟಿದಬ್ಬಕ್ಕೆ ದುಡ್ಡು ಕೊಡದೋರನ ಸಾಯಿಸಿಬುಡ್ತರೆ ನ್ರೆ. ಅವುಳ್ನೆ ರಾಜಕೀಯವಾಗಿ ಸಾಯಿಸಿದಂಗಲವೆ?"

"ನಿಜ ಬುಡು. ಅಲ್ಲಾ ಎಲ್ಲಿಗೆ ಬಂತಯ್ಯ ದೇಸ?"

"ಅಂಥೋಳತ್ರಕೆ ನಿಮ್ಮ ದ್ಯಾವೇಗೌಡ್ರು ಹೋಗಿ ನೀನೆ ಮುಂದಿನ ಪ್ರಧಾನಿ ನ್ವ ಅಂತನಲ್ಲ, ಇದು ಸರಿಯೆ ದ್ವಡಪ್ಪ?"

"ಅವುನ್ಯಾಕನ್ನಕೋದನು? ಅಮಿಕ್ಯಂಡು ಕುತಗಳ್ಲ."

"ಅಂದಾ ಅಂತ್ಲೆ ಇಟಗೊ. ಅದೇ ನಿಜವೆ? ದ್ಯಾವೇಗೌಡ ಹೇಳಿಕಂಡು ವಿರೊ ಯಾವ ಮಾತು ನಿಜಾಗಿದ್ದವೊ?" ಎಂದ ಉಗ್ರಿ.

"ಅದೂ ನಿಜ. ನಾನು ಸುಳ್ಳಪ್ಪನ ಮಾತ್ನೆ ನಿಜ ಅನ್ನಕಂಡಿದ್ದೆ."

"ಅದೋಗ್ಲಿ, ಅನಿತ ಗೆಲ್ತಳೇನ್ಲ?" ಎಂದಳು ಜುಮ್ಮಿ.

"ನೋಡಕ್ಕ, ನಮ್ಮಲ್ಲಿ ಸಾಮಾನ್ಯವಾಗಿ ವಿಡೋ ವುಮನ್‌ಗಳು ಗೆಲ್ತವುರೆ. ಆದ್ರಿಂದ ಅನಿತಕ್ಕನ ರಿಜಲ್ಟ ಹೇಳದು ತುಂಬಾ ಕಷ್ಟ."

"ಹೆಚ್ಚುಕಮ್ಮಿ ಅವುಳು ಗಂಡಿಲ್ದೊಳಂಗೆ ಕಾಲ ಹಾಕ್ತ ಅವುಳಲವೇನ್ಲ?"

"ಅದಿರಬಹುದು. ಆದ್ರು ಕುಮಾರಣ್ಣ ತಿಂಗಳಿಗೊಂದುಸತಿಲಾರ ಸಿಕ್ತರೋ? ಂದ ಅವ್ಳಲ್ಲ ವರ್ಕಾಗದಿಲ್ಲ. ಅತ್ತೆ ನೋಡ್ರಿ ಅಂತ ಅಳಿಯ ಸ್ಟೈಲು ಡಿದಂಗೆ ಅನಿತಕ್ಕ ಅನಿತಕ್ಕ ಅಂತ ಕುಣಿಯೋ ಕೂಲಿ ಜನ ಒಂದು ಕಡೆ. ನಂಗಿದ್ರು ಪರವಾಗಿಲ್ಲ ಚನ್ನಿಗ ಅನ್ನೊರು ಒಂದು ಕಡೆ. ಇನ್ನ ರಾಜಣ್ಣಾ ಗ್ಯ ಕಣಯ್ಯ ಅನ್ನೊ ಹಳೆ ಜನ ಒಂದು ಕಡೆ ಇರುವಾಗ ಏನ್ನು ಹೇಳಕ್ಕೆ ವಿಲ್ಲ, ಆದ್ರು ಸಿಂಪಲ್ಲಾಗಿ ಒಂದು ಟೋಟ್ಲು ಮಾಡಬವುದು."

"ಯಾವ ಟೋಟ್ಲು?"

"ಈಗ ಹಾಲಿ ನಿಂತಿರೊ ಜನಗಳ್ಯಲ್ಲ ಹಿಂದಿನ ಪಾರ್ಟಿಲಿದ್ದು ಗೆದ್ದು ದ್ರು. ಅಂಗಾಗಿ ಹಳೆ ಪಾರ್ಟಿ ಓಟಿಗೆ ವಸ ಬಿಜೆಪಿ ಪಾರ್ಟಿ ಓಟ ಟ್ಟು ಮಾಡಿ. ಜೊತಿಗೆ ಹಂಚಿರೊ ಕಾಸು, ಸೀರೆ, ವಿಸ್ಕಿನೂ ಟೋಟ್ಲು ದ್ರೆ ಕಾಂಗ್ರೆಸ್ ಜೆಡಿಎಸ್‌ಗಿಂತ ಬಿಜೆಪಿಗಳು ಜಾಸ್ತಿ ಬರಬವುದು ಅಂತ ಮ ಲ್ಯಕ್ಕ."

"ನಿನ್ನ ಲ್ಯಕ್ಕಾಚಾರ ಎಲ್ಡೊ ಒಂದು ಕಡೆ ಕ್ಯಲಸ ಮಾಡಬವುದು ಕಣೊ. ಡ್ರಾರು, ಮಧುಗಿರಿ, ತುರುವೇಕ್ಯರೆಲ್ಲು ಅಂಗೆ ಹೇಳಕ್ಕಾದತೆ?"

"ಅದ್ಯಾಕಂಗೆ ತಲಿಯಲ್ಲ ಮಾತಾಡಿರಿ? ಇವತ್ತು ಸಂದೆಪ್ವೊತ್ತಿಗೆಯಲ್ಲ ತ್ತಾಯ್ತದಪ್ಪ" ಎಂದ ಕಾಳಮಾವ.

"ಗೊತ್ತಾದ ಮ್ಯಾಲೂ ಇಲ್ಲೇನಾರ ಆಗಂಗಿದ್ವತೆ?" ಎಂದ ಸೀರ.

"ಇಲ್ಲ."

"ಯಸಿ ಮತ್ತೆ." ■

---

ಂದೆ. ಕಾರ್ಪೊರೇಟ್ ಸಂಸ್ಥೆಗಳಿಂದ ಇದನ್ನು ಸಂಗ್ರಹಿಸಬಹುದು. ಅವರಿಗೆ ಮು ಮಾತು ಹೇಳಿದರೆ ಹಣದ ಹೊಳೆಯನ್ನೇ ಹರಿಸುತ್ತಾರೆ. ಈ ಸಂಸ್ಥೆಗಳ ಏನು ಎಂಬುದು ಮಾಯಾಗೆ ತಿಳಿದಿದೆ. ಆದಕ್ಕೇ ಅವರಿಂದ ದೇಣಿಗೆ ಸುವುದಿಲ್ಲ, ಪಕ್ಷದ ಮುಖಂಡರಿಂದ ಕಾರ್ಯಕರ್ತರಿಂದ ಹಣ ಸಂಗ್ರಹಿಸಲು ರ್ಧಾನಿಸಿದರು. ಅವರು ಜನರಿಂದ ಸಂಗ್ರಹಿಸಿ ಕೊಡುತ್ತಾರಂತೆ!

ಈ ತೀರ್ಮಾನದಿಂದ ಕಾರ್ಯಕರ್ತರಿಗೂ ಆನಂದ ಆಯಿತು. ಪ್‌ನಿಂದಲೇ ದೇಣಿಗೆ ಸಂಗ್ರಹಕ್ಕೆ ಕೈಹಾಕಿದರು. ಅಧಿಕಾರಿಗಳು ಕೊಂಡವರೂ ಕೊಡುಗೈ ದೊರೆಗಳಾಗೇ ಇದ್ದರಂತೆ. ಒಂದೊಂದು ತರ್ಲೆ ಮಗಳು ಇರ್ತಾರಲ್ಲ, ಅಂತಹವರಲ್ಲಿ ಒಬ್ಬ ಕಾರ್ಯನಿರ್ವಾಹಕ ಇಂಜಿನಿಯರ್ . ಗುಪ್ತಾ. ಖುದ್ದು ಅಲ್ಲಿನ ಶಾಸಕರೇ ಹೋಗಿ ದೇಣಿಗೆ ಕೇಳಿದರೂ ಡೊಲ್ಲ ಅಂದನಂತೆ. ನೋಡಿದ್ರಾ ಆವನ ತಿಮಿರೂ. ಅವನೇನು ಅವರಪ್ಪನ ಯಿಂದ ತಂದು ಕೊಡ್ತಿದ್ನ. ತಾನು ಕಬಳಿಸಿದ ಹಣದಲ್ಲಿ ಸ್ವಲ್ಪ ಭಾಗ ದ್ದ ಅಷ್ಟೇನೆ. ಲಂಚದ ದುಡ್ಡನ್ನು ಬಿಚ್ಚಲ್ಲ ಅಂದರೆ ಏನು ಮಾಡಬೇಕು. ಶೇಖರ್ ತಿವಾರಿ ಸಾಹೇಬರು ತಮ್ಮ ಸಹಚರರಾದ ಮನೋಜ್ ಮತ್ತು ಬಾಟಿಯಾಗೆ ಸೂಚನೆ ನೀಡಿದರಂತೆ. ತನ್ನ ಉದ್ಧಟತನಕ್ಕೆ ಪಾದ ಸೇರುವಂತೆ ನೋಡಿಕೊಂಡರಂತೆ ಅವರು.

ಪೊಲೀಸಿನವರು ಶಾಸಕರನ್ನೇನೋ ಬಂಧಿಸಿದರಂತೆ. ಆದರೆ ಏನು ಪವಾಡ ಹೋಗಿತ್ತು ಅಂತೀರಿ. ಮನೋಜ್ ತ್ಯಾಗಿ ಮತ್ತು ಬಾಟಿಯಾ ಹೆಸರಿನ ಮ ಇಂಜನಿಯರು ಇದ್ದಾರಂತೆ. ಲಂಚದ ಹಣ ಹಂಚಿಕೊಳ್ಳುವುದರಲ್ಲಿ ಗೂ ಗುಪ್ತಾಗೂ ಘರ್ಷಣೆ ಆಗಿ ಸಿಟ್ಟಿನ ಬರದಲ್ಲಿ ಕೊಲೆ ಆಗಿದೆ ಮದು ಪೊಲೀಸ್ ತನಿಖೆಯಿಂದ ಹೊರಬಂದಿರುವ ಸತ್ಯಸಂಗತಿ!

ಲಂಚದ ಹಣ ಹಂಚಿಕೆಯಲ್ಲಿ ಸಂಭವಿಸಿರುವ ಕೊಲೆ ಎಂದು ತಿಳಿದಿದ್ದರೂ ಉತ್ತರ ಪ್ರದೇಶದ ಮುಖ್ಯಮಂತ್ರಿ ಹಾಗೂ ಭಾವೀ ಪ್ರಧಾನಿಯವರು ಇಂಜನಿಯರ್ ಪತ್ನಿಗೆ ಐದು ಲಕ್ಷ ರೂಪಾಯಿ ಪರಿಹಾರ ನೀಡಿರುವುದೇ ಕೆ ಸರ್ಕಾರಿ ಉದ್ಯೋಗದ ಭರವಸೆಯನ್ನು ನೀಡಿದ್ದಾರೆ! ಇಂತಹ ಾಮಯಿಯ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಇದೂ ಕೆ ರಾಜ್ಯ ಪೊಲೀಸರು ಮುಖ್ಯಮಂತ್ರಿ ಮಾಯಾವತಿಗೂ ಈ ಕೊಲೆಗೂ ಪುದೇ ಸಂಬಂಧ ಇಲ್ಲ ಎಂದು ಸಾರಿದ್ದಾರೆ. ಇಷ್ಟಾಗಿಯೂ ಸಿಬಿಐ ಗೆ ಆಗ್ರಹಿಸುತ್ತಿರುವುದು ದಲಿತ ವಿರೋಧಿಗಳ ಸಂಚೇ ಸರಿ! ಎಂದು ಅನುಮಾನ.

ರಾಜಕೀಯ ಕೊಲೆಯಾದ ಸಂದರ್ಭ. ಯಾವುದೇ ರಾಜ್ಯ ಇರಲಿ ತದಲ್ಲಿರುವವರು ಏನು ಮಾಡುತ್ತಾರೆ?

ಸತ್ತವರ ಕುಟುಂಬಕ್ಕೆ ಪರಿಹಾರ ಘೋಷಿಸುತ್ತಾರೆ!


ಕೆಲವು ಸಲ ಘಟನೆಯಲ್ಲಿ ನೊಂದವರೇ ಹೆಚ್ಚಿನ ಪರಿಹಾರದ ಬೇಡಿಕೆ ಡುತ್ತಾರೆ!

ಅದನ್ನು ನೀಡಿದರೂ ಆಯಿತು. ಇಲ್ಲವಾದರೂ ಆಯಿತು.

ಅಲ್ಲಿಗೆ ಮುಗಿಯಿತು ಸರ್ಕಾರದ ಕರ್ತವ್ಯ.

ಇಂತಹ ಪಾತಕೀಕರಣಕ್ಕೆ ಮೂಲ ಕಾರಣಗಳೇನು? ಅದನ್ನು ಹುಡುಕಿ ಕರ್ತರಾದವರನ್ನು ಶಿಕ್ಷಿಸಬಾರದೆ?

ಏನು ಏನಂದ್ರಿ.... ಚೆನ್ನಾಗೇಳಿದ್ರಿ. ಹಾಗೆ ಮಾಡುತ್ತಾ ಹೋದರೆ ಕಾರಣಿಗಳ ಬುಡಕ್ಕೇ ಬರುತ್ತೆ ಅಂದ್ರಾ....! ■




# ಆರೋಗ್ಯವಂತ ಅಧ್ಯಾಪಕ ಗುಂಪು

ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ನಾನು ಬಲ್ಲ ಇಲಾಖೆ. ಇಲ್ಲಿರುವ ಮರುಳಸಿದ್ದಪ್ಪ, ಡಿ.ಆರ್. ನಾಗರಾಜ್; ಕಿ.ರಂ. ನಾಗರಾಜ, ಚಂದ್ರಶೇಖರ ಕಂಬಾರ, ಸಿದ್ದಲಿಂಗಯ್ಯ ಮುಂತಾದವರ ಪ್ರಭಾವಕ್ಕೊಳಗಾದ ಹುಡುಗರು ಎಷ್ಟು ಸೂಕ್ಷ್ಮಜ್ಞರೂ, ಜಾಣರೂ ಆಗುತ್ತಾರೆಂದು ನಾನು ನೋಡಿದ್ದೇನೆ.



ಹುಡುಗರ ಮನಸ್ಸು ಮತ್ತು ಸಂವೇದನೆಯಲ್ಲಿ ಆಸಕ್ತಿಯುಳ್ಳ ಜನರಿವರು. ಹಾಗೆಯೇ ನಮ್ಮ ರಾಜಕೀಯದಲ್ಲಿರುವಂತೆಯೇ ಹಿಂದುಳಿದವರ ಗುಂಪು ಕಟ್ಟಿಕೊಂಡ ಅಧ್ಯಾಪಕರು, ಡಂಬಾಯದ ಬೊಗಳೆ ಬಿಡುವ ಅಧ್ಯಾಪಕರು ಇಲ್ಲಿದ್ದಾರೆ. ವಿದ್ಯಾರ್ಥಿಗಳದು ಎಳೆಯ, ಬೆಳೆಯುವ ಮನಸ್ಸು. ಅವರಲ್ಲಿ ತಮ್ಮ ಪ್ರತಿಭೆಯ ಬಗ್ಗೆ, ತಮ್ಮ ಗ್ರಹಿಕೆಯ ಬಗ್ಗೆ ವಿಶ್ವಾಸ ಹುಟ್ಟಿಸಿ ಬೆಳೆಸಬೇಕಾದದ್ದು ಅಧ್ಯಾಪಕರ ಕರ್ತವ್ಯ, ಹಾಗೆಯೇ ಪ್ರತಿಯೊಬ್ಬ ಹುಡುಗನೂ, ಪ್ರತಿಯೊಬ್ಬ ಹುಡುಗಿಯೂ ಪ್ರಾಮಾಣಿಕತೆ ಮತ್ತು ನಿಷ್ಠುರತೆಯ, ವಿನಯ ಮತ್ತು ದಿಟ್ಟತನದ ಪ್ರತೀಕಗಳಾಗಬೇಕು. ಅಂಥದ್ದನ್ನು ಸಾಧ್ಯಗೊಳಿಸುವ ಜವಾಬ್ದಾರಿ ಇವತ್ತು ಇಡೀ ವಿಶ್ವವಿದ್ಯಾನಿಲಯಕ್ಕೆ ಬದಲಾಗಿ ಕೆಲವು ಗುಂಪುಗಳ ಮೇಲೆ ಇದೆ.

# ಅಂಬೇಡ್ಕರ್ ಮತ್ತು ನೌಕರರು



ಡಾ. ಅಂಬೇಡ್ಕರ್ ಎಷ್ಟು ವಿಷಯಗಳಲ್ಲಿ ಆದರ್ಶವಂತರಾಗಿದ್ದರು ಎಂಬುದು ಅನೇಕರಿಗೆ ಗೊತ್ತಿಲ್ಲ, ಅತ್ಯಂತ ಶಿಸ್ತಿನ ವ್ಯಕ್ತಿಯಾಗಿದ್ದ ಅಂಬೇಡ್ಕರ್ ಸೌಜನ್ಯದ ವ್ಯಕ್ತಿಯೂ ಆಗಿದ್ದರು; ಅವರ ಸನ್ನಡತೆ, ಸ್ಪಷ್ಟ ನಿಲುವು ಪ್ರಖ್ಯಾತವಾಗಿದ್ದವು. ನಿರಂತರ ಶೋಧನೆಯಿಂದ, ಏಕಾಗ್ರತೆಯಿಂದ ತಮ್ಮ ವ್ಯಕ್ತಿತ್ವ ಬೆಳೆಸಿಕೊಂಡರು. ಇಷ್ಟೇ ಮುಖ್ಯವಾದ ಇನ್ನೊಂದು ಮಾತಿದೆ. ಇದನ್ನು ಎಲ್ಲ ನೌಕರರೂ, ವಿದ್ಯಾರ್ಥಿಗಳೂ, ಕಾರ್ಮಿಕರೂ ನೆನಪಿಡಬೇಕು. ಡಾ. ಅಂಬೇಡ್ಕರ್ ಅತ್ಯಂತ ದಕ್ಷ ವ್ಯಕ್ತಿಯಾಗಿದ್ದರು, ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಅವರ ದಕ್ಷತೆ, ಪ್ರಾಮಾಣಿಕತೆಯಲ್ಲಿ ಒಂದು ಭಾಗವನ್ನಾದರೂ ನಮ್ಮ ವ್ಯಕ್ತಿತ್ವದ ಭಾಗವಾಗಿಸಿಕೊಳ್ಳದಿದ್ದರೆ ಅವರನ್ನು ನೆನೆಯುವ ಹಕ್ಕು ನಮಗಿರುವುದಿಲ್ಲ.

# ಕೊನೇ 'ಕಿಕ್ಸ್'

ಇದೆಲ್ಲದರಿಂದ ಹೊರಬರಲು ಒಂದೆರಡು ಪದ್ಯ ಓದುತ್ತೇನೆ. ಎರಡು ಪುಟ್ಟ ಕವನಗಳು ನನ್ನೆದುರಿಗಿವೆ. ಅವುಗಳಲ್ಲೊಂದು ಬದುಕು ಕಳೆದುಹೋಗುವ ಬಗೆಯನ್ನು ಕುರಿತದ್ದು. ಪದ್ಯದಲ್ಲಿ ಹೇಳುವುದು ಕಷ್ಟವಾಗುವುದರಿಂದ ಗದ್ಯದಲ್ಲಿ ಸಾರಾಂಶ ಕೊಡುತ್ತೇನೆ.

1

ನೂರು ವರ್ಷ ಬದುಕಿದವನನ್ನು ದೀರ್ಘಾಯು ಎಂದು ಕರೆಯುತ್ತೇವೆ. ಆದರೆ ಆತ ತನ್ನ ನೂರು ವರ್ಷದಲ್ಲಿ ಅರ್ಧದಷ್ಟನ್ನು ನಿದ್ರೆಯಲ್ಲಿ ಕಳೆದಿರುತ್ತಾನೆ, ಇನ್ನರ್ಧದಲ್ಲಿ ಬಹುಪಾಲನ್ನು ನಿದ್ರೆಯಂತೆಯೇ ಇರುವ ಮುಪ್ಪು ಮತ್ತು ಬಾಲ್ಯದಲ್ಲಿ ಕಳೆದಿರುತ್ತಾನೆ. ಮಿಕ್ಕ ಕೆಲವು ದಿನಗಳಲ್ಲಿ ಅವನ ದುಃಖ ಮತ್ತು ರೋಗಗಳಿರುತ್ತವೆ. ಮಿಕ್ಕ ಕಾಲ ಇನ್ನೊಬ್ಬರ ಸೇವೆಯಲ್ಲಿ ನಾಶವಾಗಿರುತ್ತದೆ.


ಈ ಪುಟ್ಟ ಜೀವನದಲ್ಲಿ ಸಂತೋಷಕ್ಕೆ ಸ್ಥಾನವೆಲ್ಲಿದೆ?

2

ಅವನ ಪುರುಷತ್ವದ ವೈಶಿಷ್ಟ್ಯಗಳನ್ನು ಮೆಚ್ಚಿ ಖುಷಿಯಿಂದ ಅವನ ಕೆಲವು ದೋಷಗಳನ್ನು ಎತ್ತಿ ಎಣಿಸುವರು;

ಪ್ರೀತಿಸುವ ಅವನಿಗಾಗಿ ಅವರು ತಮ್ಮ
ಅಂತರಾತ್ಮವನ್ನೇ ಅರ್ಪಿಸುವರು,
ಆದರೆ ಅವರ ಕಣ್ಣು ಹೃದಯವನ್ನು
ಬಿಚ್ಚಿ ತೋರುವುದಿಲ್ಲ,
ಪ್ರೇಮಕ್ಕಾಗಿ ಇಡೀ ದೇಹ ಕಂಪಿಸುತ್ತಿದ್ದಾಗ ಕೂಡ
ಖಡಾಖಂಡಿತವಾಗಿ 'ಇಲ್ಲ' ಎಂದು ಬಿಡುವರು.
ಹೆಣ್ಣುಗಳ ಕೃಪಾಕಟಾಕ್ಷ ನಿಮ್ಮದಾಗಲಿ:
ಅವು ಈ ವಿಶ್ವದ
ವಿವೇಕಶೂನ್ಯ, ಮೋಹಕ ಜೀವಗಳು .

-ಭರ್ತೃಹರಿ






# ಹಾಯ್ಕುಗಳು

■ ಡಾ. ಸಿ. ರವೀಂದ್ರನಾಥ್

ಕಡಲ ಸೇರಲು ತವಕಿಸಿದ
ನದಿ ತನ್ನ ಸಿಹಿಯನ್ನೇ
ತ್ಯಾಗ ಮಾಡಿತು

ಕಾಲದ ಹಾದಿಯಲ್ಲಿ ನಡೆದಿದ್ದೇನೆ
ನನ್ನಲ್ಲಿರುವ ಪುಟ್ಟ
ಮಗುವನ್ನು ಕರೆದುಕೊಂಡು.....

ಕ್ಷಣಿಕತೆಯನ್ನು ಸಾರುವ
ನೀರಿನ ಗುಳ್ಳೆಗಳು
ಮಗುವಿಗೆ ಖುಷಿಯನ್ನು ನೀಡುತ್ತಿವೆ


ಗಂಟೆಯ ಸದ್ದು
ಸ್ಥಾವರದ ಒಡಲಿಂದ
ಉದಯಿಸುತ್ತಿರುವ ಜಂಗಮ

ನೋವಿನ ಎಳೆ ನನ್ನನ್ನು
ತಟ್ಟಿತು, ತುಂಡರಿಸಿದೆ
ಎರಡಾಯಿತು

ಎಂದೂ ನಿದ್ರಿಸದ
ನಗರದಲ್ಲಿ
ಮೌಲ್ಯಗಳು ಮಲಗಿವೆ

# ಇಂತಹ ಸ್ವಾಮಿಗಳಿಂದ ತುಳುನಾಡು ನಾಶ

ಮಂಗಳೂರಿನ 'ಕರಾವಳಿ ಅಲೆ' ಸಂಜೆಪತ್ರಿಕೆಯ ಮೇಲೆ ದಾಳಿ ಮಾಡಿಸಿದ ಗುರುಪುರದ ವಜ್ರದೇಹಿ ಸ್ವಾಮಿ ಒಬ್ಬ ಸಾಧಾರಣ ಮಂತ್ರವಾದಿ ಎಂದು ಜನರಿಗೆಲ್ಲಾ ಗೊತ್ತು. ಮೂಲತಃ ಬಂಟರ ಜಾತಿಗೆ ಸೇರಿದ ಈ ಸ್ವಾಮಿಯನ್ನು ಬಂಟ ಜನಾಂಗ ಹೇಗೆ ಸಹಿಸಿಕೊಂಡಿದೆಯೊ ಎಂದು ಲೇಖಕರು ಪ್ರಶ್ನಿಸಿದ್ದು ಸರಿ. ಆದರೆ ಈಗ ಬಂಟ ಜನಾಂಗವು ಧರ್ಮವನ್ನು ತರ್ಕಪೂರ್ಣವಾಗಿ ವಿಶ್ಲೇಷಿಸುವ ಶಕ್ತಿ, ಸ್ವಂತ ಬುದ್ಧಿಯಿಂದ ಯಾವುದೇ ಧಾರ್ಮಿಕ ವಿಷಯದಲ್ಲಿ ನಿರ್ಣಯ ಕೈಗೊಳ್ಳುವ ಶಕ್ತಿ ಕಳೆದುಕೊಂಡಿದೆ. ಇವತ್ತು ಬಹಳಷ್ಟು ಬಂಟರು ಡಾಕ್ಟರ್, ಇಂಜಿನಿಯರ್, ವಕೀಲರು, ಲೆಕ್ಚರರ್‌ಗಳು, ವಿಜ್ಞಾನಿಗಳಾಗಿದ್ದರೂ ಅವರೆಲ್ಲ ಸಣ್ಣಸಣ್ಣ ವಿಷಯಕ್ಕೂ ಭಟ್ಟರ ಹತ್ತಿರ ಅಥವಾ ಜ್ಯೋತಿಷಿಗಳಲ್ಲಿ ಹೋಗಿ ಕಣಿ ಕೇಳುತ್ತಾರೆ. ಪೂಜೆ, ಹೋಮ, ಹವನಕ್ಕೆಲ್ಲಾ ಲಕ್ಷಾಂತರ ಸುರಿಯುತ್ತಾರೆ. ಸಂಪತ್ತು ಹೆಚ್ಚಿದಷ್ಟು ಪಾಪಭೀತಿ ಹೆಚ್ಚು ತಾನೆ. ಹಾಗಾಗಿ ಬಂಟರ ಜನಾಂಗದಲ್ಲಿ ವೈಚಾರಿಕತೆ ಸಂಪೂರ್ಣ ಸತ್ತಿದೆ. ಸಿ.ಎನ್. ಶೆಟ್ಟಿ ಎಂಬ ವಿಚಾರವಾದಿಯೋರ್ವರು 30 ವರ್ಷಗಳ ಪರಿಶ್ರಮದಿಂದ ಹಿಂದೂ ಹಾಗೂ ಬೌದ್ಧ ಧರ್ಮಗಳ ಬಗ್ಗೆ ಎರಡು ಸುಂದರ ವೈಚಾರಿಕ ಕೃತಿಗಳನ್ನು ಬರೆದು ಪ್ರಕಟಿಸಿ, ಉಳಿಗಮಾನ್ಯ ಬಂಟರ ಜನಾಂಗದಲ್ಲಿ ಬೇರೆ ಯಾರೂ ಮಾಡದಂತಹ ಕೆಲಸ ಮಾಡಿ ತೋರಿಸಿದ್ದರೂ 95% ವಿದ್ಯಾವಂತ ಬಂಟರಿಗೆ ತಮ್ಮ ಜನಾಂಗದಲ್ಲೂ ಇಂತಹ ಒಬ್ಬ ವಿಚಾರವಾದಿ ಇದ್ದಾರೆಂಬುದೇ ಗೊತ್ತಿಲ್ಲ. ಇಂತಹ ಮನಸ್ಥಿತಿಯ ಬಂಟ ಜನಾಂಗದಿಂದ ಗುರುಪುರದ ಸ್ವಾಮಿಯ ವಿರುದ್ಧ ಯಾವ ಕ್ರಮ ನಿರೀಕ್ಷಿಸಲು ಸಾಧ್ಯ?




ಯಾವುದೇ ಸ್ವಾಮೀಜಿಯ ಕಾಲಿಗೆ ಬೀಳುವ ಭಕ್ತರೆಲ್ಲಾ ತಮ್ಮತಮ್ಮ ಸ್ವಂತ ಸ್ವಾರ್ಥ ಹಿಡಿದುಕೊಂಡೇ ಹೋಗಿರುತ್ತಾರೆಯೇ ವಿನಃ ಇಡೀ ಸಮಾಜದ ಒಳಿತಿಗಾಗಿ ಪ್ರಾರ್ಥಿಸಲು ಅಲ್ಲ. ಯಾವೊಬ್ಬ ಭಕ್ತನೂ ಈ ಸ್ವಘೋಷಿತ ಸ್ವಾಮಿಗೆ ಈ ರೀತಿ ಕೇಳಲು ಧೈರ್ಯ ವಹಿಸಲಾರ: "ನೀವು ಸ್ವಾಮೀಜಿಗಳೆಲ್ಲಾ ದೇವರೊಂದಿಗೆ ನೇರ ಸಂಪರ್ಕ ಹಾಗೂ ದಿವ್ಯದೃಷ್ಟಿ ಹೊಂದಿರುವವರು ತಾನೆ? ಹಾಗಾದರೆ ನಿಮ್ಮ ದೈವೀಶಕ್ತಿ ಉಪಯೋಗಿಸಿ ನಮ್ಮ ನಡುವೆಯೇ ಅಡಗಿರಬಹುದಾದ ಉಗ್ರವಾದಿ, ದೇಶದ್ರೋಹಿ, ಸಮಾಜಘಾತುಕ ಶಕ್ತಿಗಳನ್ನು ಕಾನೂನಿಗೆ ಹಿಡಿಸಿಕೊಟ್ಟು ನೀವು ಹುಟ್ಟಿರುವ ದೇಶಕ್ಕೆ ಸಹಾಯ ಮಾಡುತ್ತಿಲ್ಲವೇಕೆ?"

ಭಾರತದಲ್ಲೇ ಅತಿಹೆಚ್ಚು ಎನ್ನುವಷ್ಟು ಸ್ವಘೋಷಿತ ಸ್ವಾಮಿಗಳು, ಮಠಾಧೀಶರು, ವೇದಮೂರ್ತಿಗಳು ನಮ್ಮ ತುಳುನಾಡಿನಲ್ಲಿದ್ದಾರೆ. ಈ ಕಾರಣಕ್ಕೇ ಇರಬೇಕು ದೇವರ ಹೆಸರಲ್ಲಿ ಈ ತುಳುನಾಡಿನಲ್ಲಿ (ದ.ಕ.-ಉಡುಪಿ) ಅತೀಹೆಚ್ಚು ಹಣದ ಅಪವ್ಯಯವಾಗುತ್ತದೆ, ಇಲ್ಲಿಯ ಜನ ವಿದ್ಯಾವಂತರಾಗಿದ್ದೂ ಅತಿಹೆಚ್ಚು ಮೂಢನಂಬಿಕೆ ಹೊತ್ತಿರುವವರು ಎಂದು ಭಾರತದಲ್ಲೆಲ್ಲಾ ಕುಖ್ಯಾತಿ ಪಡೆದಿದ್ದಾರೆ. ಈ ಮೂಢನಂಬಿಕೆಗಳು ಸಾಂಕ್ರಾಮಿಕವಾಗಿ ಕ್ರೈಸ್ತ ಹಾಗೂ ಮುಸ್ಲಿಮ್ ಸಮಾಜಗಳಿಗೂ ಹಬ್ಬಿವೆ. ಇಡೀ ಭಾರತದಲ್ಲಿ ಮೊಟ್ಟಮೊದಲಿಗೆ ವಿದ್ಯಾಮಂದಿರಗಳನ್ನು ಮಾತ್ರವಲ್ಲ ದೇವಸ್ಥಾನಗಳನ್ನೂ ವಾಣಿಜ್ಯೀಕರಣಗೊಳಿಸಿದ ಕೀರ್ತಿ ನಮ್ಮ ತುಳುನಾಡಿನವರಿಗೆ ಸಲ್ಲುತ್ತದೆ.

## ಒಂದು ಪತ್ರ

ಭಾರತದಲ್ಲಿ ಯಾವುದೇ ವ್ಯಾಪಾರ ಅಥವಾ ಉದ್ಯಮ ನಡೆಸಬೇಕಾದರೂ ಆಯಾ ಫೀಲ್ಡ್‌ನಲ್ಲಿ ಸ್ವಲ್ಪವಾದರೂ ಪರಿಣಿತಿ, ಅನುಭವ ಬೇಕಾಗುತ್ತದೆ. ಆದರೆ ಯಾವುದೇ ಪರಿಣಿತಿ, ಅನುಭವದ ಅಗತ್ಯವಿಲ್ಲದೇ ಯಾವನೇ ಒಬ್ಬ ಸ್ವಾಮೀಜಿಯಾಗಬಲ್ಲ ಹಾಗೂ ಧಾರ್ಮಿಕ ವ್ಯಾಪಾರ ಸಲೀಸಾಗಿ ಮಾಡಬಲ್ಲ, ಕೇವಲ ನಾಲಿಗೆ ಚಾಲಾಕಿ ಇದ್ದರೆ ಸಾಕು. ಮೇಲಾಗಿ ಬೇರೆಲ್ಲಾ ವ್ಯಾಪಾರದಲ್ಲಿ ಸರಾಸರಿ 10 ರಲ್ಲಿ 4 ಜನರಾದರೂ ನಷ್ಟ ಹೊಂದುತ್ತಾರೆ. ಆದರೆ ಧಾರ್ಮಿಕ ವ್ಯಾಪಾರದಲ್ಲಿ ನಷ್ಟವೆಂಬ ಪದವೇ ಇಲ್ಲ, ಅದರಲ್ಲಿ ಕೇವಲ ಲಾಭವೇ ಲಾಭ. ಬಂಡವಾಳ ಸಹ ಬೇಕಾಗಿಲ್ಲ, ಸಾಮಾನ್ಯ ಜನರ ಧಾರ್ಮಿಕ ಅಜ್ಞಾನವೇ ಇವರ ಬಂಡವಾಳ. ಅದೂ ಕೇರಳದ ಮಲ್ಲಾಪುರಂ ಜಿಲ್ಲೆಗೆ ಹೋಗಿ ಸ್ವಲ್ಪ ಜಾದೂ ಕೈಚಳಕ ಕಲಿತು ಬಂದರೆ ಸಾಕು, ದೊಡ್ಡದೊಡ್ಡ ಹಣದ ಕುಳಗಳೆಲ್ಲಾ ಸ್ವಾಮೀಜಿಗಳ ಕಾಲಿಗೆ ಎರಗುತ್ತವೆ. ಅಂತಹ ಹಣವಂತ ಸ್ವಾಮೀಜಿಗಳ ಬೆಂಗಾವಲಿಗೆ ಗೂಂಡಾಪಡೆ ತಾನೇತಾನಾಗಿ ಹುಟ್ಟಿಕೊಳ್ಳುತ್ತದೆ. ಇಂತಹ ಧರ್ಮದ ಕಾವಲುಗಾರರೇ ಈಗ 'ಕರಾವಳಿ ಅಲೆ' ಪತ್ರಿಕೆ ಮೇಲೆ ಗೂಂಡಾಗಿರಿ ಮಾಡುತ್ತಿರುವುದು.

15 ನೇ ಶತಮಾನದಲ್ಲಿ ವಾದಿರಾಜ ಸ್ವಾಮಿ ಎಂಬ ಒಬ್ಬನೇ ಒಬ್ಬ ಗೂಂಡಾಗುರು ಕರಾವಳಿಯಲ್ಲಿ ಶೈವರ ಬಲಾತ್ಕಾರದ ಮತಾಂತರ ಮೂಲಕ ಉತ್ಪಾತ ನಡೆಸಿದ್ದರೆ ಇಂದು ನಮ್ಮಲ್ಲಿ ಅಡಿಗಡಿಗೆ ಗೂಂಡಾಗುರುಗಳು, ಸ್ವಾಮೀಜಿಗಳು, ಮಠಾಧೀಶರು ಇದ್ದಾರೆ. ನಮ್ಮ ಇಡೀ ಹಿಂದೂ ಸಮಾಜಕ್ಕೇನೇ ಗ್ಯಾಂಗ್ರೀನ್ ಆಗಿದ್ದು ಅದು ಹೇಗೆ ಸಾವಕಾಶವಾಗಿ ಕೊಳೆಯುತ್ತಿದೆ ಎಂಬುದಕ್ಕೆ ಸ್ವಾಮೀಜಿಗಳ ಗೂಂಡಾಗಿರಿಯೇ ಸಾಕ್ಷಿ.

ಕೇವಲ ಎರಡು ತಿಂಗಳ ಹಿಂದೆ ಚರ್ಚ್‌ಗಳ ಮೇಲಿನ ದಾಳಿಯ ನಂತರ ಮತಾಂತರದ ಚರ್ಚೆ ಬಿಸಿಬಿಸಿಯಾಗಿ ನಡೆಯುತ್ತಿದ್ದಾಗ, ನಮ್ಮ ಕರಾವಳಿಯ 9 ಜನ ಸ್ವಾಮೀಜಿಗಳು ಹಾಗೂ ಮಠಾಧೀಶರುಗಳು (ನವಗ್ರಹಗಳು) ಒಟ್ಟಾಗಿ ರಾಜ್ಯಪಾಲರಲ್ಲಿ ಹೋಗಿ ಮತಾಂತರ ನಿಷೇಧ ಕಾನೂನು ಜಾರಿಗೊಳಿಸಬೇಕೆಂದು ಒತ್ತಡ ತಂದಿದ್ದರು. ಇದರಿಂದ ಅವರಿಗೆಲ್ಲಾ ಹಿಂದೂ ಸಮಾಜದೊಳಗೆ ಕೆಳಸ್ತರದ ಜಾತಿಗಳವರು ಶತಮಾನಗಳಿಂದ ಅನುಭವಿಸುತ್ತಿರುವ ಘೋರ ನರಕದ ಅಂದಾಜೇ ಇಲ್ಲವೆಂದು ಗೊತ್ತಾಗುತ್ತದೆ. ಈಗಿನ ಕರಾವಳಿಯ ಸ್ವಾಮೀಜಿಗಳಲ್ಲಿ ಒಬ್ಬನೇ ಒಬ್ಬನಾದರೂ ತೀರ ಕೆಳಜಾತಿಯ ಅಥವಾ ದಲಿತ ಸ್ವಾಮೀಜಿ ಇಲ್ಲ. ಇದಕ್ಕೆ ಕಾರಣ ಇಷ್ಟೇ: ದಲಿತನೊಬ್ಬ ಸ್ವಾಮೀಜಿಯಾದರೂ ಅವನು ಎಷ್ಟೇ ಯೋಗ್ಯನಾಗಿರಲಿ, ಮೇಲ್ಜಾತಿಯ ಧನಿಕರು ಅವನ ಭಕ್ತರಾಗುವುದಿಲ್ಲ, ಧನಿಕ ಭಕ್ತರಿಲ್ಲದೇ ಸ್ವಾಮೀಜಿಗಳಿಗೆ ಮಾನ್ಯತೆಯಿಲ್ಲ. ಧನಬಲ-ಜನಬಲ ಇಲ್ಲದಿದ್ದರೆ ರಾಜಕಾರಣಿಗಳ ಪ್ರೋತ್ಸಾಹವಿಲ್ಲ. ಹಾಗಾಗಿ ನಮ್ಮ ಕರಾವಳಿಯಲ್ಲಿ ಎಲ್ಲಾ ಮೇಲ್ಜಾತಿ ಮತ್ತು ಮಧ್ಯಮ ಜಾತಿಗೂ ಒಬ್ಬೊಬ್ಬ ಸ್ವಘೋಷಿತ ಸ್ವಾಮಿ ಅಥವಾ ಮಠಾಧೀಶನಿದ್ದಾನೆ. ಆದರೆ ಒಬ್ಬನೇ ಒಬ್ಬ ದಲಿತ ಸ್ವಾಮೀಜಿಯಿಲ್ಲ, ಮತಾಂತರ ನಿಷೇಧಿಸಬೇಕೆನ್ನುವ ಮೇಲ್ಜಾತಿ ಸ್ವಾಮಿಗಳ ಉದ್ದೇಶ ಇಷ್ಟೆ: ಹಿಂದೂ ಧರ್ಮದೊಳಗೆ ಕೆಳಜಾತಿಗಳವರು ಇರುವತನಕ ಧಾರ್ಮಿಕ ಮೌಢ್ಯ ಹರಡಿ ತಮ್ಮ ತಮ್ಮ ಬೇಳೆ ಬೇಯಿಸಿಕೊಳ್ಳುವುದು ಅತಿ ಸುಲಭ. ಆದಕ್ಕಾಗಿ ಕೆಳಜಾತಿಗಳವರು ಮತಾಂತರವಾಗದೇ ಹಿಂದೂ ಧರ್ಮದೊಳಗೇ ಕೊಳೆಯುತ್ತಾ ಇರಬೇಕು ಮತ್ತು ಮೇಲ್ಜಾತಿ ಸ್ವಾಮಿಗಳ ಪಾದಪೂಜೆ ಮಾಡುತ್ತಿರಬೇಕು. ಆದರೆ ಹರಿಯುವ ನದಿಗೆ ಮಣ್ಣಿನ ಒಡ್ಡು ಕಟ್ಟಿ ಎಷ್ಟು ದಿನ ತಡೆಹಿಡಿಯಲು ಸಾಧ್ಯ?

ಯುರೋಪ್-ಅಮೆರಿಕದಲ್ಲಿ ಮೋಚಿಯ ಮಗ, ಕಸಾಯಿಯ ಮಗ, ನಾಪಿತನ ಮಗ, ಮೀನುಗಾರನ ಮಗ ಚರ್ಚ್‌ನ ಪಾದ್ರಿಯಾಗಿದ್ದಾರೆ. ಇಂತಹದ್ದು ಹಿಂದೂ ಧರ್ಮದಲ್ಲಿ ಸಾಧ್ಯವೇ ಸ್ವಾಮೀಜಿಗಳೇ?

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು




## ಮೌನ


"ನಿಮ್ಮ ಪಾಂಡಿತ್ಯ ಮತ್ತು ಭಕ್ತಿಯಿಂದ ಯಾರಿಗೆ ಏನು ಪ್ರಯೋಜನ? ಗ್ರಂಥಾಲಯದಲ್ಲಿ ವಾಸಿಸುವ ಕತ್ತೆ ಪಾಂಡಿತ್ಯ ಹೊಂದುತ್ತದೆಯೇ? ಅಥವಾ ದೇಗುಲದಲ್ಲಿ ವಾಸಿಸುವ ಇಲಿ ಧಾರ್ಮಿಕ ಶಕ್ತಿ ಪಡೆಯುತ್ತದೆಯೇ?" ಎಂದು ಗುರುಗಳು ಶಿಷ್ಯರನ್ನು ಪ್ರಶ್ನಿಸಿದರು.

"ಹಾಗಾದರೆ ನಮಗೆ ಬೇಕಿರುವುದೇನು?" ಎಂದು ಶಿಷ್ಯರು ಕೇಳಿದರು.

"ಹೃದಯ."

"ಅದು ನಮಗೆ ಎಲ್ಲಿ ಸಿಗುತ್ತದೆ?" ಎಂದು ಶಿಷ್ಯರು ಮತ್ತೆ ಕೇಳಿದಾಗ ಗುರುಗಳು ಉತ್ತರ ನೀಡದೆ ಸುಮ್ಮನಿದ್ದರು.

ಏಕೆಂದರೆ ತಾವು ಹೇಳಿದ್ದನ್ನೆಲ್ಲ ಶಿಷ್ಯರು ಅಧ್ಯಯನದ ಸಾಮಗ್ರಿಯನ್ನಾಗಿಯೋ ಅಥವಾ ಧಾರ್ಮಿಕ ವಸ್ತುವಾಗಿಯೋ ಪರಿವರ್ತಿಸುತ್ತಾರೆ ಎಂದು ಗುರುಗಳಿಗೆ ಚೆನ್ನಾಗಿ ಗೊತ್ತಿತ್ತು.






## ವರ್ಷದ ವ್ಯಕ್ತಿಗಳು 2008

ಸ್ವತಃ ನಮ್ಮ ಸೀಎಮ್ಮೇ ಸರ್ಕಾರಿ ದುಡ್ಡಲ್ಲಿ ಸೀ (sea)ಯನ್ನ ದಾಟಿ ಈ ವರ್ಷ ಅಮೆರಿಕಾದಿಂದಲೇ **imported doctorate** ಪಡೆದುಕೊಂಡು ಹಿರಿಹಿರಿ ಹಿಗ್ಗುತ್ತಿರುವಾಗ ನಮ್ಮ ಮಾನ್ಯ ಸಿಎಂ ಸಾಹೇಬರ "ಬಾಹ್ಯ ಬೆನ್ನೆಲುಬು"ಗಳಾಗಿರುವ ಪೇಜಾವರ, ರಾಘವೇಶ್ವರ, ಚೀಮೂ-ಭೈರಪ್ಪರಂಥವರಿಗೆ ಈ ವರ್ಷ ಪ್ರಶಸ್ತಿಗಳಿಂದ ಗೌರವಿಸದಿದ್ದರೆ ಹೇಗೆ? ಎಂಬ ಸದುದ್ದೇಶವೇ ಈ 2008 ರ ವಾರ್ಷಿಕ ಪ್ರಶಸ್ತಿಗಳದ್ದು.

### 1. ವರ್ಷದ ಚೀಟರ್

ಅಜ್ಜಂಪುರದ ಅಮೃತಮಹಲ್ ಆಸ್ತಿ, ಗೋಕರ್ಣದ ಪ್ರಸಿದ್ಧ ದೇಗುಲಗಳನ್ನೆಲ್ಲ ಉದ್ಧರಿಸುವ (ಯಾರ ಉದ್ಧಾರ ಎಂಬ ಪ್ರಶ್ನೆ ಇಲ್ಲಿ ಅಪ್ರಸ್ತುತ) ಸದುದ್ದೇಶದಿಂದ ಬೆಣ್ಣೆಯಿಂದ ಕೂದಲು ತೆಗೆಯುವಷ್ಟು ಸುಲಭವಾಗಿ ನುಂಗಲು ಸಖತ್ plan ಹಾಕಿ ಯಶಸ್ವಿಯೂ (50-50) ಆಗಿರುವ ಶ್ರೀ ರಾಘವೇಶ್ವರ ಸ್ವಾಮಿಗಳಿಗಾಗಿ ಕೊಡಮಾಡಲಾಗುವ ವ.ಚೀ. ಪ್ರಶಸ್ತಿಯನ್ನು ಸ್ವಯಂ ಸೂಪರ್ ಚೀಟರ್‌ಗಳಾದ ವಿನಿವಿಂಕ್ ಶಾಸ್ತ್ರಿ ಕರೀಂಲಾಲಾನಂತಹವರೇ ಖುದ್ದಾಗಿ ಅನುಮೋದಿಸಿದ್ದಾರೆ ಎನ್ನುವುದೇ ಈ ಸಲದ ಪ್ರಶಸ್ತಿಯ ವಿಶೇಷತೆ.




### 2. ವರ್ಷದ ಜೋಕರ್


ಸ್ವಯಂಘೋಷಿತ ದೇವಮಾನವ cum ದೇಶಭಕ್ತ cum ದಲಿತೋದ್ಧಾರಕ cum ಚರ್ಚ್ ದಾಳಿ ವಿರುದ್ಧ ಎರಡು ದಿವಸ ಉಪವಾಸ ಕೂತೆ ಎಂದು ಪದೇಪದೇ ಹೇಳಿಕೊಳ್ಳುವ ಸರ್ವಧರ್ಮ ಸಹಿಷ್ಣು cum.... ನಂತೆ ಹತ್ತು ಹಲವು cum ಗಳನ್ನು ಧರಿಸಿರುವ ಶ್ರೀ ಪೇಜಾವರ ಸ್ವಾಮಿಗಳು ತಮ್ಮ ಐಲುಪೈಲು ನಡವಳಿಕೆ-ಹೇಳಿಕೆಗಳಿಂದ ಹಾಗೂ ಇತ್ತೀಚಿನ ಬುದ್ಧನ ಕುರಿತ ಬೌದ್ಧಧರ್ಮದ ಕುರಿತ ತಿಕ್ಕಲುತನದ ಹೇಳಿಕೆಗಳಿಂದ ರಾಜ್ಯದ ಸಮಸ್ತ ಜನರಿಗೆ ಸಖತ್ ಮನರಂಜನೆ ನೀಡಿರುವ ಕಾರಣಕ್ಕಾಗಿ ಈ ಸಾರಿಯ 'ವರ್ಷದ ಜೋಕರ್' ಪ್ರಶಸ್ತಿಯನ್ನು ಅವರಿಗಾಗೇ ಕಾದಿರಿಸಲಾಗಿದೆ.



### 3. ಕರಟಕ-ದಮನಕ ಜಂಟಿ ಪ್ರಶಸ್ತಿ

ಜಾತ್ಯತೀತ ರಾಷ್ಟ್ರವೊಂದರ ಸಾಮಾಜಿಕ ಸೌಹಾರ್ದ ಬೆಸೆಯುವಲ್ಲಿ (ಕದಡುವಲ್ಲಿ ಎಂದು ಅರ್ಥೈಸಿಕೊಂಡರೆ ಅದು ನಮ್ಮ ತಪ್ಪಲ್ಲ) ತಮ್ಮದೇ ರೀತಿಯ ಕೊಡುಗೆಗಳನ್ನು ನೀಡುವ ಕುರಿತು ಹಗಲಿರುಳೂ ಚಿಂತೆಯಲ್ಲೇ ಮುಳುಗಿದ್ದು (ಕೆಲಸ ಇಲ್ಲದವನೊಬ್ಬ ಏನೋ ಮಾಡಿದನಂತಲ್ಲ ಹಾಗೆ) ಆ ಬಗ್ಗೆ ಸಿಗುವ ಸಂದರ್ಭಗಳನ್ನೆಲ್ಲ ಸದು(ದು)ಪಯೋಗಿಸಿಕೊಳ್ಳಲು ನರಿಗಳಂತೆ ಹೊಂಚುತ್ತಿರುವ ನಮ್ಮ ಮೆಚ್ಚಿನ ಭೈರಪ್ಪ-ಚಿಮೂ ಜೋಡಿ ಈ ಜಂಟಿ ಪ್ರಶಸ್ತಿಗಾಗಿ ಅವಿರೋಧವಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆಂದು ತಿಳಿಸಲು ಸಂತೋಷಪಡುತ್ತಿದ್ದೇವೆ.






- ಅಧ್ಯಕ್ಷರು, ವಾರ್ಷಿಕ ಪ್ರಶಸ್ತಿ ಸಮಿತಿ, ಗುಪ್ತಮಾರ್ಗ, ನಿಗೂಢ ಸದನ, ಕರ್ನಾಟಕ

# 2008: ಕಳೆದು ಕೊಂಡಿದ್ದು ಇಡುಗಂಟು

2008ರಲ್ಲಿ ಸಿನಿಮಾದವರು ಹಣ ಗಳಿಸಿದ್ದಕ್ಕಿಂತ ಗಂಟು ಕಳೆದುಕೊಂಡಿದ್ದೇ ಹೆಚ್ಚು. ಇತಿಹಾಸದಲ್ಲಿ ಎಂದೂ ನೂರಕ್ಕಿಂತ ಹೆಚ್ಚು ಸಿನಿಮಾಗಳ ಬಿಡುಗಡೆ ಕಾಣದಿದ್ದ ಚಿತ್ರರಂಗ ಈ ವರ್ಷ 117 ಚಿತ್ರಗಳು ತೆರೆಕಂಡಿದ್ದು ಹೆಮ್ಮೆಯ ವಿಷಯವೇ. ಹೀಗಾಗಿ ಸಂಖ್ಯಾ ದೃಷ್ಟಿಯಿಂದ ಉದ್ಯಮ ಬೃಹತ್ತಾಗಿ ಬೆಳೆದಿದೆ ಎಂದು ಹೇಳಬಹುದಾದರೂ ಗುಣಮಟ್ಟದ ದೃಷ್ಟಿಯಿಂದ ಚಿತ್ರೋದ್ಯಮ ಪಾತಾಳಕ್ಕೆ ಕುಸಿದಿದೆ ಎಂದೂ ಹೇಳಬಹುದು.



ಈ ವರ್ಷ ಬಿಡುಗಡೆಗೊಂಡ 117 ಚಿತ್ರಗಳ ಜಾತಕವನ್ನು ನೋಡಿ. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಈ 117ರಲ್ಲಿ ಐದು ಸೂಪರ್! ಹನ್ನೆರಡು ಸುಮಾರು! ಇನ್ನುಳಿದ ನೂರು ಡಮಾರ್!



ಅಂದರೆ 117ರಲ್ಲಿ 100 ಜನ ನಿರ್ಮಾಪಕರು ಇಡುಗಂಟು ಕಳೆದುಕೊಂಡಿದ್ದಾರೆ. 12 ಜನ ಅತ್ಯಂತ ಅಲ್ಪ ಅಂತರದಲ್ಲಿ ಅಪಾಯದಿಂದ ಪಾರಾಗಿದ್ದಾರೆ. ಐದು ಜನರಿಗೆ ಮಾತ್ರ ಲಾಭದ ಗಂಟು ಸಿಕ್ಕಿದೆ. ಈ ಮಧ್ಯೆ ಈ ವರ್ಷ ಚಿತ್ರಗಳು ಗೆದ್ದಿಲ್ಲ, ಹೀರೋಗಳು ಮೆರೆದಿಲ್ಲ, ನಾಯಕಿಯರೂ ಮಿಂಚಲ್ಲಿಲ್ಲ ಆದರೆ ಒಂದು ಡಜನ್ ಸಂಗೀತ ನಿರ್ದೇಶಕರು ಹೊಸ ಸಂಗೀತ ಲೋಕವನ್ನೇ ಸೃಷ್ಟಿಸಿದರು. ಒಂದರ್ಧ ಡಜನ್ ಯುವ ಛಾಯಾಗ್ರಾಹಕರು ಬೆಳ್ಳಿತೆರೆಯಲ್ಲಿ ದೃಶ್ಯಕಾವ್ಯವನ್ನು ಸೃಷ್ಟಿಸಿದರು. ಹಾಗೆಯೇ ಐದು ಜನ ಹೊಸ ಪ್ರತಿಭಾನ್ವಿತ ನಿರ್ದೇಶಕರೂ ಕಾಣಿಸಿಕೊಂಡರು. ಈ ಎಲ್ಲಾ ತಂತ್ರಜ್ಞರ ಆಗಮನ ಚಿತ್ರೋದ್ಯಮವನ್ನು ಮುಂಬರುವ ದಿನಗಳಲ್ಲಿ ಶ್ರೀಮಂತಗೊಳಿಸುವುದರಲ್ಲಿ ಸಂಶಯವೇ ಇಲ್ಲ.



ವರ್ಷದ ಆರಂಭದಲ್ಲಿ ಭಾರೀ ನಿರೀಕ್ಷೆಯಿಂದ ಬಿಡುಗಡೆಗೊಂಡ 'ಗಾಳಿಪಟ' ಜಯಭೇರಿ ಬಾರಿಸಿ ಉತ್ತಮ ಆರಂಭದ ಮುನ್ನುಡಿಯೇನೋ ಬರೆಯಿತು. ಆನಂತರ 'ಗಾಳಿಪಟ'ದ ಹಾದಿಯಲ್ಲೆ ಮುನ್ನುಗ್ಗಿದ್ದು ದರ್ಶನ್ ಅವರ 'ಗಜ'. ಈ ಮಧ್ಯೆ ಮೊದಲ ಇನ್ನಿಂಗ್ಸ್‌ನಲ್ಲೇ ಆಕಸ್ಮಿಕವಾಗಿ ಸೆಂಚುರಿ ಹೊಡೆದ ಆಟಗಾರನಂತೆ 'ದುನಿಯಾ' ಚಿತ್ರದ ಲೂಸ್ ಮಾದ 'ನಂದ ಲವ್ಸ್ ನಂದಿತಾ' ಚಿತ್ರದಲ್ಲಿ ಸಖತ್ತಾಗಿ ಮಿಂಚಿದ. ಚಿತ್ರ ನೂರು ದಿನ ಓಡಿ ನಿರ್ಮಾಪಕರಿಗೆ ಲಾಭತಂದಿತು. ಆದರೆ ಚಿನ್ನದ ಮೊಟ್ಟೆಯಿಡುವ ಕೋಳಿಯೆಂದೇ ಗಾಂಧಿನಗರದವರು ನಂಬಿರುವ ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ 'ಅರಮನೆ' ನೂರು ದಿನ ಓಡಿದರೂ ಅದರಿಂದ ನಿರ್ಮಾಪಕನಿಗೆ 'ಚಿನ್ನದ ಮೊಟ್ಟೆ' ಸಿಗಲಿಲ್ಲ.



ಇದೇ ಸಂದರ್ಭದಲ್ಲಿ 'ಮುಂಗಾರು ಮಳೆ' ಖ್ಯಾತಿಯ ಈ.ಕೃಷ್ಣಪ್ಪ ಅವರ ನಿರ್ಮಾಣದ 'ಮೊಗ್ಗಿನ ಮನಸ್ಸು' ಭಾರೀ ನಿರೀಕ್ಷೆಯೊಂದಿಗೆ ತೆರೆಕಂಡಿತು. ಹೊಸಬರ ಈ ಚಿತ್ರವನ್ನು ವಿಮರ್ಶಕರು ಮೆಚ್ಚಿದರು. ಆದರೆ ಬಿ ಮತ್ತು ಸಿ ಕೇಂದ್ರಗಳ ಪ್ರೇಕ್ಷಕರು '...ಮನಸ್ಸಿ'ಗೆ ಸ್ಪಂದಿಸಲಿಲ್ಲ. ಹೀಗಾಗಿ ಇದು ನೂರು ದಿನ ಪೂರೈಸಿದರೂ ಮಾಸ್ ಚಿತ್ರ ಎನಿಸಿಕೊಳ್ಳಲಿಲ್ಲ. 'ಮೊಗ್ಗಿನ ಮನಸ್ಸು' ಜೊತೆ ಜೊತೆಗೆ ತೆರೆ ಕಂಡ 'ತಾಜ್‌ಮಹಲ್' ಚಿತ್ರ ಪ್ರಚಾರ ಮತ್ತು ಗಿಮಿಕ್‌ಗಳಿಂದ ಗಾಳಿಗೋಪುರ ನಿರ್ಮಿಸಿತ್ತು, ಚಿತ್ರ ಹಿಟ್ ಆಯಿತು. ಆದರೂ ನಿರ್ಮಾಪಕರಿಗೆ ಹೇಳಿಕೊಳ್ಳುವಂತಹ ಲಾಭವೇನು ಗಿಟ್ಟಲಿಲ್ಲ. ಆದರೆ ಈ ಚಿತ್ರದಿಂದ ಚಂದ್ರು ಎಂಬ ಹೊಸ ನಿರ್ದೇಶಕ ಗಾಂಧಿನಗರಕ್ಕೆ ದೊರಕಿದ. ಹಾಗೆಯೇ 'ಎಕ್ಸ್‌ಕ್ಯೂಸ್ ಮೀ' ಚಿತ್ರದ ನಂತರ ಮೂಲೆಗುಂಪಾಗಿದ್ದ ಅಜೇಯ್ ಎಂಬ ನಟ ಮತ್ತೆ ಲೈಮ್‌ಲೈಟ್‌ಗೆ ಬಂದ.






ಇವೆಲ್ಲ ಗೌಜು-ಗದ್ದಲದ ನಡುವೆ ಸುದೀಪ್ 'ಮುಸ್ಸಂಜೆ ಮಾತು' ಚಿತ್ರ ಮುಖಾಂತರ ಇಡೀ ಗಾಂಧಿನಗರವನ್ನು ಬೆಚ್ಚಿ ಬೀಳಿಸಿದರು. ಈ ಚಿತ್ರ ಸದ್ದುಗದ್ದಲವಿಲ್ಲದೆ ಈ ವರ್ಷ ವಿಜಯ ಪತಾಕೆಯನ್ನು ಹಾರಿಸಿತು. ಮಾತ್ರವಲ್ಲ ನಿರ್ಮಾಪಕ ಸುರೇಶ್ ಜೈನ್‌ಗೆ ಹಣದ ಥೈಲಿಯನ್ನು ತಂದುಕೊಟ್ಟಿತು. ಅದಕ್ಕಿಂತ ಮೊದಲು ಸುದೀಪ್ ಅಭಿನಯಿಸಿದ 'ಗೂಳಿ' ಚಿತ್ರ ಕೂಡಾ ಬಾಕ್ಸಾಫೀಸ್‌ನಲ್ಲಿ ಗೆದ್ದು ಸುದೀಪ್ ಮಾಸ್ ಹೀರೋ ಎನಿಸಿಕೊಂಡಿದ್ದರು. ವರ್ಷದ ಕೊನೆಯಲ್ಲಿ ಸುದೀಪ್ ಮತ್ತೊಮ್ಮೆ ಅದೇ ಮ್ಯಾಜಿಕ್ ಮಾಡಿದ್ದಾರೆ. ಅವರು ಅಭಿನಯಿಸಿರುವ 'ಮಸ್ತ್ ಮಜಾ ಮಾಡಿ' ಚಿತ್ರ ಬಾಕ್ಸಾಫೀಸ್‌ನಲ್ಲಿ ಹಣದ ಕೊಳ್ಳೆಹೊಡೆಯುತ್ತಿದೆ. ಈ ಮೂಲಕ ಸೌಂದರ್ಯ ಜಗದೀಶ್ ನಿರ್ಮಾಪಕರಾಗಿ ಇಟ್ಟ ಮೊದಲ ಹೆಜ್ಜೆ ಯಶಸ್ವಿಯಾಗಿದೆ.





ಈ ಮಧ್ಯೆ ಕಳೆದ ಮೂರು ವರ್ಷಗಳಿಂದ ಸೋತು ಸುಣ್ಣವಾಗಿದ್ದ ಉಪೇಂದ್ರ ವರ್ಷದ ಕೊನೆಯಲ್ಲಿ 'ಬುದ್ಧಿವಂತ'ನ ಯಶಸ್ಸಿನಿಂದ ಕಳೆದುಹೋದ ತನ್ನ ತಾರಾವರ್ಚಸ್ಸನ್ನು ಮತ್ತೆ ಪಡೆದಿದ್ದಾರೆ.


ವೀರಸಮರ್ಥ

ಇದರರ್ಥ ಕಳೆದ ವರ್ಷ Unconventional ಹೀರೋಗಳನ್ನು ಸ್ವಾಗತಿಸಿದ ನಮ್ಮ ಪ್ರೇಕ್ಷಕರು ಈ ವರ್ಷ ಮತ್ತೆ Traditional ಹೀರೋಗಳನ್ನು ಮೆಚ್ಚಿದ್ದಾರೆ. ಕಳೆದ ವರ್ಷ ಗಣೇಶ್ ಮತ್ತು ವಿಜಯ್ ನಾಯಕರಾಗಿ ವಿಜೃಂಭಿಸಿದ್ದೇ ತಡ ಈ ವರ್ಷ ಟಿ.ವಿ. ನಿರೂಪಕರು, ರೇಡಿಯೋ ಜಾಕಿಗಳು, ರಿಯಲ್ ಎಸ್ಟೇಟ್ ಏಜೆಂಟರುಗಳು, ಗ್ರಾನೈಟ್ ದಲ್ಲಾಳಿಗಳು ಮುಖಕ್ಕೆ ಬಣ್ಣ ಹಚ್ಚಿ ತಾವು ಗಣೇಶ್ ಅಥವಾ ವಿಜಯ್‌ಗಿಂತ ಯಾವುದರಲ್ಲಿ ಕಮ್ಮಿ? ಎಂದು ಅಗ್ನಿಪರೀಕ್ಷೆಗೆ ಧುಮುಕಿದ್ದರು. ಇವರನ್ನೆಲ್ಲ ಸಾರಾಸಗಟಾಗಿ ತಳ್ಳಿಹಾಕಿದ ಪ್ರೇಕ್ಷಕ ಮಹಾಪ್ರಭು ಮತ್ತೆ ದರ್ಶನ್, ಸುದೀಪ್, ಉಪೇಂದ್ರ.... ಕಡೆ ತಮ್ಮ ಒಲವನ್ನು ವ್ಯಕ್ತಪಡಿಸಿದರು.

ಹಾಗಂತ ಹೊಸಬರು ಗೆದ್ದಿಲ್ಲವೆಂಬರ್ಥವಲ್ಲ, ಹೊಸ ನಾಯಕ-ನಾಯಕಿಯರನ್ನು ತಿರಸ್ಕರಿಸಿದ ಜನ ಹೊಸ ತಂತ್ರಜ್ಞರನ್ನು ತುಂಬು ಹೃದಯದಿಂದ ಸ್ವಾಗತಿಸಿದ್ದಾರೆ. ಉದಾಹರಣೆಗೆ ಸಂಗೀತ ಕ್ಷೇತ್ರದಲ್ಲಿ ರಘುದೀಕ್ಷಿತ್, ಅಭಿಮನ್, ಎಮಿಲ್, ರಿಕಿಕೇಜ್, 'ಮುಸ್ಸಂಜೆ ಮಾತು' ಶ್ರೀಧರ್, ಅನೂಪ್ ಸೀಳೀನ್, 'ಕಾರಂಜಿ' ಖ್ಯಾತಿಯ ವೀರಸಮರ್ಥ್, ಅರ್ಜುನ್... ಇವರೆಲ್ಲರೂ ಸಂಗೀತ ಕ್ಷೇತ್ರದಲ್ಲಿ ಹೊಸ ಅಧ್ಯಾಯವನ್ನೇ ತೆರೆದಿದ್ದಾರೆ. ಹಾಗೆಯೇ ಛಾಯಾಗ್ರಹಣ ಕ್ಷೇತ್ರದಲ್ಲಿ ವಿಷ್ಣುವರ್ಧನ್, ಸಭಾಕುಮಾರ್, ಗುರುಪ್ರಶಾಂತ್ ರೈ..... ಇವರೆಲ್ಲ ಕತ್ತಲು ಬೆಳಕಿನಾಟದಲ್ಲಿ ದೃಶ್ಯಕಾವ್ಯವನ್ನು ರೂಪಿಸಿ ಛಾಯಾಗ್ರಾಹಕರಾಗಿ ಈ ವರ್ಷ ಗಮನ ಸೆಳೆದಿದ್ದಾರೆ. ಹಾಗೆಯೇ ಹೊಸ ನಿರ್ದೇಶಕರೂ ಈ ವರ್ಷ ಜನ್ಮ ತಾಳಿದ್ದಾರೆ. ಅವರಲ್ಲಿ 'ಮುಸ್ಸಂಜೆ ಮಾತು' ಶ್ರೀಧರ್, 'ತಾಜ್‌ಮಹಲ್' ಚಂದ್ರು, 'ನೀನ್ಯಾರೇ' ಸಿಂದೇಶ್, 'ಸತ್ಯ ಇನ್ ಲವ್' ಚಿತ್ರದ ರಾಘವ ಲೋಕಿ, 'ಗಜ' ಚಿತ್ರದ ಮಾದೇಶ್ ಹಾಗೂ 'ಮಸ್ತ್ ಮಜಾ ಮಾಡು' ಚಿತ್ರದ ಅನಂತು ಪ್ರಮುಖರು. ಇವರ ಜೊತೆಗೆ ದೇವದತ್ತ, ಮಗೇಶ್ ಕುಮಾರ್ ಮತ್ತು ನಾಗಶೇಖರ್ ಕೂಡಾ ಈ ವರ್ಷ ನಿರ್ದೇಶಕರಾಗಿ ಗೆದ್ದಿದ್ದಾರೆ.

ಆದರೂ ಆರ್ಥಿಕವಾಗಿ ಕನ್ನಡ ಚಿತ್ರೋದ್ಯಮ ಈ ವರ್ಷ ಸುಮಾರು ಇನ್ನೂರೈವತ್ತು ಕೋಟಿಗಳನ್ನು ಕಳೆದುಕೊಂಡು ಅತ್ಯಂತ ಸಂಕಷ್ಟದ ಹಾದಿಯಲ್ಲಿದೆ. ಏಕೆಂದರೆ ಈ ಮಾಯಾನಗರದಲ್ಲಿ ಏನೇ ಆದರೂ ಯಶಸ್ಸು ಮಾತ್ರ ಲೆಕ್ಕಕ್ಕೆ ಬರುತ್ತದೆ.

■ ಶೆಣೈ



## ಶಿವಣ್ಣ ಎಚ್ಚರ!

ಶಿವರಾಜ್‌ಕುಮಾರ್ ನಟಿಸಿದ ಚಿತ್ರಗಳೆಲ್ಲವೂ ಈ ವರ್ಷ ಮುಗ್ಗರಿಸಿದವು. ಮುಖ್ಯವಾಗಿ ಕೋಟಿಗಟ್ಟಲೇ ಹಣವನ್ನು ಸುರಿದ 'ಮಾದೇಶ', ಅನಂತರ ವರ್ಷದ ಕೊನೆಯಲ್ಲಿ ಬಂದ 'ಪರಮೇಶ ಪಾನ್‌ವಾಲಾ', ಇವೆರಡರ ಮಧ್ಯೆ ಬಂದು ಹೋದ 'ಬಂಧುಬಳಗ' ಎಲ್ಲವೂ ಬಾಕ್ಸಾಫೀಸ್‌ನಲ್ಲಿ ನೆಲಕಚ್ಚಿದವು. ಇದರಲ್ಲಿ ಒಂದು ಭೂಗತ ಜಗತ್ತಿನ ಕಥೆಯಾದರೆ, ಮತ್ತೊಂದು ಸೆಂಟಿಮೆಂಟ್ಸ್, ಮಗದೊಂದು ಕಾಮಿಡಿ. ಮೂರು ತರಹದ ಪಾತ್ರಗಳನ್ನು ಪ್ರೇಕ್ಷಕ ತಿರಸ್ಕರಿಸಿದ್ದಾನೆ ಎಂದರೆ ಶಿವರಾಜ್‌ಕುಮಾರ್ ಪಾತ್ರಗಳ ಆಯ್ಕೆಯಲ್ಲಿ ಎಚ್ಚರಿಕೆ ವಹಿಸಬೇಕಾಗಿದೆ.




## ಪೂಜಾ ವಾಸಿ!

ಕನ್ನಡ ಚಿತ್ರರಂಗದಲ್ಲಿ ನಾಯಕಿಯರ ಜಮಾನವೊಂದಿತ್ತು, ಆಗೆಲ್ಲ ಜಯಂತಿ, ಭಾರತಿ, ಆರತಿ, ಲಕ್ಷ್ಮಿ, ಮಂಜುಳಾ, ಕಲ್ಪನಾ... ಇವರೆಲ್ಲ ಆಯಾ ಕಾಲಕ್ಕೆ ಮೆರೆದಿದ್ದರು. ಆನಂತರ ಪ್ರೇಮಾ, ಭವ್ಯಾ, ಸುಧಾರಾಣಿ ಮಿಂಚಿದ್ದರು. ಮಾಲಾಶ್ರೀ ಬಂದು ಹೀರೋಗಳನ್ನೇ ಅಡ್ಡಡ್ಡ ಮಲಗಿಸಿದ್ದರು. ಮಾಲಾಶ್ರೀ ಬಳಿಕ ಬಂದ ರಕ್ಷಿತಾ-ರಮ್ಯಾ-ರಾಧಿಕಾ ಎಂಬ ಗ್ಲಾಮರಸ್ ನಾಯಕಿಯರು ಹಿಂದಿ ಹುಡುಗಿಯರ ತರ ಬಿಂದಾಸ್ ಆಗಿ ನಟಿಸಿ ಎಲ್ಲರ ಮೆಚ್ಚುಗೆ ಗಳಿಸಿದ್ದರು. ಆದರೆ ಈ ವರ್ಷ ಮಾತ್ರ ಯಾವೊಬ್ಬ ನಾಯಕಿಯೂ ಮಿಂಚಲೇ ಇಲ್ಲ.

ಹೀಗಾಗಿ ಮತ್ತೆ ಪೂಜಾ ಗಾಂಧಿಯೇ ವಾಸಿ ಎಂದು ಅನಿವಾರ್ಯವಾಗಿ ಹೇಳುವ ಪರಿಸ್ಥಿತಿ ಇದೆ.

# 'ನೀನ್ಯಾರೆ' ಸಡನ್ ಡೆತ್!

ಕಳೆದ ವಾರವಷ್ಟೆ ಬಿಡುಗಡೆಗೊಂಡು ಪ್ರೇಕ್ಷಕರು ಮತ್ತು ವಿಮರ್ಶಕರಿಂದ ಭೇಷ್ ಎನಿಸಿಕೊಂಡ 'ನೀನ್ಯಾರೆ' ಚಿತ್ರದ ನಿರ್ಮಾಪಕ ವರದಾ ರೆಡ್ಡಿ ತನ್ನ ಮೊಬೈಲ್ ಫೋನ್‌ಅನ್ನು ಸ್ವಿಚ್ ಆಫ್ ಮಾಡಿಕೊಂಡು ಯಾರಿಗೂ ಹೇಳದೆ ಕೇಳದೆ ಕಣ್ಮರೆಯಾಗಿದ್ದಾರೆ.


ವರದರೆಡ್ಡಿ

ಚಿತ್ರ ಬಿಡುಗಡೆಗೆ ಮುನ್ನ ಒಮ್ಮೆ ಆತ್ಮಹತ್ಯೆಗೂ ಯತ್ನಿಸಿದ್ದ ವರದರೆಡ್ಡಿ ಈಗ ಕಣ್ಮರೆಯಾಗಿರುವುದು ಕೆಲವರನ್ನು ಗಾಬರಿಗೀಡುಮಾಡಿದೆ. ಚಿತ್ರ ಬಿಡುಗಡೆಯೂ ಆಯಿತು, ಎಲ್ಲೆಡೆಯಿಂದ ಒಳ್ಳೆಯ ಪ್ರತಿಕ್ರಿಯೆಯೂ ಬಂತು ಎಂದ ಮೇಲೆ ನಿರ್ಮಾಪಕ ಯಾಕೆ ಕಣ್ಮರೆಯಾಗಬೇಕು ಎಂಬ ಪ್ರಶ್ನೆ ಎಲ್ಲರಲ್ಲೂ ಮೂಡುವುದು ಸಹಜ. ಆದರೆ ಇಲ್ಲಿ ಆಗಿರುವುದೇ ಬೇರೆ.

ಚಿತ್ರವೇನೋ ಬಿಡುಗಡೆಯಾಯಿತು. ನಿರ್ದೇಶಕ ಶಿಂಧೇಶ್‌ರನ್ನು ಎಲ್ಲರೂ ಮುಕ್ತ ಕಂಠದಿಂದ ಹೊಗಳಿದರು. ಆದರೆ ಯಾವುದೇ ಸೂಚನೆಗಳಿಲ್ಲದೆ, ಪ್ರಚಾರವೂ ಇಲ್ಲದೆ ದಿಢೀರನೆ ಚಿತ್ರ ಬಿಡುಗಡೆಗೊಂಡಿದ್ದರಿಂದ ಪ್ರೇಕ್ಷಕರು ಥಿಯೇಟರಿಗೆ ಬರುವುದು ಸ್ವಲ್ಪ ತಡವಾಗುತ್ತಿದೆ. ಆದರೆ ಅಲ್ಲಿತನಕ ಥಿಯೇಟರಿನ ಮಾಲೀಕರು ಬಿಡಬೇಕಲ್ಲಾ?


ಛೇಂಬರ್‌ನ ನಿಯಮದಂತೆ ಚಿತ್ರವೊಂದರ ಮೊದಲು ಮೂರು ದಿನದ ಕಲೆಕ್ಷನ್ ಎರಡು ಲಕ್ಷದ ಹತ್ತು ಸಾವಿರ ಮೀರಿದರೆ ಥಿಯೇಟರಿನಿಂದ ಚಿತ್ರವನ್ನು ತೆಗೆಯುವಂತಿಲ್ಲ, 'ನೀನ್ಯಾರೆ' ಕೂಡಾ ಮೂರು ದಿನಕ್ಕೆ ಎರಡು ಲಕ್ಷದ ಇಪ್ಪತ್ತನಾಲ್ಕು ಸಾವಿರ ಕಲೆಕ್ಷನ್‌ಅನ್ನು ಪಡೆದಿತ್ತು, ಆದರೆ ಸಾಗರ್ ಥಿಯೇಟರಿನವರು ಮೊದಲೇ ಎರಡು ಲಕ್ಷದ ಐವತ್ತೈದು ಸಾವಿರಕ್ಕೆ ಅಗ್ರಿಮೆಂಟ್ ಮಾಡಿಕೊಂಡಿದ್ದರಿಂದ ಚಿತ್ರವನ್ನು ತೆಗೆದುಹಾಕಿದರು. ಸಾಗರ್ ಥಿಯೇಟರಿನವರು ಛೇಂಬರ್ ನಿಯಮವನ್ನು ಉಲ್ಲಂಘಿಸಿರುವುದು ನಿಜವಾದರೂ ಅವರು ಹೇಳುವ ಮಾತೇ ಬೇರೆ.

ಸಾಗರ್ ಚಿತ್ರಮಂದಿರದ ರಾಜೇಶ್ ಪಾಟೀಲ್ ಹೇಳುವ ಪ್ರಕಾರ ಇತ್ತೀಚೆಗೆ ಬಂದ 'ಕೃಷ್ಣ', 'ಮೊಗ್ಗಿನ ಮನಸ್ಸು' ಮತ್ತು 'ಸ್ಲಂ ಬಾಲ' ಚಿತ್ರಗಳಿಗೆ ಕಲೆಕ್ಷನ್ ಇಲ್ಲದಿದ್ದರೂ ಬರೀ ಡಬ್ ಶೀಟ್ ತೋರಿಸಿ ಚಿತ್ರವನ್ನು ಓಡಿಸಿದ್ದರಂತೆ. ಅದಕ್ಕೆ ಅವರು ರೆಕಾರ್ಡುಗಳನ್ನೂ ಸಾಕ್ಷಿಯಾಗಿ ತೋರಿಸುತ್ತಾರೆ. ಹಣವನ್ನು ಪಡೆಯುವ ಹಾಗೂ ಕೊಡುವ ವಿಚಾರದಲ್ಲಿ ಮಹಾನ್ ಶಿಸ್ತಿನ ಮನುಷ್ಯನಾದ ರಾಜೇಶ್ ಪಟೇಲ್ ಇದೆಲ್ಲದರಿಂದ ರೋಸಿ ಹೋಗಿ "ಇನ್ನು ಮುಂದೆ ಕನ್ನಡ ಚಿತ್ರಗಳನ್ನು ನನ್ನ ಚಿತ್ರಮಂದಿರದಲ್ಲಿ ಪ್ರದರ್ಶಿಸುವುದೇ ಇಲ್ಲ" ಎಂದು ಗುಡುಗುತ್ತಿದ್ದಾರೆ.


ಗುಬ್ಬಿ

### ಹಾಗೆ ಸುಮ್ಮನೆಯೂ ಕಾರಣ!

'ನೀನ್ಯಾರೆ' ಚಿತ್ರ ಬಿಡುಗಡೆಗೊಂಡ ದಿನವೇ ಪತ್ರಿಕೆಗಳಿಗೆ ಜಾಹಿರಾತು ನೀಡಿದ 'ಹಾಗೆ ಸುಮ್ಮನೆ' ಚಿತ್ರದವರು 'ಮುಂದಿನ ವಾರ ಸಾಗರ್ ಚಿತ್ರಮಂದಿರದಲ್ಲಿ ಅದ್ದೂರಿ ಆರಂಭ' ಎಂದು ಅನೌನ್ಸ್ ಮಾಡಿದ್ದರು. ಈ ಜಾಹಿರಾತಿನಿಂದಾಗಿ ಸಹಜವಾಗಿಯೇ ಪ್ರೇಕ್ಷಕರಲ್ಲಿ 'ನೀನ್ಯಾರೆ' ಚಿತ್ರ 'ಒಂದು ವಾರದ ಸಿನಿಮಾ' ಎಂಬಂತೆ ಭಾಸವಾಗಿತ್ತು. ಆದ್ದರಿಂದ 'ಹಾಗೆ ಸುಮ್ಮನೆ' ತಂಡದ ಈ ಕುತಂತ್ರವನ್ನು ವಿರೋಧಿಸಿ 'ನೀನ್ಯಾರೆ' ತಂಡ ಚೇಂಬರ್ ಮೆಟ್ಟಿಲನ್ನು ಏರಿತ್ತು. ಆಗ ಈ ಪ್ರೀತಮ್ ಗುಬ್ಬಿ "ಇದು ಪತ್ರಿಕೆಯವರ ಅಚಾತುರ್ಯದಿಂದಾದ ತಪ್ಪು, ದಯವಿಟ್ಟು ಕ್ಷಮಿಸಿ" ಎಂದು 'ಹಾಗೆ ಸುಮ್ಮನೆ' ಪತ್ರ ಬರೆದು ಕೈತೊಳೆದುಕೊಂಡಿದ್ದ. ಪತ್ರಿಕೆಯವರು ಸಿನಿಮಾದವರು ನೀಡಿದ ಜಾಹಿರಾತನ್ನು ಯಥಾವತ್ತು ಪ್ರಿಂಟು ಮಾಡುತ್ತಾರೆಯೇ ಹೊರತು ಯಾವ ಬದಲಾವಣೆಯನ್ನೂ ಮಾಡುವುದಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ಸತ್ಯ. ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ಗುಬ್ಬಿ ಇಂತಹ ಕಾಗೆ ಹಾರಿಸಿದ್ದ.


ಶಿಂದೇಶ

ಆದರೆ ಗುಬ್ಬಿಯ ಬ್ರಹ್ಮಾಸ್ತ್ರದಿಂದ 'ನೀನ್ಯಾರೆ' ಮಾತ್ರ ದಿಕ್ಕಿಲ್ಲದಂತೆ ತತ್ತರಿಸಿ ಹೋಯಿತು. ಮುಖ್ಯ ಚಿತ್ರಮಂದಿರದಿಂದಲೇ ಸಿನಿಮಾ ಎತ್ತಂಗಡಿಯಾದ ಬೇಜಾರಿಗೆ ಬಿದ್ದ ನಿರ್ಮಾಪಕ ವರದರೆಡ್ಡಿ ಯಾರ ಕೈಗೂ ಸಿಗದಂತೆ ಗಾಯಬ್ ಆಗಿದ್ದಾರೆ. ಸದ್ಯ ಥಿಯೇಟರಿನ ಬಾಡಿಗೆ ಕಟ್ಟಲೂ ಕಾಸಿಲ್ಲದ ನಿರ್ದೇಶಕ ಶಿಂಧೇಶೆಯೇ ಮುಂದೆ ನಿಂತು ಎಲ್ಲ ಥಿಯೇಟರುಗಳಿಂದ ಚಿತ್ರದ ಪ್ರಿಂಟುಗಳನ್ನು ವಾಪಾಸು ತರುತ್ತಿದ್ದಾರೆ.

ಹೀಗೆ 'ಹಾಗೆ ಸುಮ್ಮನೆ' ತಂಡದವರು ಇತ್ತ ಬದುಕುವವರನ್ನೂ ಬದುಕಿಸಲಿಲ್ಲ, ಅತ್ತ ತಾವೂ ಬದುಕಲಿಲ್ಲ. ಈ ಎಲ್ಲ ಜಂಜಾಟದ ಮಧ್ಯೆ ಬಡವಾಗಿರುವುದು ಮಾತ್ರ ಕ್ರಿಯಾಶೀಲ ನಿರ್ದೇಶಕ ಶಿಂಧೇಶೆ.

■ ಅರುಣ್ .ಜಿ

R B P LANKESH, Kannada Weekly Price Rs. 12/- 07-01-2009 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore




## ಬಾಲಿವುಡ್‌ಗೆ ಹಾರುತ್ತಾನಾ ರವಿಚೇತನ್?

ನಟ ಚೇತನ್ ಬಾಲಿವುಡ್‌ಗೆ ಹಾರಿಹೋಗಲು ಸಜ್ಜಾಗಿದ್ದಾನೆ. ಚೇತನ್ ಎಂದಾಕ್ಷಣ 'ಆ ದಿನಗಳು' ಚೇತನ್ ಎಂದುಕೊಳ್ಳಬೇಡಿ! ಈತ ರವಿಚೇತನ್.

ಉತ್ತರ ಕರ್ನಾಟಕದ ಮುಧೋಳದಿಂದ ಬಂದು 'ಕೋಟಿಗೊಬ್ಬ' ಚಿತ್ರದ ಮುಖಾಂತರ ಚಿತ್ರರಂಗಕ್ಕೆ ಕಾಲಿಟ್ಟು ಮೂವತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿರುವ, 'ಮಂದಾಕಿನಿ' ಚಿತ್ರದ ಮೂಲಕ ನಾಯಕ ನಟನೂ ಆದ ರವಿಚೇತನ್ ಈಗ ಜೋ ಸೈಮನ್ ಮಗ ಜಿತೇಂದ್ರ ನಿರ್ದೇಶಿಸುತ್ತಿರುವ 'ಮನಸು ಕೊಟ್ಟಾಯ್ತು' ಚಿತ್ರದಲ್ಲೂ ಪೂರ್ಣ ಪ್ರಮಾಣದ ನಾಯಕ ನಟನಾಗಿದ್ದಾನೆ. ಜೊತೆಗೆ ಆನೇಕಲ್ ಬಾಲರಾಜ್ ಮಗ ಸಂತೋಷ್ ನಟಿಸುತ್ತಿರುವ ಮತ್ತೊಂದು ಚಿತ್ರದಲ್ಲೂ ಚೇತನ್ ನಾಯಕ.

ಈ ಮಧ್ಯೆ ಪ್ರೇಕ್ಷಕರಿಗೆ ಕನ್‌ಫ್ಯೂಸ್ ಆಗಬಾರದು ಎಂಬ ಕಾರಣಕ್ಕೆ ಚೇತನ್ ತನ್ನ ಹೆಸರನ್ನು ರವಿಚೇತನ್ ಎಂದು ಬದಲಾಯಿಸಿಕೊಂಡಿದ್ದಾನೆ. ಹೆಸರು ಬದಲಾದ ನಂತರ ಅದೃಷ್ಟವೂ ಬದಲಾಗಬಹುದೆಂಬ ನಂಬಿಕೆ ಕೂಡ ಆತನಿಗಿದೆ.



ಅಮಿರ್ ಖಾನ್ ನಟಿಸಲಿರುವ ಹಿಂದಿ ಚಿತ್ರ 'ಥ್ರೀ ಈಡಿಯಟ್ಸ್' ಚಿತ್ರದಲ್ಲೂ ಚೇತನ್ ಖಳನಾಯಕನಾಗಿ ಆಯ್ಕೆಯಾಗುವ ಸಾಧ್ಯತೆಗಳಿವೆ. ಬೆಂಗಳೂರಿನಲ್ಲಿ ನಡೆದ ಆಡಿಷನ್‌ನಲ್ಲಿ ಪಾಲ್ಗೊಂಡಿದ್ದ ಚೇತನ್ ಅಮೀರ್‌ನ ಕರೆಗಾಗಿ ಕಾಯುತ್ತಾ ಬಾಲಿವುಡ್‌ನತ್ತ ಮುಖ ಮಾಡಿ ನಿಂತಿದ್ದಾನೆ. ಈ ಕಾರಣಕ್ಕೆ ಈತ ಸಾವಿರಾರು ರೂಪಾಯಿ ಖರ್ಚು ಮಾಡಿ ಮೆಡಿಸಿನ್‌ಗಳನ್ನು ತೆಗೆದುಕೊಂಡು ಬಾಡಿ ಬಿಲ್ಡ್ ಮಾಡಲೂ ಆರಂಭಿಸಿದ್ದಾರೆ. "ಕನ್ನಡದವರು ನನ್ನಂಥ ಕಲಾವಿದರನ್ನು ಸರಿಯಾಗಿ ಬಳಸಿಕೊಳ್ಳುವುದಿಲ್ಲ" ಎಂದು ಸದಾ ಕೊರಗುವ ರವಿಚೇತನ್‌ನನ್ನು ಬಾಲಿವುಡ್ ಮಂದಿಯಾದರೂ ಬಿಗಿದಪ್ಪಲಿ... ■

# ಗುಬ್ಬಿ ಮಾಡಿದ ಗಬ್ಬು ಸಿನಿಮಾ!



ಕಳೆದ ವಾರವಷ್ಟೇ 'ಲಂಕೇಶ್' ಮೂರು ಜನ ನಿರೀಕ್ಷೆಯ ನಿರ್ದೇಶಕರ ಬಗ್ಗೆ ಬರೆದಿತ್ತು. ಅವರುಗಳಲ್ಲಿ ಅಪಾರ ನಿರೀಕ್ಷೆ ಹುಟ್ಟಿಸಿದ್ದ ಪ್ರೀತಮ್ ಗುಬ್ಬಿ ಆರಂಭದಲ್ಲೇ ನಿರಾಸೆ ಮೂಡಿಸಿದ್ದಾರೆ. ಕಥೆಗಾರನಾಗಿ ಪ್ರವರ್ಧಮಾನಕ್ಕೆ ಬಂದ ಪ್ರೀತಮ್ ತನ್ನ ಚೊಚ್ಚಲ ನಿರ್ದೇಶನದ ಚಿತ್ರದಲ್ಲಿ ಕಥೆಯ ವಿಭಾಗದಲ್ಲೇ ಎಡವಿ ಮಕಾಡೆ ಬಿದ್ದಿರುವುದು 2008ರ ಅಂತ್ಯದ ದುರಂತವಾಗಿದೆ. ಆತನ ಮಾತನ್ನು ನಂಬಿ 'ಯಾರೂ ಮಾಡದ ಸಿನಿಮಾ ಮಾಡುತ್ತಾನಂತೆ ಈ ಗುಬ್ಬಿ' ಎಂದು ಕಾದು ಕೂತವರಿಗೆ ಮುಖದ ಮೇಲೆ ಹೊಡೆದಂತಿದೆ 'ಹಾಗೆ ಸುಮ್ಮನೆ'!

### ಗುಬ್ಬೀ ಇದೇನಿದು ಗಬ್ಬು?

'ಹಾಗೆ ಸುಮ್ಮನೆ' ನೋಡಿದ ನಂತರ ಎಲ್ಲರನ್ನು ಕಾಡುವ ಪ್ರಶ್ನೆ 'ನಿಜವಾಗಲೂ ಪ್ರೀತಮ್ ಕಥೆಗಾರನೇ?' ಎಂಬುದು. ಮಾತ್ರವಲ್ಲ, ಯೋಗರಾಜ್ ಭಟ್ ಇಲ್ಲದಿದ್ದರೆ 'ಮುಂಗಾರು ಮಳೆ' ಏನಾಗುತ್ತಿತ್ತು ಎಂದೂ ಈಗ ಎಲ್ಲರೂ ಕೇಳುತ್ತಿದ್ದಾರೆ.


### ಕೀಳುಮಟ್ಟದ ಚಿತ್ರಕಥೆ

ಈ ಚಿತ್ರದಲ್ಲಿ ನಾಯಕ ಆರಂಭದಿಂದ ಕೊನೆಯವರೆಗೂ ಸರಾಗವಾಗಿ ಸತ್ಯದ ತಲೆಯ ಮೇಲೆ ಹೊಡೆದಂತೆ ಸುಳ್ಳು ಹೇಳುತ್ತಿರುತ್ತಾನೆ. ನಿಜವಾದ ಪ್ರೀತಿಯನ್ನು ದಕ್ಕಿಸಿಕೊಳ್ಳಲು ಆತ ಮುಂಖಾನುಮುಂಖವಾಗಿ ಒಳುಬಡುವುದು ಕಥೆಯಲ್ಲಿನ ಅತಾರ್ಕಿಕವಾದ. ತನ್ನ ಗುರು ಯೋಗರಾಜ ಭಟ್ಟರು ಗಣೇಶನ ಬಾಯಲ್ಲಿ ಸುಳ್ಳು ಮಾತಾಡಿಸಿ 'ಗಾಳಿಪಟ'ವನ್ನು ಕೆಡಿಸಿದ್ದರು. ಈಗ ಶಿಷ್ಯ ಗುಬ್ಬಿ ಕೂಡ ತನ್ನ ನಾಯಕನ ಬಾಯಲ್ಲಿ ಬೂಸಿ ಬಿಡಿಸಿ ಗಬ್ಬೆಬ್ಬಿಸಿದ್ದಾನೆ.



ಇನ್ನು ಚಿತ್ರಕ್ಕೆ ಆಗತ್ಯವಾದ ಕಂಟ್ಯೂನಿಟಿಯ ಬಗ್ಗೆಯಾಗಲಿ, ದೃಶ್ಯವನ್ನು ಸೃಜಗೊಳಿಸುವ ಕಲೆಯಾಗಲಿ ಗುಬ್ಬಿಯ ತಲೆಯಲ್ಲಿ ಎಳ್ಳಷ್ಟೂ ಇದ್ದಂತಿಲ್ಲ. ಉದಾಹರಣೆಗೆ, ದೃಶ್ಯವೊಂದರಲ್ಲಿ ಆಗತಾನೆ ಪರಿಚಯಗೊಂಡ ನಾಯಕಿ ಗಿಟಾರು ಹಿಡಿದು ಅಭ್ಯಾಸವೇ ಇಲ್ಲದ ನಾಯಕನಿಗೆ ಕೇವಲ ಒಂದೇ ನಿಮಿಷದಲ್ಲಿ ಆತನನ್ನು ಅಪ್ಪಿಕೊಂಡು ಟ್ಯೂನ್ ನುಡಿಸುವುದನ್ನು ಹೇಳಿಕೊಡುತ್ತಾಳೆ. ಮಾತ್ರವಲ್ಲ ಆತ ಯಾರೆಂದು ಗೊತ್ತಿಲ್ಲದಿದ್ದರೂ ತನ್ನ ಗಿಟಾರನ್ನು ಆತನಿಗೆ ದಾನಮಾಡುತ್ತಾಳೆ. ಇನ್ನೊಂದು ದೃಶ್ಯದಲ್ಲಿ ಶ್ರೀಮಂತ ವ್ಯಕ್ತಿಯೊಬ್ಬ ನಾಯಕ ಹೇಳುವ ಸುಳ್ಳು ಮಾತಿಗೆ ಮರುಳಾಗಿ ತನ್ನ ಕತ್ತಿನಲ್ಲಿ ತೂಗುತ್ತಿರುವ ಸರಪಳಿಯಂಥ ಬಂಗಾರದ ಒಡವೆಯನ್ನು ದಾನ ಮಾಡಿಬಿಡುತ್ತಾನೆ. ಭಿಕ್ಷುಕನಿಗೂ ಐದು ರೂಪಾಯಿ ಕೊಡಲು ಹಿಂದುಮುಂದು ನೋಡುವ ಈ ಕಾಲದಲ್ಲಿ ಗುಬ್ಬಿಯ ಈ 'ಧಾರಾಳ'ವಾದ ಕಲ್ಪನೆ ಹಾಸ್ಯಾಸ್ಪದವಾಗಿದೆ. ಇದನ್ನಾದರೂ ಕ್ಷಮಿಸಬಹುದು ಆದರೆ ಇನ್ನೊಂದು ದೃಶ್ಯದಲ್ಲಿ ನಾಯಕ ಕಿರಣ್ ನೋಪಾರ್ಕಿಂಗ್‌ನಲ್ಲಿದ್ದ ಕಾರನ್ನು ಬಿಡಿಸಿಕೊಳ್ಳಲು ಸರ್ಕಲ್ ಇನ್ಸ್‌ಪೆಕ್ಟರ್ ಬಳಿ ಗೋಗರೆಯುವುದಂತೂ ನಗೆ ಉಕ್ಕಿಸುತ್ತದೆ. ನಿರ್ದೇಶಕ ಗುಬ್ಬಿಗೆ ಟ್ರಾಫಿಕ್ ಪೊಲೀಸರಿಗೂ ಕಳ್ಳರನ್ನು ಹಿಡಿಯುವ ಕ್ರೈಂ ಬ್ರಾಂಚ್‌ನವರಿಗೂ ವ್ಯತ್ಯಾಸ ಗೊತ್ತಿರುವಂತೆ ಕಾಣುತ್ತಿಲ್ಲ..... ಹೀಗೆ ತಪ್ಪುಗಳನ್ನು ಹುಡುಕುತ್ತಾ ಹೋದರೆ ಹೆಜ್ಜೆಗೊಂದರಂತೆ ನೂರಾರು ತಪ್ಪುಗಳು ಗೋಚರಿಸುತ್ತವೆ. ಮಾತ್ರವಲ್ಲ, ಇವೆಲ್ಲ ಆಭಾಸಗಳು ಗುಬ್ಬಿಯ ಅರೆಜ್ಞಾನವನ್ನು ಎತ್ತಿತೋರಿಸುತ್ತವೆ.






### ನಾಯಕನೇ ವೀಕು!

ನೋಡಲು ಬಿಳಿ ಜಿರಲೆಯಂತಿರುವ ನಾಯಕನಟ ಕಿರಣ್ ಆರಂಭದಿಂದ ಅಂತ್ಯದವರೆಗೂ ಒಂದೇ ತೆರನಾದ ಎಕ್ಸ್‌ಪ್ರೆಶನ್‌ನಿಂದ ಭಯಂಕರ ಬೋರು ಹೊಡೆಸುತ್ತಾನೆ. ಧ್ವನಿಯಲ್ಲಿ ಏರಿಳಿತವಾಗಲಿ, ಮುಖಭಾವಗಳ ಬದಲಾವಣೆಯಾಗಲಿ... ಯಾವುದೂ ಈ ಹುಡುಗನಿಗೆ ತಿಳಿದಿರುವಂತಿಲ್ಲ. 'ಮುಂಗಾರು ಮಳೆ'ಯಲ್ಲಿ ಗಣೇಶ ಮಾಡಿದ್ದ ನಟನೆಯನ್ನೇ ಕಾಪಿ ಹೊಡೆದಿದ್ದಾನಾದರೂ ಅದೂ ವಿಫಲವಾಗಿದೆ.

ಇರೋದರಲ್ಲಿ ಚಿತ್ರವನ್ನು ಸಹ್ಯಗೊಳಿಸುವುದು ಮನೋಮೂರ್ತಿಯ ಮ್ಯೂಜಿಕ್ಕು ಮತ್ತು ಜಯಂತ್ ಕಾಯ್ಕಿಣಿಯ ಲಿರಿಕ್ಕು. ಮನೋ ಮೂರ್ತಿ ಹಿಂದಿನ ಚಿತ್ರಗಳಿಗೆ ತಾವೇ ನೀಡಿದ ಟ್ಯೂನುಗಳನ್ನೇ ಸ್ವಲ್ಪ ಪಾಲಿಶ್ ಮಾಡಿ ನೀಡಿದ್ದಾರೆ ಎನಿಸಿದರೂ ಕೇಳಲು ಮೋಸವಿಲ್ಲ. ಕಾಯ್ಕಿಣಿ ಎಂದಿನಂತೆ ಲವಲವಿಕೆಯ ಸಾಲುಗಳನ್ನು ನೀಡಿ ತನ್ನ ಪಾಲಿನ ಮಾರ್ಕು ಗಿಟ್ಟಿಸಿಕೊಂಡಿದ್ದಾರೆ. 'ಮುಂಗಾರು ಮಳೆ'ಯ ಅದ್ಭುತ ಛಾಯಾಗ್ರಹಣದಿಂದ ಇಡೀ ಚಿತ್ರರಂಗದ ಗಮನವನ್ನು ತನ್ನತ್ತ ಸೆಳೆದಿದ್ದ ಕೃಷ್ಣ ಕೂಡಾ ಹಾಡುಗಳನ್ನು ಬಿಟ್ಟರೆ ಬೇರೆಲ್ಲೂ ಗಮನ ಸೆಳೆಯುವ ಕೆಲಸ ಮಾಡಿಲ್ಲ. ಇದೂ ಕೂಡ ಗುಬ್ಬಿಯ ರಾಂಗ್ ಗೈಡೆನ್ಸ್‌ನಿಂದ ಆದ ಪ್ರಮಾದವಿರಬೇಕು.

ಒಟ್ಟಿನಲ್ಲಿ ಸಂಸಾರದ ಜಂಜಾಟದಿಂದ ನಿದ್ರೆ ಸಿಗದಿರುವವರು, ಕೆಲಸದಲ್ಲಿ ದಣಿದವರು ಕತ್ತಲ ಥಿಯೇಟರಿನ ತಂಪು ಗಾಳಿಯಲ್ಲಿ 'ಹಾಗೆ ಸುಮ್ಮನೆ' ಮನೋಮೂರ್ತಿಯ ಹಾಯಾದ ಹಿನ್ನೆಲೆ ಸಂಗೀತ ಕೇಳಿಸಿಕೊಂಡು ಎರಡೂವರೆ ತಾಸು ಗಡದ್ದಾಗಿ ನಿದ್ರಿಸಬಹುದು ಎಂಬಷ್ಟರಮಟ್ಟಿಗೆ ಸಿನಿಮಾದಲ್ಲಿ ಮೋಸವಿಲ್ಲ!

### ಹರ್ಷ ಹೇಳಿದ್ದೇ ಸರಿನಾ?

ಹಿಂದೆ 'ಗೆಳೆಯ' ಚಿತ್ರ ಸೋತಾಗ ಅದರ ನಿರ್ದೇಶಕ ಹರ್ಷ "ಪ್ರೀತಮ್‌ನ ಕಥೆಯನ್ನು ನಂಬಿ ನಾನು ಕೆಟ್ಟೆ" ಎಂದು ನೇರವಾಗಿ ಆರೋಪಿಸಿದ್ದರು. ಆದರೆ ಮಾಧ್ಯಮದವರು ಹರ್ಷನನ್ನೇ ಟೀಕಿಸಿದ್ದರು. 'ಹಾಗೆ ಸುಮ್ಮನೆ' ನೋಡಿದ ಸಮಸ್ತರೂ ಈಗ ಹರ್ಷನ ಪರವಾಗಿ ನಿಂತು ಗುಬ್ಬಿಯ ಕಡೆ ಗುರಾಯಿಸುವಂತಾಗಿದೆ. ಈತನ ಕಥೆಗೆ ಹೆದರಿಯೇ ರಾಕ್‌ಲೈನ್ ಮತ್ತು ಗಣೇಶ 'ಮುಂಗಾರು ಮಳೆ ಭಾಗ-2'ರಿಂದ ತಪ್ಪಿಸಿಕೊಂಡರು ಎಂಬ ಮಾತೂ ಈಗ ಪುಷ್ಟಿಪಡೆಯುತ್ತಿದೆ.



ನಿರ್ಮಾಪಕರ ಅಮೂಲ್ಯವಾದ ಹಣಕ್ಕೆ ಹೊಗೆ ಹಾಕಿಸುವ ಬದಲು ದೃಶ್ಯ ಮಾಧ್ಯಮದಲ್ಲಿ ತಾನಿನ್ನೂ ಸಾಕಷ್ಟು ಪಳಗಬೇಕಾಗಿದೆ ಎಂಬುದನ್ನು ಗುಬ್ಬಿ ಅರಿತು ಇನ್ನೊಂದಷ್ಟು ದಿನ ಸಿನಿಮಾದ ಅನುಭವ ಪಡೆದು ಮರಳಿದರೆ ಆತನಿಗೇ ಒಳ್ಳೆಯದು.

ಇಲ್ಲದಿದ್ದರೆ ಪ್ರೀತಮ್ ಗುಬ್ಬಿ ಎಂಬ ಈ ಮಹಾನ್ ಕಥೆಗಾರ 'ಹಾಗೆ ಸುಮ್ಮನೆ' ಕೂತಲ್ಲೇ ಕೂತು ಗಬ್ಬು ಕಥೆಗಳನ್ನು ಗೀಚಬೇಕಾಗುತ್ತದೆ.

■ಅರುಣ್



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main...